ರಘುವಂಶ

ಲೇಖಕ:
ಕೆ. ಗೋಪಾಲಕೃಷ್ಣ ಶಾಸ್ತ್ರೀ

ಪ್ರಕಾಶಕರು:
ದಿ ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಡ್ ಏಜನ್ಸೀಸ್
ಕಾರ್ನಾಡ್ ಸದಾಶಿವರಾವ್ ರೋಡ್
ಮಂಗಳೂರು

ಪ್ರಥಮ ಮುದ್ರಣ : 1951

ದ್ವಿತೀಯ ಮುದ್ರಣ : 1952

ಬೆಲೆ ಹದಿನೈದು ಆಣೆ

ಮುದ್ರಕರು:
ಉದಯ ಪ್ರಿಂಟರಿ ಎಂಡ್ ಪಬ್ಲಿಕೇಶನ್ಸ್ ಲಿಮಿಟೆಡ್
ಮಂಗಳೂರು

ಮುನ್ನುಡಿ

ಸಂಸ್ಕೃತದ ಮಹಾಕಾವ್ಯವರ್ಗಕ್ಕೆ ಎರಡು ಮನೋಜ್ಞವಾದ ಕಾಣಿಕೆಗಳನ್ನಿತ್ತ ಕಾಲಿದಾಸನನ್ನು ಅನುಸರಿಸದ ಕವಿಗಳಿಲ್ಲ; ಕೊಂಡಾಡದ ವಿಮರ್ಶಕರಿಲ್ಲ. ವೈದರ್ಭಮಾರ್ಗದ ಗುರುತಾಪ್ರತೀತಿ ಅವನಿಗೆ. ಅವನದು ನಡೆದುದೆ ಮಾರ್ಗ. "ವಾಗರ್ಥಪ್ರತಿಪತ್ತಿ"ಗಾಗಿ ವಾಕ್-ಅರ್ಥಗಳನ್ನು ಹದವಾಗಿ ಹುದುಗೊಳಿಸಿ ಕಾವ್ಯದ ಆಂತರಿಕ ಬಾಹ್ಯ ಶೋಭೆಗೆ ಬೇಕಾದ ಸಕಲ ಸಂಸ್ಕಾರಗಳನ್ನೂ ಕೊಟ್ಟು ಕಾವ್ಯ ನಾಟಕಗಳನ್ನು ರಚಿಸಿ, ಲೋಕದ ಸಹೃದಯರ ಹೃದಯವನ್ನು ಸೂರೆಮಾಡಿದ ಈ ಕವಿಯ ರಸಸಾಹಿತ್ಯವನ್ನು ಅಸ್ವಾದಿಸದವರಿಗೆ ಕವಿತಾಲೋಕವೊಂದು ಅಗೋಚರವಾದಂತೆಯೇ ಸರಿ.

ಕನ್ನಡದಲ್ಲಿ ಈತನ ಕಾವ್ಯನಾಟಕಗಳ ಅರ್ಥಾನುವಾದಗಳು ಬಹಳ ಆಗಿವೆ. ಭಾವಾನುವಾದಗಳ ಪ್ರಯತ್ನವೂ ನಡೆದಿದೆ. ಆದರೆ ಎಷ್ಟು ಭಾಷಾಂತರಗಳಲ್ಲಿ ಕವಿಹೃದಯವು ಇಳಿದು ಬಂದಿದೆ, ಎನ್ನುವುದನ್ನು ವಿಮರ್ಶಕರೇ ಹೇಳಬೇಕಷ್ಟೆ.

ಪ್ರಕೃತದ ಲೇಖಕರಾದ ಶ್ರೀ ಗೋಪಾಲಕೃಷ್ಣ ಶಾಸ್ತ್ರಿಗಳು ಸಂಸ್ಕೃತ ಕನ್ನಡಗಳಲ್ಲಿ ಪಂಡಿತರು. ಸಂಸ್ಕೃತ ಭಾಷಾವಿದರಿಗೆ ಮಾತ್ರ ತಿಳಿದು ಕನ್ನಡಿಗರಿಗೆ ಅಲಭ್ಯವಾದ ರಘುವಂಶ ಮಹಾಕಾವ್ಯದ ಸಾರವನ್ನು ತಿಳಿಗನ್ನಡ ಗದ್ಯದ ಮೂಲಕ ಕನ್ನಡಿಗರಿಗೆ ಆಪೋಶನ ಮಾಡಿಸಲು ಯತ್ನಿಸಿದ್ದಾರೆ. "ಅನುವಾದವು ಪದ್ಯದಲ್ಲಿರಬೇಕಾಗಿತ್ತಲ್ಲವೆ?" ಎನ್ನುವ ಪ್ರಶ್ನೆ ಸಹಜ. ಕಾವ್ಯದ ರೂಪವೇನಿದ್ದರೂ ಭಾವ ಮುಖ್ಯ. ಕಾಳಿದಾಸನ ರಸಭಂಗಿಯನ್ನು ಯಥಾರೂಪವಾಗಿ ಕನ್ನಡದಲ್ಲಿ ಕಾಣಿಸುವುದು ಯಾರಿಗೂ ಸುಲಭವಲ್ಲದಿರುವಾಗ ಪದ್ಯಕಾವ್ಯವನ್ನು ಗದ್ಯದಲ್ಲಿ ಭಾಷಾಂತರಿಸಿದುದಕ್ಕಾಗಿ ಲಜ್ಜೆಯಿಂದ ತಲೆತಗ್ಗಿಸಬೇಕಾಗಿಲ್ಲ. ಮಹಾಕವಿಯ ಹೃದಯಕ್ಕೆ ನೇರಾದ ಪ್ರವೇಶ ಸಿಕ್ಕುವ ಹಾಗೆ ಯಾವ ನುಡಿಗಟ್ಟಿನಲ್ಲಿ ಬರೆದರೂ ಸರಿಯೆ. ಶ್ರೀ ಶಾಸ್ತ್ರಿಗಳು ತಮ್ಮಿಂದ ಸಲಬೇಕಾದ ಭಾಷಾ

ಸೇವೆಯನ್ನು ಅತ್ಯಂತ ವಿನಮ್ರತೆಯಿಂದ ಶುದ್ಧಾಂತಃಕರಣದಿಂದ ಈ ಅನುವಾದದ ಮೂಲಕ ಸಲಿಸಿದ್ದಾರೆ.

"ರಘೂಣಾಮನ್ವಯಂ ವಕ್ಷ್ಯೇ" ಎಂದು ಕಾವ್ಯಾರಂಭವನ್ನು ಮಾಡಿದ ಕಾಲಿದಾಸನು ರಘುರಾಜರಲ್ಲಿ ಒಬ್ಬೊಬ್ಬನ ಚರಿತ್ರೆಗೆ ಬೇರೆಬೇರೆ ಸರ್ಗ ಬಂಧಗಳನ್ನು ಮಾಡಿದ್ದಾನೆ. ಅಲ್ಲಲ್ಲಿ ಪ್ರಾಸಂಗಿಕ ವೃತ್ತಗಳೂ ಬರುತ್ತವೆ. ಶುದ್ಧಪದ್ಯಕಾವ್ಯವನ್ನೋದಿ ರಸಾಸ್ವಾದನತತ್ಪರರಾಗುವವರಿಗೆ ಕಥನ ಕ್ರಮವು ಅತಿ ಮುಖ್ಯವೇನೂ ಅಲ್ಲ. ಆದರೆ ಗದ್ಯದಲ್ಲಿ—ಪದ್ಯದ ನಾದರಸಮಾಧುರ್ಯಗಳಿಲ್ಲದಾಗ—ಕಥಾ ಪ್ರಸಂಗದ ಕಡೆಗೆ ಹೆಚ್ಚಿನ ಗಮನ ಹರಿಯುವುದು ಸ್ವಾಭಾವಿಕ. ಆದುದರಿಂದ ವೃತ್ತಾನುಕ್ರಮವಾಗಿ ಅಧ್ಯಾಯಗಳನ್ನೇರ್ಪಡಿಸಿ, ಕಾಲಿದಾಸನ ಸರ್ಗಬಂಧಾನುಕ್ರಮವನ್ನವರು ಮೀರಿದ್ದಾರೆ.. ಇದಕ್ಕಾಗಿ ಕಾಲಿದಾಸನು ಮಾತ್ರವಲ್ಲ; ಅನುವಾದ ಸಂಕಟಗಳನ್ನು ಅರಿತ ರಸಿಕ ಹೃದಯರೂ ಅವರನ್ನು ಕ್ಷಮಿಸದಿರಲಾರರು. ನಿರಾಡಂಬರವಾದ ಶುದ್ಧ ಭಾಷೆಯಲ್ಲಿ ಕಾಲಿದಾಸನ ಸೊಗಸನ್ನು ತೋರಿಸಿಕೊಡಲು ಅವರು ಹವಣಿಸಿದ್ದಾರೆ. ಮೂಲ ಗ್ರಂಥದ ರಸಾಸ್ವಾದನ ಇದರಿಂದ ದೊರಕಬಹುದೆಂದು ಹೇಳುವ ಧಾರ್ಷ್ಟ್ಯ ಅವರಿಗಿಲ್ಲ. "ನಾನೇನೂ ಕೂಡಿಸಿಲ್ಲ; ಇರುವುದನ್ನು ಸಾಧ್ಯವಾದಷ್ಟು ಇದ್ದಂತೆಯೇ ಹೇಳಲು ಪ್ರಯತ್ನಿಸಿದ್ದೇನೆ—ಎಂಬ ಪ್ರಾಮಾಣಿಕತೆಯಿಂದ ಕನ್ನಡಿಗರಿಗೆ ಅವರೊಂದು ಅನುವಾದ ಕೃತಿಯನ್ನು ಕಾಣಿಕೆ ಕೊಟ್ಟಿದ್ದಾರೆ. ರಸಮಯವಾದ ಕಥಾಕಾದಂಬರಿಗಳನ್ನು ಓದಿ ಹಿಗ್ಗಿ ನಲಿಯುವ ವಾಚಕವೃಂದಕ್ಕೂ ಈ ಕೃತಿಯಲ್ಲಿ ಆಸ್ವಾದನೀಯಾಂಶ ದೊರೆಯದಿರಲಾರದೆನ್ನುವುದರಲ್ಲಿ ಸಂಶಯವಿಲ್ಲ. ಈ ಗ್ರಂಥದೊಂದಿಗೆ ಶ್ರೀ ಶಾಸ್ತ್ರಿಗಳ ಲೆಕ್ಕಣಿಕೆಗೆ ವಿರಾಮ ದೊರೆಯಲಾರದೆಂದು ನಾನು ಭಾವಿಸುತ್ತೇನೆ.

ಮಂಗಳೂರು,
8–6–1951

ಕಡೆಂಗೋಡ್ಲು ಶಂಕರಭಟ್ಟ.

ರಘುವಂಶ

೧

ದಿಲೀಪನ ವ್ರತಾಚರಣೆ

ಭರತಖಂಡವು ಸತ್ಯ ಧರ್ಮ ನೀತಿಗಳಿಗೆ ನೆಲೆವೀಡಾದ ಪುಣ್ಯ ಭೂಮಿಯೆಂದು ಪುರಾಣಪ್ರಸಿದ್ಧವಾಗಿದೆ. ಹಿಂದಿನ ಕಾಲದಲ್ಲಿ ರಾಜ್ಯ ಭಾರ ಕ್ರಮ ಮತ್ತು ಜನಜೀವನ ಆದರ್ಶಪ್ರಾಯವಾಗಿದ್ದುದೇ ಇದಕ್ಕೆ ಕಾರಣವಿರಬಹುದು. ಚೆನ್ನಾಗಿ ಅರಸೊತ್ತಿಗೆ ನಡೆಸಿದ ಮನೆತನಗಳಲ್ಲಿ ಸೂರ್ಯದೇವನಿಂದ ಪ್ರಾರಂಭವಾದ ಇಕ್ಷ್ವಾಕು ವಂಶ ಹೆಸರಾದುದು. ಈ ವಂಶದಲ್ಲಿ ಮನು, ಸಗರ, ಭಗೀರಥ ಮೊದಲಾದ ಅನೇಕ ರಾಜರು ಪ್ರಜಾರಂಜನೆಯಿಂದ ರಾಜರೆಂಬ ಅನ್ವರ್ಥನಾಮವನ್ನು ಗಳಿಸಿದುದಲ್ಲದೆ ಅಸಾಮಾನ್ಯ ಪೌರುಷಕಾರ್ಯಗಳನ್ನು ಮಾಡಿ ಅಲೌಕಿಕ ಕೀರ್ತಿವಂತರೆನಿಸಿ ಕೊಂಡರು. ಮನು ಮಹಾರಾಜನು ಮೊದಲನೆಯ ಧರ್ಮಶಾಸ್ತ್ರವನ್ನು ರಚಿಸಿ ಸಮಾಜ ಜೀವನದ ಕಟ್ಟುಕಟ್ಟಳೆಗಳನ್ನು ನಿರ್ಮಿಸಿದುದರಿಂದ ಅವನ ಪೀಳಿಗೆಯವರಿಗೆ ಮಾನವರೆಂಬ ಹೆಸರು ಬಂತೆಂದೂ, ಸಗರ ಚಕ್ರ ವರ್ತಿಯ ಮಕ್ಕಳು ಭೂಮಿಯನ್ನಗೆದು ಸಾಗರ ನಿರ್ಮಾಣ ಮಾಡಿದ ರೆಂದೂ, ಭಗೀರಥನು ಗಂಗೆಯನ್ನು ಭೂಲೋಕಕ್ಕೆ ಹರಿಯಿಸಿ ಲೋಕೋ ಪಕಾರವೆಸಗಿದನೆಂದೂ ಪ್ರತೀತಿಯಿದೆ.

ಇಕ್ಷ್ವಾಕು ರಾಜರು ಉತ್ತರ ಭಾಗದ ಕೋಸಲ ದೇಶದಲ್ಲಿ ರಾಜ್ಯ ವಾಳುತ್ತಿದ್ದರು. ಸರಯೂ ನದಿಯ ದಡದ ಅಯೋಧ್ಯೆ ಅವರ ರಾಜಧಾನಿ. ಶುದ್ಧಚರಿತರಾಗಿದ್ದುಕೊಂಡು ಫಲಪ್ರಾಪ್ತಿಯಾಗುವ ವರೆಗೆ ಕೆಲಸ ಮಾಡು ವುದು ಅವರ ಸ್ವಭಾವ. ಅವರು ವಿಧ್ಯುಕ್ತ ರೀತಿಯಲ್ಲಿ ಯಜ್ಞಮಾಡಿ ಅರ್ಥಿಗಳ ಅಭೀಷ್ಟವನ್ನು ಸಲ್ಲಿಸುತ್ತಿದ್ದರು; ಅಪರಾಧಿಗಳಿಗೆ ತಕ್ಕುದಾದ ದಂಡನೆಯನ್ನು ವಿಧಿಸುತ್ತಿದ್ದರು; ಶೈಶವದಲ್ಲಿ ವಿದ್ಯಾಭ್ಯಾಸ, ಯೌವನ ದಲ್ಲಿ ಸುಖಭೋಗ, ವಾರ್ಧಕ್ಯದಲ್ಲಿ ಮುನಿವೃತ್ತಿ, ಕೊನೆಗೆ ಯೋಗದಿಂದ ಶರೀರತ್ಯಾಗ– ಹೀಗೆ ಆಶ್ರಮಧರ್ಮಗಳಿಗೆ ಮಾದರಿಯಾಗಿದ್ದರು.

ಇಂತಹ ಕುಲದಲ್ಲಿ ದಿಲೀಪನೆಂಬ ರಾಜನು ಜನಿಸಿದನು. ದೃಢಕಾಯನಾಗಿ ಬೆಳೆದ ಅವನ ಎದೆ ವಿಶಾಲವಾಗಿತ್ತು. ಹೆಗಲು ಹೋರಿಯ ಭುಜದಂತೆ ಉಬ್ಬಿತ್ತು. ಆಜಾನುಬಾಹುವಾದ ಅವನು ಕ್ಷಾತ್ರಧರ್ಮದ ಶರೀರದಂತಿದ್ದನು. ಆಕಾರಕ್ಕೆ ತಕ್ಕ ಪ್ರಜ್ಞೆ ಮತ್ತು ಪ್ರಜ್ಞೆಗೆ ಒಪ್ಪುವ ವೇದಶಾಸ್ತ್ರಾಭ್ಯಾಸ ಅವನಲ್ಲಿದ್ದುವು. ಅವನು ಅರಿಭಯಂಕರನಾದರೂ ಆಶ್ರಿತ ರಕ್ಷಕ. ಶಕ್ತಿಯುತನಾದರೂ ಕ್ಷಮಾಶೀಲ, ದಾನಿಯಾದರೂ ಸ್ವಗುಣಗಾನದಲ್ಲಿ ಅನಾಸಕ್ತ. ಹೀಗೆ ಪರಸ್ಪರ ವಿರುದ್ಧವಾಗಿ ತೋರುವ ಸದ್ಗುಣಗಳು ಅವನಲ್ಲಿ ಮನೆಮಾಡಿದ್ದುವು.

ದಿಲೀಪನು ಮಗಧದೇಶದ ರಾಜಪುತ್ರಿಯಾದ ಸುದಕ್ಷಿಣೆಯನ್ನು ವರಿಸಿದನು. ರಾಜನಿಗೆ ಅನೇಕ ಮಡದಿಯರಿರುವುದು ಅಂದಿನ ಪದ್ಧತಿಯಾದರೂ ಅವನು ಆ ಸಂಪ್ರದಾಯದ ದಾಸನಾಗಲಿಲ್ಲ. ಅವಳೊಬ್ಬಳೇ ಅವನ ಮಹಿಷಿ. ಅವರು ಅನುಕೂಲದಾಂಪತ್ಯದಲ್ಲಿ ಬಹುಕಾಲ ಕಳೆದರೂ ಪುತ್ರ ಮುಖ ದರ್ಶನವಾಗದೆ ತವಕಗೊಂಡರು. ಈ ವಿಷಯದಲ್ಲಿ ರಾಜನು ಗುರು ವಸಿಷ್ಠನ ಸಲಹೆಯನ್ನು ಕೇಳುವುದು ಉಚಿತವೆಂದೆಣಿಸಿ ರಾಜ್ಯಸೂತ್ರಗಳನ್ನು ಮಂತ್ರಿಗಳಿಗೊಪ್ಪಿಸಿ ಸಪತ್ನೀಕನಾಗಿ ವಸಿಷ್ಠಾಶ್ರಮಕ್ಕೆ ಹೊರಡಲು ನಿರ್ಧರಿಸಿದನು.

ಆಶ್ರಮಜೀವನದ ಶಾಂತಿಗೆ ಆತಂಕ ಬರಬಾರದೆಂಬ ಉದ್ದೇಶದಿಂದ ರಾಜಪರಿವಾರವು ಮಿತವಾಗಿತ್ತು. ರಾಜರಾಣಿಯರು ರಥಾರೂಢರಾಗಿ ಪಯಣ ಬೆಳೆಸುತ್ತ ದೇಶದ ಸಂಪನ್ನತೆಯನ್ನೂ ಪ್ರಜೆಗಳ ಸುಖಜೀವನವನ್ನೂ ನೋಡಿಕೊಂಡು ಮುಂದೆ ಹೋದರು. ಹಳ್ಳಿಗಳ ಗೊಲ್ಲರು ಬೆಣ್ಣೆ ತುಪ್ಪಗಳನ್ನು ಮಾರುವುದಕ್ಕೋಸ್ಕರ ಪಟ್ಟಣಕ್ಕೆ ಹೋಗುತ್ತಿದ್ದರು. ಅವರೊಡನೆ ಮಮತೆಯಿಂದ ಮಾತಾಡುತ್ತ ಸುತ್ತುಮುತ್ತಲಿನ ಹಲವು ಮರಗಿಡಗಳ ಹೆಸರುಗಳನ್ನು ಕೇಳುತ್ತ ರಾಜನು ಅಲ್ಲಲ್ಲಿ ತನ್ನ ಪೂರ್ವಜರು ನೆಡಿಸಿದ ಜಯಸ್ತಂಭಗಳನ್ನು ರಾಣಿಗೆ ತೋರಿಸುತ್ತ ಸೂರ್ಯಾಸ್ತಮಯಕ್ಕೆ ಸರಿಯಾಗಿ ವಸಿಷ್ಠನ ಪುಣ್ಯಾಶ್ರಮವನ್ನು ಸೇರಿದನು.

ಅಲ್ಲಿ ಒಂದೆಡೆ ವಟುಗಳು ದರ್ಭೆ ಸಮಿತ್ತು ಫಲ ಮೂಲಗಳನ್ನು ಹೊತ್ತು ತರುತ್ತಿದ್ದಾರೆ. ಆಶ್ರಮದ ಸುತ್ತಲೂ ಜಿಂಕೆಯ ಮರಿಗಳು ಸಲಿಗೆಯ ಮಕ್ಕಳಂತೆ ಸುತ್ತಾಡುತ್ತಿವೆ. ಇನ್ನೊಂದು ಕಡೆ ದನಕರುಗಳು

ಮೆಲುಕು ಹಾಕುತ್ತ ಮಲಗಿವೆ. ಅಪೂರ್ವವಾದ ತೇರು ಮತ್ತು ಕುದುರೆ ಗಳನ್ನು ನೋಡಿ ಕಿವಿ ನಿಮಿರಿಸಿ ನಿಂತ ಆಶ್ರಮ ಮೃಗಗಳನ್ನು ಮುನಿ ಕುಮಾರರು ಕಂಡು ರಾಜದಂಪತಿಗಳನ್ನು ಇದಿರ್ಗೊಂಡರು. ರಾಜನು ರಥದಿಂದಿಳಿದು ರಾಣಿಯನ್ನಿಳಿಸಿ ಸಾರಥಿಯೊಡನೆ ಕುದುರೆಗಳ ದಣುವಾರಿಸ ಹೇಳಿ ಆಶ್ರಮಾಭಿಮುಖನಾದನು. ಮುನಿಗಳು ಅವನನ್ನು ಯೋಗ್ಯವಾದ ಆತಿಥ್ಯದಿಂದ ಸತ್ಕರಿಸಿದರು.

ಸಾಯಂಕಾಲದ ಅನುಷ್ಠಾನವನ್ನು ಮುಗಿಸಿದ ಬಳಿಕ ವಸಿಷ್ಠನು ಭೇಟಿಯಿತ್ತನು. ಅರುಂಧತೀವಸಿಷ್ಠರನ್ನು ರಾಜದಂಪತಿಗಳು ವಂದಿಸಿ ದರು. ಮಹರ್ಷಿ ಆಶೀರ್ವದಿಸಿದನು. ಪ್ರಯಾಣದ ಬಳಲಿಕೆಯಿದ್ದರೂ ರಾಜನು ಗುರುಮುಖದಿಂದ ಏನು ಅಪ್ಪಣೆಯಾಗುವುದೋ ಎಂದು ಉತ್ಕಂಠನಾಗಿದ್ದನು.

ವಸಿಷ್ಠನು ರಾಜನ ಮತ್ತು ರಾಜ್ಯದ ಕುಶಲವನ್ನು ಕೇಳಿದನು. “ತಮ್ಮಂತಹ ಗುರುಗಳ ಅನುಗ್ರಹವಿರುವಾಗ ನನಗಾಗಲಿ ನನ್ನ ದೇಶ ಕ್ಕಾಗಲಿ ಯಾವ ವಿಪತ್ತೂ ಬರುವಂತಿಲ್ಲ. ವಿಧಿಯಂತೆ ಯಜ್ಞಗಳನ್ನು ಮಾಡಿಸುತ್ತಿರುವುದರಿಂದ ಕಾಲದಲ್ಲಿ ಮಳೆ ಬಂದು ಬೆಳೆ ತುಂಬಿರುವುದು. ಪ್ರಜೆಗಳು ಆಯುರಾರೋಗ್ಯೈಶ್ವರ್ಯಗಳನ್ನು ಅನುಭವಿಸುತ್ತ ಯಾವ ಈತಿ ಬಾಧೆಗಳೂ ಇಲ್ಲದೆ ಸುಖವಾಗಿರುವರು. ಬ್ರಹ್ಮರ್ಷಿಗಳಾದ ತಮ್ಮ ಶಿಷ್ಯ ಸ್ಥಾನದಲ್ಲಿರುವ ನನಗೆ ಎಲ್ಲ ಸಂಪತ್ತುಗಳೂ ನಿರಾಪದವಾಗಿವೆ. ಆದರೆ, ಗುರುದೇವ, ನನ್ನ ಒಂದು ಕೊರತೆಯ ಕಾರಣವನ್ನು ತಿಳಿದುಕೊಳ್ಳಲು ತಮ್ಮ ಪಾದಮೂಲಕ್ಕೆ ಬಂದಿದ್ದೇನೆ. ಇದುವರೆಗೆ ಈಕೆಯಲ್ಲಿ ಸಂತತಿ ಯನ್ನು ಕಾಣದೆ ನನಗೆ ಯಾವ ಸೌಭಾಗ್ಯವೂ ಸಂತೋಷದಾಯಕವಾಗಿಲ್ಲ. ಪಿತೃಗಳು ನನ್ನ ಕಾಲಾನಂತರ ಪಿಂಡೋದಕವಿಲ್ಲವೆಂಬ ಶಂಕೆಯಿಂದ ನಾನು ಈಗ ಕೊಡುತ್ತಿರುವ ತರ್ಪಣಾದಿಗಳನ್ನು ಕಣ್ಣೀರಿಡುತ್ತ ಸ್ವೀಕರಿ ಸುತ್ತಿದ್ದಾರೇನೋ! ಸಂತತಿಯಿಲ್ಲದ ನಾನು ಇದ್ದೂ ಇಲ್ಲದಹಾಗಾಗಿದ್ದೇನೆ. ಪುಣ್ಯಕರ್ಮಗಳಿಂದ ಉತ್ತಮಲೋಕ ಪ್ರಾಪ್ತಿಯಾಗುವುದೆಂದು ಲೋ ಕೋಕ್ತಿಯಿದ್ದರೂ ಸಂತತಿಯೆ ಇಹಪರಲೋಕಗಳಲ್ಲಿ ಸುಖಕ್ಕೆ ಕಾರಣ ವೆಂದು ನನ್ನೆಣಿಕೆ. ದೇವಋಣ ಮನುಷ್ಯಋಣಗಳಿಂದ ನನ್ನನ್ನು ಮುಕ್ತ ನನ್ನಾಗಿ ಮಾಡಿರುವ ತಾವು ಪಿತೃಋಣದಿಂದಲೂ ಬಿಡಿಸುವಿರೆಂಬ ದೃಢ

ವಿಶ್ವಾಸದಿಂದ ಬಂದಿದ್ದೇನೆ. ದುರ್ಲಭವಾಗಿದ್ದುದನ್ನು ಇದುವರೆಗೆ ನಮ್ಮ ವಂಶಕ್ಕೆ ಸುಲಭವಾಗಿಸಿದ ತಾವು ಇದನ್ನೂ ಅನುಗ್ರಹಿಸಬೇಕೆಂದು ನನ್ನ ಬೇಡಿಕೆ," ಎಂದು ಹೇಳಿ ರಾಜನು ಸುಮ್ಮನಾದನು.

ದಿಲೀಪನಿಗೆ ಸಂತತಿಯಾಗದಿರುವ ಕಾರಣವನ್ನು ವಸಿಷ್ಠನು ಪ್ರಣಿಧಾನದಿಂದ ತಿಳಿದು ಹೇಳಿದನು. "ಮಹಾರಾಜ, ನೀನೊಮ್ಮೆ ಇಂದ್ರನ ಆಸ್ಥಾನಕ್ಕೆ ಹೋಗಿ ಹಿಂತಿರುಗುವಾಗ ಅಲ್ಲೇ ಸಮೀಪ ಕಲ್ಪವೃಕ್ಷದ ನೆರಳಿನಲ್ಲಿ ವಿಶ್ರಮಿಸಿಕೊಂಡಿದ್ದ ಕಾಮಧೇನುವನ್ನು ಪೂಜಿಸದೆ ಬಂದಿರುವೆ. ರಾಜಧಾನಿಗೆ ಬರುವ ಆತುರದಲ್ಲಿ ನೀನು ಅವಳನ್ನು ಕಾಣದಿರಬಹುದು. ಪೂಜಾರ್ಹರಾದವರನ್ನು ಪೂಜಿಸದಿರುವುದು ಅಧರ್ಮ. ಆ ಧೇನು ತನ್ನನ್ನು ಅಥವಾ ತನ್ನ ಸಂತತಿಯನ್ನು ಪೂಜಿಸದೆ ದಿಲೀಪನಿಗೆ ಸಂತತಿಯಾಗದಿರಲೆಂದು ಶಾಪವಿತ್ತಳು. ಇದನ್ನು ನೀನಾಗಲಿ ನಿನ್ನ ಸಾರಥಿಯಾಗಲಿ ಕೇಳಲಿಲ್ಲವೇನೋ. ಕಾಮಧೇನು ವರುಣಲೋಕಕ್ಕೆ ದೀರ್ಘಕಾಲದ ಯಜ್ಞಕ್ಕಾಗಿ ಹೋಗಿದ್ದಾಳೆ. ಅಲ್ಲಿಗೆ ಹೋಗಿ ಆಕೆಯನ್ನು ಸೇವಿಸುವುದು ಅಶಕ್ಯ. ಅವಳ ಮಗಳಾದ ನಂದಿನಿ ನನ್ನ ಆಶ್ರಮದಲ್ಲಿದ್ದಾಳೆ. ಅವಳೂ ಕಾಮಿತ ವಸ್ತುಗಳನ್ನು ಕರೆಯುವವಳೆ. ನೀವಿಬ್ಬರೂ ಅವಳನ್ನು ಪೂಜಿಸಿ."

ವಸಿಷ್ಠನು ಮಾತು ಮುಗಿಸುವುದಕ್ಕೂ ನಂದಿನಿ ವನದಿಂದ ಬರುವುದಕ್ಕೂ, ಕಾಕತಾಲೀಯನ್ಯಾಯವಾಯಿತು. "ಇದು ಶುಭಸೂಚನೆ. ಅವಳು ನಮ್ಮ ಬಳಿಗೆ ಸ್ವೇಚ್ಛೆಯಿಂದ ಬಂದ ಕಾರಣ ನಿನ್ನ ಮನೋರಥ ಸಿದ್ಧಿ ದೂರವಿಲ್ಲ. ವನ್ಯವೃತ್ತಿಯು ಈಕೆಯನ್ನು ಶ್ರದ್ಧೆಯಿಂದ ಪೂಜಿಸು. ಅವಳು ಹೋದಲ್ಲಿ ಹೋಗು, ನಿಂತಲ್ಲಿ ನಿಲ್ಲು, ನೀರು ಕುಡಿಯುವಾಗ ಕುಡಿ, ಮಲಗುವಾಗ ವಿಶ್ರಮಿಸು. ನಿನ್ನ ಪತ್ನಿಯೂ ಇವಳನ್ನು ಪ್ರಾತಃಕಾಲ ಪೂಜಿಸಿ ತಪೋವನಾಂತ್ಯದ ವರೆಗೆ ಅನುಸರಿಸಿ, ಹಿಂದೆ ಬರುವಾಗ ಇದಿರ್ಗೊಂಡು ವಂದಿಸಲಿ. ಧೇನು ಪ್ರಸನ್ನೆಯಾಗುವ ವರೆಗೆ ಈ ರೀತಿಯ ವ್ರತದಿಂದ ಆರಾಧಿಸಿರಿ. ವಂಶೋದ್ಧಾರಕನಾದ ಪುತ್ರನು ಜನಿಸುವನು." ಮುನಿಯ ಈ ಮಾತುಗಳಿಗೆ ದಿಲೀಪನು, "ತಮ್ಮ ವರ ಪ್ರಸಾದ," ಎಂದು ಸಂತೋಷಗೊಂಡನು. ಆ ಮೇಲೆ ಅವರು ವಿಶ್ರಾಂತಿ ತೆಗೆದುಕೊಳ್ಳುವಂತೆ ವಸಿಷ್ಠನ ಅಣತಿಯಾಯಿತು. ರಾಜಭೋಗ್ಯವಾದ

ವಸ್ತುಗಳನ್ನೊದಗಿಸುವ ಶಕ್ತಿ ವಸಿಷ್ಠನಿಗೆ ತಪೋಬಲದಿಂದ ಅಧೀನವಾಗಿದ್ದರೂ ರಾಜನು ವ್ರತಾಚರಣೆ ಮಾಡಲಿರುವವನಾದುದರಿಂದ ಮುನಿಜನಯೋಗ್ಯವಾದ ದರ್ಭಾಸನಾದಿಗಳನ್ನೇ ಅವನಿಗೆ ಕೊಟ್ಟನು. ಗುರು ತೋರಿಸಿದ ಕುಟೀರದಲ್ಲಿ ರಾಜರಾಣಿಯರು ವಿಶ್ರಮಿಸಿದರು; ಉಷಃಕಾಲದಲ್ಲಿ ಶಿಷ್ಯರು ಹೇಳುತ್ತಿದ್ದ ವೇದಪಾಠವನ್ನು ಕೇಳುತ್ತ ನಿದ್ರೆಯಿಂದ ಎಚ್ಚತ್ತರು.

ಮಾರಣೆಯ ದಿನ ಸುದಕ್ಷಿಣಾದಿಲೀಪರು ನಂದಿನಿಯ ಆರಾಧನೆಯನ್ನು ಪ್ರಾರಂಭಿಸಿದರು. ರಾಣಿ ಗಂಧಲೇಪ ಪುಷ್ಪಮಾಲೆಗಳಿಂದ ಧೇನುವನ್ನು ಅಲಂಕರಿಸಿದಳು. ಕರುವಿಗೆ ಹಾಲುಣಿಸಿದ ನಂದಿನಿಯನ್ನು ಅನುಸರಿಸಿ ವನಕ್ಕೆ ಹೋಗಲು ರಾಜನು ಸಿದ್ಧನಾದನು. ನಂದಿನಿಯ ಕ್ಷುರಪಾತದಿಂದ ಪವಿತ್ರವಾದ ದಾರಿಯಲ್ಲಿ ಸ್ವಲ್ಪ ದೂರದ ವರೆಗೆ ಹೋದ ರಾಣಿಯನ್ನು ರಾಜನು ಗುರುವಿನ ಆಜ್ಞೆಯಂತೆ ತಪೋವನಾಂತ್ಯದಲ್ಲಿ ನಿಲ್ಲಹೇಳಿ ತಾನು ಮಾತ್ರ ದನವನ್ನು ಹಿಂಬಾಲಿಸಿದನು. ವ್ರತಕ್ಕೋಸ್ಕರ ಗೋಪಾಲಕನಾದ ರಾಜನು ತನ್ನ ಸೇವಕರನ್ನು ಹಿಂದಕ್ಕಟ್ಟಿದನು. ಸೂರ್ಯವಂಶದ ರಾಜರಿಗೆ ಅಂಗರಕ್ಷಣೆಗೆ ಸ್ವಶಕ್ತಿಯೇ ಸಾಕೆಂದು ತೋರಿಸಿಕೊಡುವುದು ಮಾತ್ರವಲ್ಲದೆ, ತಾನು ಸಂಪೂರ್ಣವಾಗಿ ದೈನ್ಯಭಾವವನ್ನು ವಹಿಸಿ ಧೇನುಸೇವೆಯನ್ನು ನಡೆಸುವುದೂ ರಾಜನ ಉದ್ದೇಶವಾಗಿತ್ತು.

ದನಕ್ಕೆ ಹುಲುಸಾದ ಎಳೆಹುಲ್ಲನ್ನು ಕಿತ್ತುಕೊಡುವುದು, ಮೈ ತಿಕ್ಕುವುದು, ನೊಣಗಳನ್ನೋಡಿಸುವುದು, ಈ ಬಗೆಯ ಸೇವಾಕಾರ್ಯಗಳಲ್ಲಿ ತತ್ಪರನಾದ ರಾಜನು ಸ್ವತಂತ್ರವಾಗಿ ಚರಿಸುವ ಆಕೆಯನ್ನು ನೆರಳಿನಂತೆ ಅನುಸರಿಸಿದನು; ಧನುರ್ಧಾರಿಯಾಗಿ ಧೇನುಪಾಲನೆಯ ವ್ಯಾಜದಿಂದ ದುಷ್ಟಮೃಗಗಳನ್ನು ದಂಡಿಸಲು ಬಂದವನೋ ಎಂಬಂತೆ ಸಂಚರಿಸಿದನು.

ಬಂದುದು ವನಕ್ಕಾದರೂ ರಾಜನಿಗೆ ಸಲ್ಲಬೇಕಾದ ಉಪಚಾರಗಳು ಸಂದಂತೆ ತೋರಿತು. ಇಕ್ಕಡೆಗಳಲ್ಲಿರುವ ಮರಗಳು ಪಕ್ಷಿಗಳ ಕಲರವದಿಂದ ವಂದಿಮಾಗಧರಂತೆ ಜಯಕಾರ ಗೈದುವು. ಪಟ್ಟಣದ ಬೀದಿಗಳಲ್ಲಿ ರಾಜನಿಗೆ ಕನ್ಯೆಯರು ಅರಳನ್ನು ಚೆಲ್ಲುವಂತೆ ವನಲತೆಗಳು ಹೂಗಳನ್ನೆರಚಿದುವು. ಧನುರ್ಧಾರಿಯಾಗಿದ್ದರೂ ಅವನು ದಯಾವಂತನೆಂದು ತಿಳಿದ ಹರಿಣಗಳು ನಿಶ್ಶಂಕೆಯಿಂದ ಕಣ್ಣುತುಂಬ ನೋಡಿದುವು. ಬಿದಿರು ಹಿಂಡು

ಗಳಲ್ಲಿ ಗಾಳಿ ಬೀಸಿದಾಗ ಹೊರಟ ಸ್ವರವು, ವನದೇವತೆಗಳು ರಾಜನ ಕೀರ್ತಿಯನ್ನು ಸ್ತುತಿಸುವಂತೆ ಕೇಳಿಸಿತು. ತಿಳಿನೀರಿನ ತುಂತುರು ಹನಿಗಳಿಂದಲೂ ಕಾಡುಹೂಗಳ ಪರಿಮಳದಿಂದಲೂ ಕೂಡಿ ಶೀತಲಮಧುರವಾದ ಗಾಳಿ ಬೀಸಿ ರಾಜನ ಬಳಲಿಕೆ ತಣಿಯಿತು. ಮಳೆಯಿಲ್ಲದೆ ಕಾಡುಗಿಚ್ಚು ಆರಿತು. ಫಲಪುಷ್ಪಗಳು ಹೆಚ್ಚಿದುವು. ಬಲಿಷ್ಠ ಪ್ರಾಣಿಗಳು ದುರ್ಬಲ ಪ್ರಾಣಿಗಳನ್ನು ಪೀಡಿಸದೆ ಸ್ನೇಹಭಾವವನ್ನು ತಾಳಿದುವು. ಇವೆಲ್ಲ ರಾಜನ ಮಹಿಮೆಯನ್ನು ಸಾರಿದುವು.

ಸೂರ್ಯಕಾಂತಿ ಕುಂದುತ್ತ ಬಂತು. ಎಳೆಚಿಗುರಿನ ಬಣ್ಣದ ಧೇನು ತನ್ನ ಸಂಚಾರದಿಂದ ವನಾಂತರವನ್ನು ಪಾವನಮಾಡಿ ಆಶ್ರಮಸ್ಥಾನಕ್ಕೆ ಹಿಂದಿರುಗಿತು. ದಿಲೀಪನು ಹಿಂದೆಯೇ ಇದ್ದನು. ವನಮಾರ್ಗದಲ್ಲಿರುವ ಪಲ್ವಲಗಳಿಂದ ಕಾಡುಹಂದಿಗಳು ಮೇಲೆ ಬರುತ್ತಿದ್ದುವು. ನವಿಲುಗಳು ತಮ್ಮ ವಾಸದ ಮರಗಳನ್ನೇರಲು ಮೇಲ್ಮೊಗವಾಗಿ ನಿಂತಿದ್ದುವು. ಹಸುರಾಗಿ ಕಾಣುವ ವನಶೋಭೆಯನ್ನು ನೋಡುತ್ತ ಬಂದ ನಿಯಮವಂತನಾದ ಪತಿಯನ್ನು ಸುದಕ್ಷಿಣೆ ತನ್ನ ಹಸಿದ ಕಣ್ಣುಗಳಿಂದ ಹೀರುವಳೋ ಎಂಬಂತೆ ಭಕ್ತಿಪ್ರೀತಿಗಳಿಂದ ಎದುರುನೋಡುತ್ತಿದ್ದಳು. ಸ್ವಾಗತಿಸಲು ಕಾದಿದ್ದ ಸುದಕ್ಷಿಣೆಗೂ ಹಿಂಬಾಲಿಸುತ್ತಿದ್ದ ದಿಲೀಪನಿಗೂ ಮಧ್ಯದಲ್ಲಿ ಧೇನು, ಹಗಲಿರುಳುಗಳ ನಡುವಣ ಸಂಧ್ಯಾಕಾಲದಂತೆ ಕಂಗೊಳಿಸಿದಳು. ಸುದಕ್ಷಿಣೆ ಆಕಳಿಗೆ ಸುತ್ತುಬಂದು ಅಕ್ಷತೆಗಳಿಂದ ಅಲಂಕರಿಸಿ ನಮಿಸಿದಳು. ಆಕಳು ಕರುವಿಗೆ ಹಾಲುಣಿಸಲು ಉತ್ಸುಕಳಾಗಿದ್ದರೂ ದಂಪತಿಗಳು ಪೂಜೆ ಮುಗಿಸುವ ತನಕ ಶಾಂತವಾಗಿ ನಿಂತಳು. ತಮ್ಮ ಮೇಲೆ ಬೇಗನೆ ಅನುಗ್ರಹ ತೋರಲಿರುವುದರ ಸೂಚನೆಯಿದೆಂದು ರಾಜದಂಪತಿಗಳು ಸಂತಸಗೊಂಡರು.

ದಿಲೀಪನು ಅಲ್ಲಿಂದ ಮುಂದೆ ಹೋಗಿ ಗುರುವನ್ನೂ ಗುರುಪತ್ನಿಯನ್ನೂ ನಮಸ್ಕರಿಸಿ ಸಾಯಂಕಾಲದ ಪೂಜೆಯನ್ನು ಮುಗಿಸಿದನು. ಹಾಲು ಕರೆದ ಬಳಿಕ ನಂದಿನಿಗೆ ದೀಪ ಹೂ ಗಂಧ ಅಕ್ಷತೆಗಳಿಂದ ಪೂಜೆ ನಡೆಯಿತು. ದನವು ಮಲಗಿದ ಮೇಲೆ ರಾಜನು ಅದರ ಬಳಿ ಮಲಗಿದನು. ಪ್ರಾತಃಕಾಲವಾದೊಡನೆ ಪುನಃ ಸೇವಾತತ್ಪರನಾದನು.

ಇಪ್ಪತ್ತೊಂದು ದಿನಗಳ ವರೆಗೆ ಈ ರೀತಿ ಭಕ್ತಿ ಶ್ರದ್ಧೆಗಳಿಂದ

ಕೂಡಿದ ವ್ರತಾಚರಣೆಯಾಯಿತು. ಇಪ್ಪತ್ತೆರಡನೆಯ ದಿನ ಎಂದಿನಂತೆ ರಾಜನು ಅನುಸರಿಸುತ್ತಿದ್ದಾಗ ಅವನ ದೃಢತೆಯನ್ನು ಪರೀಕ್ಷಿಸುವ ಉದ್ದೇಶದಿಂದ ನಂದಿನಿಯು ಹಿಮಾಲಯದ ಬಳಿಯಲ್ಲಿ ಸಂಚರಿಸುತ್ತ, ಗಂಗಾಪ್ರಪಾತದ ಬಳಿ ಪುಷ್ಕಳವಾಗಿ ಬೆಳೆದಿದ್ದ ಹುಲ್ಲಿನಿಂದ ತುಂಬಿದ ಒಂದು ಗುಹಾದ್ವಾರವನ್ನು ಪ್ರವೇಶಿಸಿದಳು. ಧೇನುವಿನ ಮಹತ್ವದಿಂದ ಲೂ ವಸಿಷ್ಠನ ಪ್ರಭಾವದಿಂದಲೂ ಯಾವ ಹಿಂಸ್ರ ಪ್ರಾಣಿಗಳ ಬಾಧೆಯೂ ತಾಗದೆಂದೆಣಿಸಿ ರಾಜನು ಹಿಮವತ್ ಶೋಭೆಯನ್ನು ಈಕ್ಷಿಸುತ್ತ ನಿಂತನು. ಅಷ್ಟರಲ್ಲಿ ಗುಹೆಯೊಳಗಿಂದ ಆರ್ತಸ್ವರ ಕೇಳಿಸಿತು. ಆ ಕಡೆ ನೋಡಿ ದೊಡನೆ ಗಡಿಬಿಡಿಯಾಯಿತು. ಪಾಟಲವರ್ಣದ ದನದ ಮೇಲೆ ಬಲಿಷ್ಠ ವಾದ ಸಿಂಹ ಕುಳಿತಿದೆ. ಹಸುಮುದುರಿಕೊಂಡಿದೆ. ಕೂಡಲೆ ರಾಜನು ಸಿಂಹವನ್ನು ಕೊಲ್ಲಲೋಸುಗ ಎಡಭುಜದಲ್ಲಿದ್ದ ಬತ್ತಳಿಕೆಗೆ ಕೈಹಾಕಿ ದೊಡನೆ ಕೈ ಅಲ್ಲೇ ಸ್ತಂಭಿತವಾಯಿತು. ಮಂತ್ರೌಷಧಿಗಳಿಂದ ತಡೆಯು ಲ್ಪಟ್ಟ ಸರ್ಪದಂತೆ ರಾಜನು ಮತ್ತಷ್ಟು ಕುಪಿತನಾಗಿ ಬುಸುಗುಟ್ಟುತ್ತ ನಿಂತನು.

ಈ ಬಾಹುಸ್ತಂಭನಕ್ಕೆ ಕಾರಣ ತಿಳಿಯದೆ ವಿಸ್ಮಯಪಡುತ್ತಿರುವ ರಾಜನನ್ನು ಸಿಂಹವು ಮನುಷ್ಯಭಾಷೆಯಿಂದ ಮತ್ತಷ್ಟು ವಿಸ್ಮಯಪಡಿ ಸುತ್ತ ಹೇಳಿತು. "ಮಹೀಪಾಲ, ಶ್ರಮಪಡಬೇಡ. ಬಹುಶ್ರಮದಿಂದ ನನ್ನ ಮೇಲೆ ಬಾಣಪ್ರಯೋಗ ಮಾಡಿದರೂ ಅದು ವ್ಯರ್ಥವಾದೀತು. ಬಹು ವೇಗವುಳ್ಳ ಬಿರುಗಾಳಿಗೆ ಮರಗಳನ್ನು ಸಮೂಲವಾಗಿ ಕೀಳುವ ಶಕ್ತಿಯಿದ್ದರೂ ಪರ್ವತಶಿಖರವನ್ನು ಅಲುಗಾಡಿಸುವುದು ಅದರಿಂದಾಗದ ಕೆಲಸ. ನಾನು ಈಶ್ವರನ ಸೇವಕ. ನನ್ನ ಹೆಸರು ಕುಂಭೋದರ. ಎದುರಿನ ಆ ದೇವದಾರು ಮರವನ್ನು ಪಾರ್ವತೀದೇವಿ ಚಿನ್ನದ ಕೊಡ ಗಳಿಂದ ನೀರೆರೆದು ಮಗನಂತೆ ಸಾಕಿದ್ದಾಳೆ. ಒಂದು ದಿನ ಕಾಡಾನೆಗಳು ಬಂದು ಅದಕ್ಕೆ ಮೈತಿಕ್ಕಿ ತೊಗಟೆಯನ್ನೆಬ್ಬಿಸಿದುವು. ಅದನ್ನು ನೋಡಿ ಪಾರ್ವತಿ ಬಹು ದುಃಖಪಟ್ಟಳು. ಮಗ ಸುಬ್ರಹ್ಮಣ್ಯನು ರಾಕ್ಷಸರೊಡನೆ ಯುದ್ಧಮಾಡಿದಾಗ ಅವನಿಗಾದ ಗಾಯಗಳನ್ನು ನೋಡಿದಾಗಲೂ ಅಷ್ಟೊಂದು ದುಃಖಿಸಿರಲಾರಳು. ಇದು ಈಶ್ವರನಿಗೆ ತಿಳಿಯಿತು. ಅಂದಿ ನಿಂದ ಇಲ್ಲಿ ಕಾಡಾನೆಗಳ ಕಾಟವಿಲ್ಲದಂತೆ ಕಾಯಲು ನನ್ನನ್ನು ನೇಮಿಸಿ

ದ್ದಾನೆ. ಈ ಗುಹಾದ್ವಾರಕ್ಕೆ ಬಂದ ಪ್ರಾಣಿಗಳನ್ನು ಆಹಾರವಾಗಿ ಸ್ವೀಕರಿಸಬೇಕೆಂದು ಅವನ ಅಪ್ಪಣೆಯಾಗಿದೆ. ಈಗ ಈ ದನ ಬಂದಿದೆ, ನಾನು ಹಸಿದಿದ್ದೇನೆ. ಸ್ವಾಮಿಯ ಆದೇಶದಂತೆ ಇದನ್ನುಂಡು ತೃಪ್ತನಾಗುತ್ತೇನೆ. ನೀನು ಗುರುವಿನಲ್ಲಿಯೂ ಅವನ ಸೊತ್ತಿನಲ್ಲಿಯೂ ತುಂಬ ಭಕ್ತಿಯುಳ್ಳವರುವೆ, ನಿಜ. ಆದರೂ ವ್ಯಥೆಪಡಬೇಡ; ಧೇನುವಿಲ್ಲದೆ ಅವನ ಬಳಿಗೆ ಹೇಗೆ ಹೋಗಲಿ ಎಂದು ಸಂಕೋಚಪಡಬೇಡ. ನಿನ್ನ ರಕ್ಷಣೆಯಲ್ಲಿದ್ದರೂ ನಿನ್ನ ಆಯುಧಗಳಿಂದ ರಕ್ಷಿಸಲಾಗದೆ ಅದು ನಾಶ ಹೊಂದಿದರೆ ನಿನ್ನ ಕೀರ್ತಿಗೆ ಕುಂದು ಬರಲಾರದು.”

ಮೃಗರಾಜನ ಮಾತುಗಳನ್ನು ಕೇಳಿ, ಈಶ್ವರಪ್ರಭಾವದಿಂದ ತನ್ನ ಅಸ್ತ್ರ ಮತ್ತು ದೋರ್ಬಲಗಳು ನಿಷ್ಪ್ರಯೋಜಕವಾದುದನ್ನು ತಿಳಿದು ದಿಲೀಪನು ಆ ತೇಜೋಭಂಗವನ್ನು ಸಹಿಸಿಕೊಂಡನು. ಬಾಣಪ್ರಯೋಗ ಪ್ರಯತ್ನವು ಸಫಲವಾಗದಿದ್ದರೂ ಸಿಂಹದೊಡನೆ ಮಾತು ಬೆಳೆಸಿದನು. “ಮೃಗರಾಜ, ನನ್ನ ಕೈ ಮರಕಟ್ಟಿ ಪ್ರಥಮಯತ್ನವು ಹಾಸ್ಯಕ್ಕೆ ಕಾರಣವಾದುದರಿಂದ ಮಾತು ಕೂಡ ಹಾಸ್ಯಾಸ್ಪದವಾಗಬಹುದು. ನೀನು ಎಲ್ಲರ ಅಂತರಂಗವನ್ನು ತಿಳಿಯುವ ಶಕ್ತಿಯುಳ್ಳವನು. ಸರ್ವಶಕ್ತನಾದ ನಿನ್ನ ಸ್ವಾಮಿ ನನಗೂ ಮಾನ್ಯನು. ಆದರೂ ಆ ಧೇನುವನ್ನು ಬಿಟ್ಟು ಹೋಗುವುದು ನಡೆಯದ ಮಾತು. ನನ್ನ ರಕ್ಷಣೆಯಲ್ಲಿರುವ ಆಕೆ ನಾಶವಾಗುವಾಗ ನಾನು ಸುಮ್ಮನಿರುವುದೆ? ನೀನು ನನ್ನ ದೇಹವನ್ನು ಸ್ವೀಕರಿಸಿ ಆಕೆಯನ್ನು ಬಿಡು. ಹೀಗೆ ಮಾಡುವುದರಿಂದ ನಿನ್ನ ಆಹಾರಕ್ಕೂ ಹಾನಿಯಿಲ್ಲ. ಮುನಿಯ ಯಜ್ಞ ಕಾರ್ಯಗಳಿಗೆ ಧೇನು ಅವಶ್ಯ. ಸಾಯಂಕಾಲವಾದುದರಿಂದ ತನ್ನ ಕರುವಿಗೆ ಹಾಲೂಡಲು ಆತುರದಿಂದಿರುವ ಈ ಮುನಿಧೇನುವನ್ನು ಬಿಟ್ಟು ಕೃಪೆದೋರು.”

ರಾಜನ ಮಾತುಗಳನ್ನು ಕೇಳಿ ಸಿಂಹವು ನಗುತ್ತ ಹೇಳಿತು: “ಮಹಾರಾಜ, ನಿನಗಿರುವ ಏಕಚ್ಛತ್ರಾಧಿಪತ್ಯವನ್ನೂ ಯೌವನದ ಈ ಸುಂದರ ದೇಹವನ್ನೂ ಈ ಅತ್ಯಲ್ಪ ಕಾರಣಕ್ಕಾಗಿ ಕಳೆದುಕೊಳ್ಳುವ ಮನಸ್ಸು ಮಾಡುವೆಯೇಕೆ? ನೀನು ವಿಚಾರಮೂಢನೆ? ಭೂತದಯೆಯಿಂದ ನೀನು ಹೀಗೆ ಮಾಡಿದರೆ ಒಂದು ದನವನ್ನು ರಕ್ಷಿಸಿದಂತಾಗುವುದು, ನಿಜ. ಬದಲಾಗಿ ನೀನು ಬಹುಕಾಲ ಬದುಕಿದ್ದು ಪ್ರಜೆಗಳ ಕಷ್ಟಕಾರ್ಪಣ್ಯ

ಗಳನ್ನು ನೀಗಿ ಅವರನ್ನು ಮಕ್ಕಳಂತೆ ಕಾಪಾಡುವುದು ಮೇಲ್ಮಟ್ಟದ ಭೂತದಯೆಯಲ್ಲವೆ? ಧೇನುನಾಶಕ್ಕೆ ಅವಕಾಶ ಕೊಟ್ಟರೆ ವಸಿಷ್ಠನು ಕೋಪಗೊಳ್ಳುವನೆಂಬ ಹೆದರಿಕೆಯೆ ನಿನಗೆ? ಕೊಡದಂಥ ಕೆಚ್ಚಲಿನ ಕೋಟಿ ದನಗಳನ್ನು ಕೊಟ್ಟು ಅವನನ್ನು ತಣಿಸಬಹುದು. ಕಲ್ಯಾಣ ಪರಂಪರೆಗಳನ್ನು ಅನುಭವಿಸುವ ಯೋಗವಿರುವ ನಿನ್ನ ಬಲಿಷ್ಠ ಶರೀರ ವನ್ನು ರಕ್ಷಿಸಿಕೊ. ಧೇನುವನ್ನು ರಕ್ಷಿಸದಿದ್ದರೆ ಸ್ವರ್ಗಲೋಕ ತಪ್ಪುವು ದೆಂದು ಶಂಕಿಸಬೇಡ. ಸಮೃದ್ಧವಾದ ನಿನ್ನ ದೇಶವು ಭೂಲೋಕದ ಸ್ವರ್ಗ."

ಸಿಂಹದ ಮಾತು ಗುಹೆಯಲ್ಲಿ ಪ್ರತಿಧ್ವನಿತವಾಗಿ ಆ ವಾದವನ್ನು ಪರ್ವತವು ಸಮರ್ಥಿಸಿತೋ ಎಂಬಂತಾಯಿತು. ಆದರೆ ಬೆದರುಗಣ್ಣಿ ನಿಂದ ತನ್ನೆಡೆಗೆ ದಿಟ್ಟಿಸುವ ದನವನ್ನು ಕಂಡು ರಾಜನು ಮತ್ತಷ್ಟು ಕಾತರ ನಾದನು. "ಮೃಗೇಂದ್ರ, ಕ್ಷತ್ರಿಯ ಎಂದರೆ ನಾಶರಕ್ಷಕ. ಇದಕ್ಕೆ ವಿರೋಧವಾಗಿ ವರ್ತಿಸುವ ಕ್ಷತ್ರಿಯನಿಗೆ ರಾಜ್ಯವೇಕೆ? ನಿಂದಾದೂಷಿತ ವಾದ ಪ್ರಾಣದಿಂದೇನು ಫಲ? ನಿನ್ನ ಸೂಚನೆಯಂತೆ ಬೇರೆ ಗೋವುಗಳನ್ನು ಕೊಟ್ಟು ಋಷಿಯ ಕೋಪವನ್ನು ಸಮಾಧಾನಪಡಿಸಲು ಸಾಧ್ಯವಿಲ್ಲ. ಈ ಧೇನು ಕಾಮಧೇನು. ಅಷ್ಟು ಮಹಿಮೆಯುಳ್ಳ ದನವನ್ನು ನೀನು ಮಹಾ ದೇವನ ಬೆಂಬಲದಿಂದ ಮಾತ್ರ ಆಕ್ರಮಿಸಿರುವೆ. ಆದುದರಿಂದ ನನ್ನ ದೇಹ ತೆತ್ತು ಆಕೆಯನ್ನು ಬಿಡಿಸುವುದು ಧರ್ಮ. ನಿನ್ನ ನಡತೆ ನನಗೆ ಆದರ್ಶ. ನೀನು ಸ್ವಾಮಿಪರಂತಂತ್ರನಿದ್ದು ದೇವದಾರು ರಕ್ಷಣೆಯಲ್ಲಿ ಜಾಗರೂಕನಾಗಿರುವೆ. ಅಂತೆಯೇ ಧೇನುರಕ್ಷಣೆ ನನ್ನ ಕರ್ತವ್ಯ. ಆಕೆ ನಾಶ ಮುಖದಲ್ಲಿರುವಾಗ ನಾನು ಗಾಸಿಯಾಗದೆ ಸುಮ್ಮನಿದ್ದು ಸ್ವಾಮಿ ದರ್ಶನ ಮಾಡಲು ಸಾಧ್ಯವೇ? ನನ್ನ ಶರೀರದ ಮೇಲೆ ನಿನಗೆ ದಯೆ ಯಿರುವುದು ನಿಜವಾದರೆ ನನ್ನ ಕೀರ್ತಿಶರೀರದಲ್ಲಿ ದಯೆದೋರು. ಪಂಚಭೂತವಿಕಾರವಾಗಿರುವ ಮತ್ತು ನಶ್ವರವಾದ ಈ ಮಾಂಸಪಿಂಡದಲ್ಲಿ ನನಗೆ ಆದರವಿಲ್ಲ. ಲೋಕದಲ್ಲಿ ಎಲ್ಲ ಸಂಬಂಧಗಳಿಗಿಂತ ಸ್ನೇಹಸಂ ಬಂಧ ಮೇಲು. ಈ ವನಮಧ್ಯದಲ್ಲಿ ಅಂತಹ ಸಂಬಂಧ ನಮ್ಮೊಳಗೆ ಬೆಳೆ ಯಿತು. ಸಂಬಂಧಿಯ ಈ ಪ್ರಾರ್ಥನೆಯನ್ನು ತಿರಸ್ಕರಿಸುವುದು ಯೋಗ್ಯವೆ?"

ರಾಜನ ಸೂಚನೆಯನ್ನು ಸಿಂಹ ಒಪ್ಪಿತು. ಕೈಯ ಕಟ್ಟು ಸಡಿಲಿದ

ಅವನು ಬಿಲ್ಲುಬತ್ತಳಿಕೆಗಳನ್ನು ಬಿಸುಟು ಸಿಂಹದೆದುರಿನಲ್ಲಿ ಮಾಂಸಖಂ
ದಂತೆ ದೇಹವನ್ನರ್ಪಿಸಿದನು. ಈ ಕ್ಷಣ ತನ್ನ ಮೇಲೆ ಸಿಂಹ ಬೀಳು
ದೆಂದು ನಿರೀಕ್ಷಿಸುತ್ತ ಅಧೋಮುಖನಾಗಿ ಕಾದಿದ್ದ ದಿಲೀಪನ ಮೇ
ದೇವತೆಗಳು ಪುಷ್ಪವೃಷ್ಟಿಯನ್ನು ಸುರಿಸಿದರು. “ವತ್ಸ, ಏಳು,” ಎಂ
ಮೆಲುನುಡಿ ಕೇಳಿಸಿತು. ಮುಖವೆತ್ತಲು ಧೇನುಮಾತೆ ಮಾತ್ರ ಕಾ
ದಳು, ಸಿಂಹವಿರಲಿಲ್ಲ. “ನಾನೇ ಮಾಯಾರೂಪದಿಂದ ಸಿಂಹವಾ
ನಿನ್ನನ್ನು ಪರೀಕ್ಷಿಸಿದೆ. ಋಷಿಧೇನುವನ್ನಾಕ್ರಮಿಸಲು ಅಂತಕನಿಗೂ ಶ
ಯಿಲ್ಲ. ನಿನ್ನ ಭಕ್ತಿಶ್ರದ್ಧೆಗಳಿಂದ ಸಂತುಷ್ಟಳಾಗಿದ್ದೇನೆ. ನಿನಗೆ ಬೇಕ
ದುದನ್ನು ಕೇಳು.”

“ತಾಯಿ, ವಂಶೋದ್ಧಾರಕನಾದ ವೀರಪುತ್ರನನ್ನು ಸುದಕ್ಷಿಣೆಯು
ಕರುಣಿಸು.”

“ಹಾಗೆಯೇ ಆಗಲಿ. ಎಲೆಗಳಿಂದ ದೊನ್ನೆ ಮಾಡಿ ನನ್ನ ಹಾಲನ
ಕರೆದು ಕುಡಿ.”

“ನಿನ್ನ ಮಗನಿಗೂ ಮುನಿಯ ಹೋಮಾದಿವಿಧಿಗಳಿಗೂ ಅ
ಉಳಿದುದನ್ನು ಗುರುವಿನ ಅನುಜ್ಞೆ ಪಡೆದು ಸ್ವೀಕರಿಸುತ್ತೇನೆ.”

ಧೇನು ಮತ್ತಷ್ಟು ಪ್ರೀತೆಯಾದಳು. ಗುಹೆಯ ಬಳಿಯಿಂದ ಸಿ
ಯಾಸವಾಗಿ ಆಶ್ರಮಕ್ಕೆ ಬಂದುದಾಯಿತು. ನಡೆದ ಸಂಗತಿಯನ
ರಾಜನು ವಸಿಷ್ಠನಿಗೆ ಬಿನ್ನವಿಸಿದನು. ಸುದಕ್ಷಿಣೆಗೂ ತಿಳಿಸಿದನು. ವ
ಷ್ಠನ ಅಪ್ಪಣೆಯಾದ ಬಳಿಕ ಹಾಲು ಕುಡಿದನು.

ಮರುದಿನ ಪ್ರಾತಃಕಾಲ ರಾಜನ ವ್ರತವನ್ನು ಮುನಿ ಪೂರ್ತಿಗೊಳಿ
ಪಾರಣೆ ಮಾಡಿಸಿದನು; ಆಶೀರ್ವದಿಸಿ ರಾಜದಂಪತಿಗಳನ್ನು ರಾಜಧಾನಿ
ಕಳುಹಿಸಿಕೊಟ್ಟನು. ಪೂರ್ಣಮನೋರಥರಾದ ಅವರು ರಥಾರೂಢರಾ
ತೆರಳಿದರು.

೨

ನೂರನೆಯ ಅಶ್ವಮೇಧ

ವ್ರತದಿಂದ ಕ್ಷೀಣರಾಗಿದ್ದರೂ ಪ್ರಸನ್ನವದನರಾದ ರಾಜರಾಣಿ
ರನ್ನು ಪುರಜನರು ಕಂಡು ಸಂತುಷ್ಟರಾಗಿ ಅಭಿವಂದಿಸಿದರು. ರಾಜನ

ಮಂತ್ರಿಗಳ ಕೈಗೆ ಕೊಟ್ಟಿದ್ದ ರಾಜ್ಯಭಾರವನ್ನು ಪುನಃ ತಾನೇ ವಹಿಸಿಕೊಂಡನು.

ನಂದಿನಿಯ ಅನುಗ್ರಹದಿಂದ ರಾಣಿ ಗರ್ಭ ಧರಿಸಿದಳು. ರಾಜನು ಆಕೆಯ ಬಯಕೆಗಳನ್ನು ಸಖಿಯರಿಂದ ತಿಳಿದು ಪೂರೈಸುತ್ತಿದ್ದನು. ಪುಂಸವನ ಸೀಮಂತ ಮೊದಲಾದ ಸಂಸ್ಕಾರಗಳನ್ನು ಯಥಾವಿಧಿ ವೈಭವದಿಂದ ಮಾಡಿಸಿದನು. ನುರಿತ ದಾದಿಯರನ್ನೂ ಆಪ್ತರಾದ ವೈದ್ಯರನ್ನೂ ಇಟ್ಟುಕೊಂಡನು.

ನವಮಾಸ ಪೂರ್ಣವಾಗಲು ಪುತ್ರರತ್ನ ಜನಿಸಿದಾಗ ದಿಕ್ಕುಗಳು ಪ್ರಸನ್ನವಾದುವು. ಗಾಳಿ ಹಿತಕರವಾಗಿ ಬೀಸಿತು. ಎಲ್ಲೆಲ್ಲೂ ಶುಭೋದಯ ಚಿಹ್ನೆಗಳು. ರಾಜನ ಸಂತೋಷಕ್ಕೆ ಪಾರವಿಲ್ಲ. ಪುತ್ರೋತ್ಸವದ ವಾರ್ತೆ ಹೇಳಿದ ಅಂತಃಪುರ ಸೇವಕರಿಗೆ ಮಿತಿಮೀರಿದ ಉಡುಗೊರೆ. ಎವೆಯಿಕ್ಕದೆ ಸುತನ ಮುಖವನ್ನು ನೋಡುತ್ತ, ಚಂದ್ರದರ್ಶನದಿಂದ ಸಮುದ್ರ ಉಕ್ಕುವಂತೆ, ರಾಜನ ಸಂತೋಷ ಕೋಡಿವರಿಯಿತು. ರಾಜಕುಲದಲ್ಲಿ ಪುತ್ರೋತ್ಪತ್ತಿ, ಪಟ್ಟಾಭಿಷೇಕ, ಮೊದಲಾದ ಸಂತೋಷಕಾಲದಲ್ಲಿ ಸೆರೆಯಾಳುಗಳನ್ನು ಬಿಡುವುದು ಪದ್ಧತಿಯಾದರೂ ದಿಲೀಪನ ಪ್ರಜಾಪಾಲನೆಯ ಕಾಲದಲ್ಲಿ ತಪ್ಪುಗಾರರೇ ಇಲ್ಲವಾಗಿ ಹಾಗೆ ಬಿಡುವ ಸಂದರ್ಭವಿರಲಿಲ್ಲ. ಪಿತೃಋಣದ ಬಂಧನದಿಂದ ರಾಜನೇ ಬಿಡುಗಡೆ ಹೊಂದಿದನು.

ತಪೋವನದಿಂದ ವಸಿಷ್ಠನನ್ನು ಬರಮಾಡಿ ಜಾತಕರ್ಮವನ್ನು ಮಾಡಿಸಿದ್ದಾಯಿತು. ಗನಿಯಿಂದ ತೆಗೆದ ವಜ್ರವು ಸಾಣೆಗೆ ಹಿಡಿದ ಮೇಲೆ ಬೆಳಗುವಂತೆ ಶಿಶು ಬಹುವಾಗಿ ಶೋಭಿಸಿತು. ರಘು ಎಂದು ನಾಮಕರಣ ಹೊಂದಿದ ಮಗನು ದಿನ ಕಳೆಯುತ್ತ ತೊದಲ್ನುಡಿ ನುಡಿದು ತಡನರಿಸಿ ನಡೆದು ತಂದೆತಾಯಿಗಳಿಗೆ ಅತ್ಯಾನಂದವನ್ನುಂಟುಮಾಡಿದನು. ಹನ್ನೊಂದನೆಯ ವರ್ಷ ಉಪನಯನವಾಯಿತು. ಬಾಲಕನು ವಿದ್ಯಾಭ್ಯಾಸಕ್ಕೆ ಗುರುಗಳ ವಶಕ್ಕೆ ಹೋದನು. ಮೇಧಾಬಲದಿಂದ ರಾಜನೀತಿ ಮೊದಲಾದ ಶಾಸ್ತ್ರಗಳಲ್ಲಿ ಬಹು ಬೇಗ ನಿಪುಣನಾದನು. ನುರಿತ ಬಿಲ್ಲುಗಾರನಾದ ತಂದೆಯಿಂದಲೇ ಮಂತ್ರಯುಕ್ತವಾದ ಬಾಣಪ್ರಯೋಗ ಕಲಿತನು.

ಕರು ಗೂಳಿಯಾಗುವಂತೆ, ಕಲಭವು ಗಜೇಂದ್ರನಾಗುವಂತೆ, ರಘು ಶೈಶವವನ್ನು ದಾಟಿ ಮನೋಹರ ಶರೀರಿಯಾದ ತರುಣನಾದನು. ದಿಲೀ

ವನು ಬಹುಕಾಲದ ರಾಜ್ಯಭಾರದಿಂದ ದಣಿದಿದ್ದುದರಿಂದ ಮಗನ
ಯುವರಾಜ ಪದವಿಗೇರಿಸಿದನು.

ದಿಲೀಪ ಮಹಾರಾಜನು ಈ ಮೊದಲೇ ತೊಂಬತ್ತೊಂಬತ್ತು ಅ
ಮೇಧಗಳನ್ನು ನೆರವೇರಿಸಿದ್ದನು. ಈಗ ನೂರನೆಯದನ್ನು ಮಾಡಬ
ಕೆಂದು ಸಂಕಲ್ಪಿಸಿ ದೀಕ್ಷಿತನಾದನು. ಯಜ್ಞಾಶ್ವವನ್ನು ದೇಶಸಂಚಾರ
ಬಿಟ್ಟನು. ಅಶ್ವರಕ್ಷಣೆಗೆ ರಘು ಇತರ ರಾಜಪುತ್ರರನ್ನೂ ಸೈನ್ಯವನ
ಒಡಗೂಡಿ ಹೊರಟನು.

ನೂರು ಅಶ್ವಮೇಧಗಳನ್ನು ಮಾಡುವ ರಾಜರಿಗೆ ಎಡರುಗ
ನ್ನೊಡ್ಡುವುದು ಇಂದ್ರನ ಸ್ವಭಾವವಾದುದರಿಂದ ಯಜ್ಞಾಶ್ವವನ್ನು ಧನ
ರ್ಧಾರಿಗಳ ಎದುರೇ ಕಪಟದಿಂದ ಅಪಹರಿಸಿದನು. ಸೈನ್ಯವು ವಿಷಾ
ದಿಂದ ಕರ್ತವ್ಯಜ್ಞಾನಶೂನ್ಯವಾಗಿ ಸುಮ್ಮನೆ ನಿಂತಿತು. ಕರ್ಮಧರ್ಮ
ಯೋಗದಿಂದ ವಸಿಷ್ಠಧೇನು ನಂದಿನಿ ತಿರುಗಾಡುತ್ತ ಅಲ್ಲಿಗೆ ಬಂತು
ಆಕೆಯ ಮಹತ್ತ್ವವನ್ನರಿತ ರಘು ಪ್ರದಕ್ಷಿಣೆ ನಮಸ್ಕಾರಗಳನ್ನು ಮಾ
ಆಕೆಯ ಅಂಗಜಲದಿಂದ ಕಣ್ಣುಗಳನ್ನು ಶುದ್ಧಿಗೊಳಿಸಿದನು. ಆಗ ಅ
ನಿಗೆ ಸಾಮಾನ್ಯದೃಷ್ಟಿಗೆ ಕಾಣದ ವಸ್ತು ದೃಗ್ಗೋಚರವಾಗುವ ಶಕ್ತಿಬಂತು

ರಘು ಸುತ್ತಲೂ ದಿಟ್ಟಿಸಿದನು. ಪೂರ್ವದಿಕ್ಕಿನಲ್ಲಿ ಬಹು ಶ್ರಮ
ದಿಂದ ಯಾರೋ ಅಶ್ವವನ್ನು ಕೊಂಡೊಯ್ಯುವುದು ಕಾಣಿಸಿತು. ಹಸುರ
ಕುದುರೆಯೇರಿದ ಮತ್ತು ಸಾವಿರ ಕಣ್ಣುಗಳುಳ್ಳ ಆ ಸವಾರನು ಇಂದ್ರ
ನೆಂದು ತಿಳಿಯಿತು. ಆಕಾಶವ್ಯಾಪಿಯಾದ ಉಚ್ಚಸ್ವರದಿಂದ ಇಂದ್ರನನ್ನು
ತಡೆಯುತ್ತ ಹೇಳಿದನು: "ಹೇ ದೇವೇಂದ್ರ, ಯಜ್ಞಹವಿರ್ಭಾಗವನ್ನು
ಸ್ವೀಕರಿಸುವವರಲ್ಲಿ ನೀನು ಮೊದಲಿಗನು. ಯಜ್ಞಕ್ಕೆ ವಿಘ್ನವನ್ನುಂಟು
ಮಾಡಲು ಹೊರಟೆಯೇಕೆ? ದಿವ್ಯದೃಷ್ಟಿಯುಳ್ಳ ತ್ರಿಲೋಕೇಶನಾದ ನೀನು
ವಿಘ್ನಕಾರಿಗಳನ್ನು ದಂಡಿಸುವುದಕ್ಕೆ ಬದಲಾಗಿ ಸ್ವತಃ ಹೀಗೆ ಮಾಡಿದರೆ
ವೇದೋಕ್ತ ಕರ್ಮಗಳು ನಡೆಯುವುದೆಂತು? ಅಶ್ವಮೇಧ ಮಹಾಯಜ್ಞದ
ಮುಖ್ಯಾಂಗವಾದ ಈ ಕುದುರೆಯನ್ನು ನೀನು ಬಿಡುವುದು ನ್ಯಾಯ."

"ರಾಜಪುತ್ರ, ನೀನು ಹೇಳುವುದೇನೋ ಸರಿ. ಆದರೆ ಕೀರ್ತಿ
ಯನ್ನು ಬೇರೆಯವರು ಅಪಹರಿಸುವಾಗ ಅದನ್ನು ರಕ್ಷಿಸಿಕೊಳ್ಳಬೇಕಾಗು
ತ್ತದೆ. ನನಗೆ ಕೀರ್ತಿಯೇ ಧನ. ಶತಕ್ರತು ಎಂದು ಲೋಕಪ್ರಸಿದ್ಧ

ನಾದ ನನ್ನ ಕೀರ್ತಿಯನ್ನು ನಿನ್ನ ತಂದೆ ಅಪಹರಿಸಲೆಳಸಿರುವನಲ್ಲ! ವಿಷ್ಣು ವೊಬ್ಬನೇ ಪುರುಷೋತ್ತಮ, ಶಿವನೊಬ್ಬನೇ ಮಹೇಶ್ವರ. ಹಾಗೆಯೇ ನಾನೊಬ್ಬನೇ ಶತಕ್ರತು. ಈ ಹೆಸರು ಇನ್ನೊಬ್ಬನಿಗೆ ಹೋಗುವುದಿಲ್ಲ. ಹೀಗಿರುವುದರಿಂದ ಕಪಿಲ ಮಹರ್ಷಿಯನ್ನು ಧ್ಯಾನಿಸಿ ಈ ಕುದುರೆಯನ್ನು ತಪ್ಪಿಸಿದೆ. ನಿನ್ನ ಪ್ರಯತ್ನ ನಿಲ್ಲಿಸು. ನಿನ್ನ ಪೂರ್ವಜರಾದ ಸಗರ ಪುತ್ರರ ದಾರಿ ತುಳಿಯಬೇಡ."

"ಯಶೋಧನರು ಯಶೋರಕ್ಷಣೆ ಮಾಡಬೇಕು. ಆದರೆ ನೀನು ಮಾಡಿರುವುದು ಹೇಡಿಗಳ ಕೆಲಸ. ಕುದುರೆಯನ್ನು ಬಿಟ್ಟುಕೊಡಲು ಒಡಂಬಡದಿದ್ದರೆ ಶಸ್ತ್ರ ಹಿಡಿ. ರಘುವನ್ನು ಜಯಿಸದೆ ಕುದುರೆಯ ನ್ನೊಯ್ಯಕೂಡದು."

ಹೀಗೆಂದ ರಘು ಹೆದೆಯೇರಿಸಿ ಮೇಲ್ಮೊಗವಾಗಿ ಧೀರನಾಗಿ ನಿಂತು ಬಲವಾಗಿ ಬಾಣಬಿಟ್ಟನು. ಇಂದ್ರನೂ ಬಾಣ ತೊಟ್ಟನು. ಬಹಳ ಹೊತ್ತು ಅವರೊಳಗೆ ಯುದ್ಧ ನಡೆಯಿತು. ಅರ್ಧಚಂದ್ರಾಕೃತಿಯ ಬಾಣದಿಂದ ರಘು ಇಂದ್ರಧನುಸ್ಸಿನ ಶಿಂಜಿನಿಯನ್ನು ಕತ್ತರಿಸಿದನು. ಇಂದ್ರನಿಗೆ ಕೋಪವೇರಿ ಬಿಲ್ಲನ್ನೆಸೆದನು. ಹಿಂದೆ ಪರ್ವತಗಳ ರೆಕ್ಕೆ ಗಳನ್ನು ತುಂಡರಿಸಿದ ವಜ್ರಾಯುಧವನ್ನು ತೆಗೆದು ರಘುವಿನ ಮೇಲೆ ಹೇರಿದನು. ಆ ಹೊಡೆತದಿಂದ ರಘು ಪ್ರಜ್ಞೆ ತಪ್ಪಿ ಬಿದ್ದರೂ ಕ್ಷಣಮಾತ್ರ ದಲ್ಲಿ ಚೇತರಿಸಿಕೊಂಡು ಪುನಃ ಯುದ್ಧೋನ್ಮುಖನಾದನು. ಅವನ ಅದ್ವಿ ತೀಯ ಸಾಮರ್ಥ್ಯವನ್ನುನೋಡಿದ ಇಂದ್ರನು ಸಂತೋಷಪಟ್ಟು ಅವನನ್ನು ಬಾಯಿ ತುಂಬ ಹೊಗಳಿದನು.

"ರಾಜಪುತ್ರ, ನನ್ನ ವಜ್ರಾಘಾತವನ್ನು ಇದುವರೆಗೆ ಯಾರೂ ಸಹಿ ಸಿಲ್ಲ. ನಿನ್ನ ಧೈರ್ಯಶೌರ್ಯಗಳನ್ನು ಮೆಚ್ಚಿದೆ. ಈ ಕುದುರೆ ಹೊರತು ಬೇರೇನು ಬೇಕಾದರೂ ಕೇಳು, ಕೊಡುತ್ತೇನೆ."

ಬಾಣ ತೆಗೆಯಲು ಕೈಹಾಕಿದ ರಘು ಈ ಮಾತಿನಿಂದ ತುಷ್ಟನಾಗಿ, "ವಿಧಿಪೂರ್ವಕ ಮಾಡಿದ ಈ ಯಜ್ಞದ ಪೂರ್ಣಫಲ ತಂದೆಗೆ ಬರಲಿ. ಈ ವಾರ್ತೆಯನ್ನು ನಿನ್ನ ಸೇವಕರೇ ತಂದೆಗೆ ತಿಳಿಸಲಿ. ಅವನು ಹೇಳಿ ದಂತೆ ನಾನು ಮಾಡುತ್ತೇನೆ," ಎಂದನು.

ದಿಲೀಪನಿಗೆ ಸುದ್ದಿ ಕಳುಹಿಸಿ ಇಂದ್ರನು ಆಕಾಶಕ್ಕೇರಿದನು. ರಘು

ಅಯೋಧ್ಯೆಗೆ ಮರಳಿ ತಂದೆಗೆ ಸಾಷ್ಟಾಂಗವೆರಗಿದನು; ತಂದೆ ಮಗನನ ಆನಂದದಿಂದ ಅಪ್ಪಿಕೊಂಡು ಮೈ ಸವರುತ್ತ ಅಭಿನಂದಿಸಿದನು.

ತನ್ನ ತೊಂಬತ್ತೊಂಬತ್ತು ಅಶ್ವಮೇಧಗಳೇ ಸ್ವರ್ಗಸೋಪಾ ವೆಂದು ತಿಳಿದ ದಿಲೀಪನು ಶಾಸ್ತ್ರೋಕ್ತವಾಗಿ ಮಗನಿಗೆ ಸಿಂಹಾಸನವನೊ ಪ್ಪಿಸಿ ರಾಣಿಯೊಡನೆ ವಾನಪ್ರಸ್ಥ ಸ್ವೀಕಾರಮಾಡಿದನು.

೩

ರಘುವಿನ ಜೈತ್ರಯಾತ್ರೆ

ದಿನಾಂತದಲ್ಲಿ ಸೂರ್ಯನ ತೇಜಸ್ಸು ಅಗ್ನಿಗೆ ದೊರೆಯುವಂತೆ ತಂದೆಯಿಂದ ರಾಜ್ಯಸೂತ್ರ ರಘುವಿಗೆ ದಾಟಿತು. ವೈರಿರಾಜರ ಮನಸ್ಸಿನಲ್ಲಿ ಮೊದಲು ಹೊಗೆಯುತ್ತಿದ್ದ ಸಂತಾಪಾಗ್ನಿ ಈಗ ಜ್ವಲಿಸಿತು. ಪ್ರಜಾಲೋಕ ತೃಪ್ತಿಗೊಂಡಿತು. ಅಭಿಷಿಕ್ತನಾದ ರಘುವಿನ ಕಾಂತಿ ಬೆಳಗಿತು. ವಂದಿಮಾಗಧರ ಮುಖದಿಂದ ಸರಸ್ವತಿಯೇ ಸ್ತುತಿಸುವಂತೆ ತೋರಿತು. ಅನೇಕ ಮಹಾರಾಜಾಧಿರಾಜರು ಅನುಭವಿಸಿದ ರಾಜ್ಯವಾದರೂ ಇಷ್ಟು ಚೆನ್ನಾಗಿ ಅರಸುತನ ನಡೆಸಿದವರು ಯಾರೂ ಇರಲಿಲ್ಲವೆಂಬಂತಿತ್ತು. ಯೋಗ್ಯವಾದ ಶಿಕ್ಷೆರಕ್ಷೆಗಳನ್ನೀಯುತ್ತಿದ್ದ ಆ ಕಾಲ, ಮಿತೋಷ್ಣಶೀತಲವಾದ ಮಲಯಮಾರುತದಂತೆ ಹಿತಕರವಾಗಿತ್ತು. ಹಣ್ಣುಗಳಾದಾಗ ಹೂವನ್ನು ಮರೆಯುವಂತೆ ಪ್ರಜೆಗಳು ರಘುವಿನ ಜನಪ್ರಿಯತೆಯಿಂದ ದಿಲೀಪನನ್ನು ಮರೆತರು. ಪ್ರಜಾರಂಜನೆಯಿಂದ ರಾಜನೆಂಬ ಹೆಸರು ಅವನಿಗೆ ಒಪ್ಪಿತು.

ಪೌರಜನರಕ್ಷಣೆ ಮತ್ತು ಗ್ರಾಮಾಂತರಸಂಪರ್ಕಸೌಕರ್ಯ ಉತ್ತಮ ಗೊಂಡಿತು. ಅಧಿಕಾರಿವರ್ಗಕ್ಕೆ ಸರಿಯಾದ ಸ್ಥಾನಮಾನ ದೊರೆಯಿತು. ಗುಪ್ತಚಾರರು ನೇಮಿಸಲ್ಪಟ್ಟರು. ಪೂಜ್ಯರಿಗೆ ಪೂಜೆ ಸಂದಿತು. ಅರ್ಥಿಗಳಿಗೆ ಸೂಕ್ತವಾದ ದಾನ ಸಿಕ್ಕುವಂತಾಯಿತು.

ವರ್ಷರ್ತು ಮುಗಿದು ಶರದೃತು ಕಾಣಿಸಿಕೊಂಡಿತು. ಇಂದ್ರಧನುಸ್ಸು ಕಣ್ಮರೆಯಾಯಿತು. ರಘು ಕೂಡಲೇ ಧನುರ್ಧಾರಿಯಾಗಿ ವಿಜಯಯಾತ್ರೆಗೆ ಹೊರಟನು. ಇಂದ್ರ ಮತ್ತು ರಘು ಪ್ರಜಾಹಿತಕ್ಕೋಸ್ಕರ ಪರ್ಯಾಯವಾಗಿ ಬಿಲ್ಲು ಹಿಡಿಯುವವರೆಂದು ತೋರಿತು.

ಚೈತ್ರಯಾತ್ರೆಗೆ ಹೊರಟ ರಘುವಿಗೆ ಶರದೃತುವಿನ ಸಾಹ್ಯವಿತ್ತು ಅವನ ಛತ್ರಚಾಮರಗಳು ಕಮಲ ಮತ್ತು ಕಾಶಕುಸುಮಗಳಂತೆ ಕಂಗೊಳಿಸಿದುವು. ಪ್ರಸನ್ನವದನನಾದ ರಘು ಶುಭ್ರಪ್ರಭೆಯ ಚಂದ್ರನಂತೆ ಶೋಭಿಸಿದನು. ರಘುವಿನ ಧವಳಕೀರ್ತಿಯು ಹಂಸಶ್ರೇಣಿಯಲ್ಲಿಯೂ ನಕ್ಷತ್ರಸ್ತೋಮದಲ್ಲಿಯೂ ಕಮಲಾವೃತ ಸರಸ್ಸುಗಳಲ್ಲಿಯೂ ಹರಡಿದಂತಿತ್ತು. ಹೊಲಗದ್ದೆಗಳಲ್ಲಿ ಬೆಳೆ ಕಾಯುವ ಕನ್ಯೆಯರು ಛಾಯಾಸ್ಥಳಗಳಲ್ಲಿ ಕುಳಿತು ರಘುಚರಿತ್ರೆಯ ಅದ್ಭುತ ಘಟನೆಗಳನ್ನು ಹಾಡಿ ಉಲ್ಲಾಸಚಿತ್ತರಾಗಿದ್ದರು. ಅವನ ಈ ಯಾತ್ರಾಭ್ಯುದಯದಿಂದ ಶತ್ರುಗಳ ಮನಸ್ಸು ಕದಡಿತು.

ನದೀಪ್ರವಾಹ ಕಡಿಮೆಯಾಗಿ ದಾಟಿ ಹೋಗಲು ಅನುಕೂಲವಾಗಿತ್ತು. ಕೆಸರು ಒಣಗಿ ದಾರಿ ನಡೆಯಲು ತೊಂದರೆ ತಪ್ಪಿತ್ತು. ಅವನ ದಿಗ್ವಿಜಯೋತ್ಸಾಹವನ್ನು ಶರತ್ತು ಪ್ರೇರಿಸಿತು. ಮಳೆಗಾಲ ಕಳೆದ ಸೂರ್ಯನ ತಾಪವೂ ರಘುಪ್ರತಾಪವೂ ದಶದಿಕ್ಕುಗಳನ್ನು ಆಕ್ರಮಿಸಿದುವು. ಶಾಂತಿಕರ್ಮಗಳನ್ನು ಮಾಡಿ ಚತುರಂಗಬಲದೊಡನೆ ರಘು ಹೊರಟನು. ಬೀದಿಯಲ್ಲಿ ಪಟ ಣಿಗರು ಹೂ ಅರಳುಗಳನ್ನು ಚೆಲ್ಲಿದರು.

ಇಂದ್ರಸಮಾನ ಬಲವುಳ್ಳ ರಘು ಇಂದ್ರನ ದಿಕ್ಕಾದ ಪೂರ್ವಕ್ಕೆ ಮೊದಲು ಹೊರಟನು. ಸೈನ್ಯಪದಾಘಾತದಿಂದೆದ್ದ ಧೂಳಿಯಿಂದ ಆಕಾಶವು ಭೂಮಿಯಂತೆ ತೋರಿತು. ಕಾಲಮೇಘಗಳಂತಿರುವ ಆನೆಗಳ ಸಂಚಾರದಿಂದ ಭೂಮಿಯು ಆಕಾಶಭ್ರಮೆಯನ್ನು ಹುಟ್ಟಿಸಿತು.

ಸೇನೆ ಮುನ್ನಡೆದಾಗ ಮರುಭೂಮಿಗಳು ಜಲಮಯವಾದುವು. ಕಗ್ಗಾಡುಗಳು ಬೆಳಗಿದುವು. ವಂಗಸಮುದ್ರದ ಕಡೆಗೆ ರಘುವನ್ನು ಹಿಂಬಾಲಿಸಿ ನಡೆಯುವ ಆ ಮಹಾಸೈನ್ಯವನ್ನು ನೋಡಿದರೆ ಈಶ್ವರನ ಜಟಾಮಂಡಲದಿಂದ ಪ್ರವಹಿಸಿದ ಗಂಗೆ, ಭಗೀರಥನ ಹಿಂದೆ ಹೋದಂತೆ ಕಾಣಿಸುತ್ತಿತ್ತು.

ಕಾಡಾನೆಗಳ ಹಿಂಡು ಮುಂದೊತ್ತುವಾಗ ಎದುರಿನ ಮರಗಳನ್ನು ಸಮೂಲ ಕಿತ್ತು ಬಿಸಾಡಿದಂತೆ ರಘುಸೈನ್ಯವು ಶತ್ರುರಾಜರನ್ನು ನಿರ್ಮೂಲಗೊಳಿಸಿ ನಿರಾತಂಕವಾಗಿ ಮುಂದೆ ಹೋಯಿತು. ಪೂರ್ವ ಸಾಗರ ತೀರದಲ್ಲಿ ಕಾಲವರ್ಣದ ತಾಲವೃಕ್ಷಗಳು ರಾರಾಜಿಸುತ್ತಿದ್ದುವು. ಕರಾವಳಿ.

ಯಲ್ಲಿ ಯುದ್ಧನೌಕೆಗಳನ್ನು ತಯಾರಿಸುವ ವಂಗದೇಶೀಯರನ್ನು ರಘು ಸೋಲಿಸಿ ಗಂಗಾ ತೀರದಲ್ಲಿ ತನ್ನ ಜಯಸ್ತಂಭವನ್ನು ಸ್ಥಾಪಿಸಿದನು. ಬತ್ತದ ಗಿಡಗಳನ್ನು ಒಮ್ಮೆ ಕಿತ್ತು ಪುನಃ ನಾಟಿ ನೆಟ್ಟರೆ ಆ ಸಸಿಗಳು ಚೆನ್ನಾಗಿ ಬೆಳೆದು ತೆನೆ ತುಂಬಿ ಬಾಗುವಂತೆ ಒಮ್ಮೆ ಸೋತು ಪುನಃ ಸ್ವಸ್ಥಾನ ಸ್ಥಾಪಿತರಾದ ರಾಜರು ದ್ರವ್ಯರಾಶಿಯನ್ನು ಹೊತ್ತು ರಘುಪಾದಗಳಿಗೆ ವಂದಿಸಿದರು.

ಮುಂದೆ ರಘು ಕಪಿಶಾ ನದಿಯ ಒಳಗೆ ಹೋಗಿ ಆನೆಗಳನ್ನು ನದಿಯಲ್ಲಿ ನಿಲ್ಲಿಸಿ ತಾತ್ಕಾಲಿಕ ಸೇತುಬಂಧನದಿಂದ ದಾಟಿದನು. ಉತ್ಕಲ ದೇಶವನ್ನು ಜಯಿಸಿ ಕಳಿಂಗ ದೇಶಕ್ಕೆ ಹೋದನು. ಮಹೇಂದ್ರ ಪರ್ವತದಲ್ಲಿ ರಘು ಸೈನ್ಯವು ಬಂದು ನಿಂತುದನ್ನು ಕಾಳಿಂಗನು ತಿಳಿದು ಗಜಸೈನ್ಯ ಸಮೇತನಾಗಿ ರಘುವನ್ನೆದುರಿಸಿದನು. ಅಂದು ಬಾಣವರ್ಷದಿಂದ ದುರ್ದಿನವಾಯಿತು. ರಘುವಿಗೆ ಜಯಶ್ರೀ ಒಲಿದಳು. ಸೈನಿಕರು ವೀಳ್ಯದೆಲೆಗಳಿಂದ ದೊನ್ನೆಗಳನ್ನು ಮಾಡಿ ಶತ್ರುಕೀರ್ತಿಯಂತಿರುವ ಮದ್ಯವನ್ನು ಹೀರಿ ವಿಜಯೋಲ್ಲಾಸವನ್ನು ತೋರ್ಪಡಿಸಿದರು. ರಘು ಮಹೇಂದ್ರನ ಸಂಪತ್ತನ್ನು ಮಾತ್ರ ಸೆಳೆದು ದೇಶವನ್ನು ಅವನಿಗೆ ಮರಳಿ ಕೊಟ್ಟನು.

ಅಲ್ಲಿಂದ ಅವನು ದಕ್ಷಿಣಾಭಿಮುಖನಾದನು. ಅಲ್ಲಿನ ಅಡಕೆ ಮರಗಳ ಸಾಲು ಸುಂದರವಾಗಿ ತೋರಿತು. ದಕ್ಷಿಣ ದಿಕ್ಕಿನಲ್ಲಿ ಸೂರ್ಯತೇಜಸ್ಸು ಕಡಿಮೆಯಾಗಿದ್ದರೂ ಪಾಂಡ್ಯರಾಜನು ರಘುತೇಜಸ್ಸನ್ನು ಸಹಿಸಲಾರದೆ ಹೋದನು. ತಾಮ್ರಪರ್ಣೀ ನದಿ ಸಮುದ್ರ ಸಂಗಮವಾಗುವೆಡೆ ಇರುವ ಮುತ್ತು ರತ್ನಗಳ ರಾಶಿಯನ್ನು ಅಲ್ಲಿನ ರಾಜನು ಕೀರ್ತಿಯನ್ನೇ ಕಾಣಿಕೆಯಾಗಿ ಕೊಡುವಂತೆ ರಘುವಿಗೆ ಕೊಟ್ಟನು. ಅಲ್ಲಿಂದ ಸೇನೆ ಪಶ್ಚಿಮಕ್ಕೆ ತಿರುಗಿತು. ಪುರಾತನ ಕಾಲದಲ್ಲಿ ಸಹ್ಯಾದ್ರಿಯ ವರೆಗೂ ಪಶ್ಚಿಮ ಸಮುದ್ರ ಹರಡಿದ್ದು ಪರಶುರಾಮನು ಅದನ್ನು ಹಿಂದಕ್ಕೊತ್ತಿದುದರಿಂದ ಪಡುಕರಾವಳಿಯಾಯಿತೆಂದು ಒಂದು ಐತಿಹ್ಯವಿದೆ. ಆ ಕರಾವಳಿಯಲ್ಲಿ ನಿಂತ ರಘು ಸೈನ್ಯವನ್ನು ನೋಡುವಾಗ ಪುನಃ ಸಹ್ಯಾದ್ರಿಯ ವರೆಗೆ ಪಡುಗಡಲು ಹಬ್ಬಿತೋ ಎಂಬಂತೆ ತೋರಿತು. ಸೇನೆ ಬಂದುದನ್ನು ಕೇಳಿ ಕೇರಳ ಸ್ತ್ರೀಯರು ಅಲಂಕಾರ ವಸ್ತುಗಳನ್ನು ಅಲ್ಲಲ್ಲೇ ಬಿಟ್ಟು ಓಡಿಹೋದರು.

ಮುರಲಾ ನದೀ ತೀರದ ಕೇತಕೀವನಗಳಲ್ಲಿ ಹಾದು ಹೋಗುವಾಗ

ಸೈನಿಕರ ವಸ್ತ್ರಗಳಿಗೆ ಪುಷ್ಪಧೂಳಿ ತಾಗಿ ಅವರು ಘಮಘಮಿಸಿದರು. ಕೇರಳ ಪ್ರದೇಶದಲ್ಲಿ ವಸತಿ ಸೌಕರ್ಯವನ್ನು ಪಡೆಯಲು ಪರಶುರಾಮನು ಸಮುದ್ರದೇವನನ್ನು ಪ್ರಾರ್ಥಿಸಬೇಕಾಯಿತು. ಆ ಸಮುದ್ರದೇವನು ರಘುವಿಗೆ ಕರಾವಳಿಯ ತನ್ನ ಸಾಮಂತ ರಾಜರಿಂದ ಅನರ್ಘ್ಯ ರತ್ನಗಳನ್ನು ಕಾಣಿಕೆಯಾಗಿ ಕೊಡಿಸಿದನು.

ರಘು ಮುಂದೆ ನೆಲದಾರಿಯಿಂದ ಪಾರಸೀದೇಶವನ್ನು ಸೇರಿದನು. ಅಶ್ವಸೈನ್ಯ ಪ್ರಧಾನವಾದ ಆ ರಾಜ್ಯದಲ್ಲಿ ನಡೆದ ತುಮುಲ ಯುದ್ಧದಲ್ಲಿ ಗಡ್ಡ ಮೀಸೆಯ ಯವನರ ತಲೆಬುರುಡೆಗಳುರುಳಿದುವು. ಉಳಿದವರು ಬೋಳುತಲೆಯಿಂದ ಶರಣಾಗತರಾದರು. ಸೈನಿಕರು ದ್ರಾಕ್ಷೆ ತೋಟದಲ್ಲಿ ಚರ್ಮಗಳನ್ನು ಹಾಸಿ ದ್ರಾಕ್ಷರಸ ಕುಡಿಯುತ್ತ ಜಯಾನಂದ ತುಂದಿಲರಾದರು.

ಸೋಲನ್ನರಿಯದ ರಘುಸೇನೆ ಉತ್ತರಾಭಿಮುಖವಾಯಿತು. ಕುದುರೆಗಳು ಸಿಂಧೂನದಿಯ ದಡದಲ್ಲಿ ಹೊರಳಾಡಿ ಶ್ರಮ ಪರಿಹಾರ ಮಾಡಿಕೊಂಡುವು. ರಘು ಅಲ್ಲಿರುವ ಹೂಣರನ್ನು ಗೆದ್ದು ಕಾಂಭೋಜ ದೇಶವನ್ನು ಹೊಕ್ಕನು. ಆನೆಗಳನ್ನು ಕಟ್ಟಿಹಾಕಿದ ಮರಗಳು ಬಗ್ಗುವಂತೆ ಅಲ್ಲಿಯ ರಾಜನು ರಘುವಿಗೆ ಬಾಗಿದನು; ಉತ್ತಮ ಜಾತಿಯ ಕುದುರೆಗಳನ್ನೂ ಸುವರ್ಣ ರಾಶಿಯನ್ನೂ ಸಮರ್ಪಿಸಿದನು.

ಇನ್ನುಳಿದುದು ಹಿಮಾಲಯ. ರಘು ಅಶ್ವಾರೂಢನಾಗಿ ಸಸೈನ್ಯನಾಗಿ ಪರ್ವತವನ್ನೇರಿದನು. ಅವನಿಗೆ ಸಮಬಲವುಳ್ಳ ಸಿಂಹಗಳು ಗುಹೆಗಳಲ್ಲಿದ್ದುವು. ಅವು ಸೈನ್ಯಘೋಷವನ್ನು ಕೇಳಿದರೂ ಹೆದರದೆ ಕತ್ತು ತಿರುಗಿಸಿ ನೋಡಿದುವು. ಪರ್ವತ ಪ್ರಾಂತದಲ್ಲೆಲ್ಲ ಭೂರ್ಜಮರದ ತರಗೆಲೆಯ ಮರ್ಮರ ಶಬ್ದ ಕೇಳಿಸುತ್ತಿತ್ತು. ವೇಣುವನವನ್ನು ಹಾಯುವ ವಾಯು ಇಂಪಾಗಿ ಸ್ವರಗೈದಿತು. ಗಂಗಾಶೀಕರದಿಂದ ವಾಯುಮಂಡಲ ತಂಪಾಗಿತ್ತು. ಪುನ್ನಾಗ ವೃಕ್ಷದ ನೆರಳಿನಲ್ಲಿ ಕಸ್ತೂರಿಯ ಸುವಾಸನೆ ತುಂಬಿರುವ ಶಿಲೆಗಳಲ್ಲಿ ಕುಳಿತ ರಾಜನ ಮತ್ತು ಸೈನಿಕರ ಆಯಾಸ ಇಂಗಿತು. ದೇವದಾರುಗಳಿಗೆ ಕಟ್ಟಿದ ಆನೆಗಳ ಸರಪಣಿಯ ಘರ್ಷಣೆಯಿಂದ ಬೆಂಕಿಯ ಕಿಡಿಗಳು ಹೊರಟುವು. ಜ್ಯೋತಿರ್ಲತೆಗಳಿಂದ ರಾತ್ರಿಯೆಲ್ಲ ಎಣ್ಣೆಯಿಲ್ಲದೆ ದೀಪಗಳಾದುವು.

ಅಲ್ಲಿನ ಗಣಗಳೊಡನೆ ಭೀಕರ ಯುದ್ಧವಾಯಿತು. ಉತ್ಸವ ಸಂಕೇತರೆಂಬ ಗಣದವರು ಉತ್ಸಾಹಹೀನರಾದರು. ಅವರು ಕಾಣಿಕೆ ಕೊಟ್ಟ ವಸ್ತ್ರಗಳಿಂದ ಹಿಮಾಲಯದ ಹಿರಿತನ ರಘುವಿಗೆ ತಿಳಿಯಿತು. ಗಣಗಳನ್ನು ಸೋಲಿಸಿದ ರಾಜನ ಪರಾಕ್ರಮ ಆ ಪ್ರದೇಶದಲ್ಲೆಲ್ಲ ಜನ ಜನಿತವಾಯಿತು. ಅವನು ಅಲ್ಲಿ ಅಚಲಕೀರ್ತಿರಾಶಿಯನ್ನು ಬಿಟ್ಟು ಮುಂದೆ ಹೋದನು.

ಲೌಹಿತ್ಯಾ ನದಿಯನ್ನು ದಾಟಿದಾಗ ಪ್ರಾಗ್‌ಜ್ಯೋತಿಷ ದೇಶ ಬಂತು. ಅಲ್ಲಿನ ರಾಜನು ಹೆದರಿ ನಡುಗಿ ಶರಣಾಗತನಾದನು. ಮುಂದಿನ ದೇಶ ಕಾಮರೂಪ, ಆನೆಗಳಿಗೆ ಹೆಸರಾದುದು. ವೈರಿಗಳನ್ನು ಜಯಿಸಲು ಸಹಾಯಕವಾಗುವ ತನ್ನ ಆನೆಗಳನ್ನು ರಾಜನು ರಘುವಿಗೆ ಸಮರ್ಪಿಸಿ ಸೇವೆಸಲ್ಲಿಸಿ ರತ್ನಪುಷ್ಪಗಳಿಂದ ಅವನ ಪಾದಪೀಠವನ್ನು ಪೂಜಿಸಿದನು.

೪

ಕೌತ್ಸನ ಗುರುದಕ್ಷಿಣೆ

ನಾಲ್ಕು ದಿಕ್ಕುಗಳನ್ನೂ ಜಯಿಸಿದ ರಘು ಅಯೋಧ್ಯೆಯೆಡೆಗೆ ತಿರುಗಿದನು. ಮೇಘಗಳು ನೀರನ್ನು ಸಂಗ್ರಹಿಸಿ ಜನಹಿತಕ್ಕೋಸ್ಕರ ಮಳೆಗರೆಯುವಂತೆ, ಮಹಾಪುರುಷರು ಧನಸಂಗ್ರಹಮಾಡಿ ಬಡಜನರಿಗೆ ಸಹಾಯ ನೀಡುವಂತೆ, ವಿಜಯಶಾಲಿಗಳಾದ ರಾಜರು ತಾವು ಜಯಿಸಿದ ರಾಜ್ಯಗಳಲ್ಲಿ ದೊರೆತ ಅತುಲೈಶ್ವರ್ಯವನ್ನೆಲ್ಲ ವಿಶ್ವಜಿತ್ ಯಜ್ಞದಲ್ಲಿ ದಾನರೂಪದಿಂದ ಕೊಡುವ ಪದ್ಧತಿಯನ್ನನುಸರಿಸಿ ರಘು ಈಗ ವಿಶ್ವಜಿತ್ ಯಜ್ಞವನ್ನು ಕೈಕೊಂಡನು.

ರಘುವಿನ ದಿಗ್ವಿಜಯಕಾಲದಲ್ಲಿ ಸೋತ ರಾಜರೆಲ್ಲ ಯಜ್ಞಕ್ಕೆ ಬಂದರು. ರಘು ಅವರನ್ನು ಗೌರವದಿಂದ ಸತ್ಕರಿಸಿದನು. ತಾವು ಸೋತವರೆಂಬುದನ್ನೇ ಅವರು ಮರೆಯುವಂತಾಯಿತು. ಯಜ್ಞಾವಸಾನದಲ್ಲಿ, ಛತ್ರಧ್ವಜವಜ್ರಾದಿ ರೇಖಾಚಿಹ್ನೆಗಳಿರುವ ರಘುಚರಣಗಳಿಗೆರಗಿ ಅವರು ತಮ್ಮ ತಮ್ಮ ದೇಶಗಳಿಗೆ ಮರಳಿದರು.

ಅದೇ ಕಾಲಕ್ಕೆ ಸರಿಯಾಗಿ ರಘುವಿನ ಬಳಿಗೆ ಕೌತ್ಸನೆಂಬ ಪ್ರೌಢ ಬ್ರಹ್ಮಚಾರಿಯೊಬ್ಬನು ಬಂದನು. ಅವನು ವರತಂತು ಮಹರ್ಷಿಯ ಶಿಷ್ಯ.

ವಿದ್ಯಾಭ್ಯಾಸ ಮುಗಿಸಿ ಗುರುದಕ್ಷಿಣೆಯನ್ನು ಕೊಡಬೇಕಾದ ಸಂದರ್ಭದಲ್ಲಿ ಆ ಹಣವನ್ನು ಸಂಪಾದಿಸುವುದೇ ಅವನ ಉದ್ದೇಶ.

ಅತಿಥಿ ಸೇವಾತತ್ಪರನಾದ ರಘು ತನ್ನಲ್ಲಿದ್ದ ಚಿನ್ನಬೆಳ್ಳಿಯ ಪಾತ್ರೆಗಳನ್ನೆಲ್ಲ ಈಗಾಗಲೇ ದಾನಮಾಡಿದ್ದುದರಿಂದ ಮೃತ್ಪಾತ್ರೆಯಲ್ಲಿ ಪೂಜಾ ದ್ರವ್ಯಗಳನ್ನಿಟ್ಟುಕೊಂಡು ಕೌತ್ಸನನ್ನು ಇದಿರ್ಗೊಂಡು ಅರ್ಘ್ಯಪಾದ್ಯಾದಿಗಳಿಂದ ಉಪಚರಿಸಿ ಆಸನದಲ್ಲಿ ಕುಳ್ಳಿರಿಸಿ ಅಂಜಲಿಬದ್ಧನಾಗಿ ಕುಶಲ ಪ್ರಶ್ನೆ ಮಾಡಿದನು.

"ಮುನಿಶ್ರೇಷ್ಠ, ನಿನ್ನ ವಿದ್ಯಾಗುರು ವೇದಶಾಸ್ತ್ರಪಾರಂಗತ ವರತಂತು ಮಹರ್ಷಿ ಕುಶಲಿಯಷ್ಟೆ? ಇಂದ್ರಧೈರ್ಯಕುಠಾರಪ್ರಾಯವಾದ ತ್ರಿಕರಣಾತ್ಮಕವಾದ ಆ ಗುರುತಪಸ್ಸಿಗೆ ವಿಘ್ನವಾಗಿಲ್ಲವಲ್ಲ? ಬಹುಪ್ರಯಾಸದಿಂದ ಮಕ್ಕಳಂತೆ ಸಾಕಿದ ಆಶ್ರಮವೃಕ್ಷಗಳಿಗೆ ಸಿಡಿಲು ಬಿರುಗಾಳಿಗಳ ಬಾಧೆಯೊದಗಿಲ್ಲ ತಾನೆ? ಆಶ್ರಮದಲ್ಲಿ ಅನುಷ್ಠಾನಕ್ಕಾಗಿ ಹಾಕಿಟ್ಟ ದರ್ಭಾಸನಗಳಲ್ಲಿ ಹರಿಣಗಳು ಮಲಗಿದರೂ ಹೊಡೆದೋಡಿಸದೆ ಪ್ರೀತಿಯಿಂದ ಸಲಹಿದ ಅವುಗಳಿಗೆ ಯಾರ ತೊಂದರೆಯೂ ಇಲ್ಲವಲ್ಲವೆ? ಸ್ನಾನ ತರ್ಪಣಾದಿಗಳಿಗೆ ಉಪಯೋಗಿಸಲ್ಪಡುವ ಜಲಾಶಯಗಳನ್ನು ಯಾರೂ ಕೆಡಿಸುವುದಿಲ್ಲವಷ್ಟೆ? ನಿಮ್ಮ ಶರೀರ ಪೋಷಣೆಗೆ ಬೇಕಾದ ನೀವಾರಾದಿಧಾನ್ಯಗಳ ಬೆಳೆಗೆ ಮೃಗ ಬಾಧೆಯಿದೆಯೆ? ದ್ವಿಜೋತ್ತಮ, ತಪೋವಿಘ್ನಗಳು ಬಾರದಂತೆ ನೋಡಿಕೊಳ್ಳುವುದು ರಾಜನ ಕರ್ತವ್ಯವಾದುದರಿಂದ ಇಷ್ಟು ಉತ್ಸುಕನಾಗಿ ಕೇಳುತ್ತಿದ್ದೇನೆ. ತಾವು ಬಂದಿರುವುದು ಸ್ವಕಾರ್ಯಾರ್ಥವೋ ಗುರುಸಂದೇಶವಾಹಕವಾಗಿಯೋ? ನನ್ನಿಂದಾಗಬೇಕಾದುದೇನೆಂದು ಬೆಸಸಿದರೆ ಅದನ್ನು ನಿರ್ವಹಿಸಿ ಕೃತಕೃತ್ಯನಾಗುವೆನು."

ರಘುಹಸ್ತದಲ್ಲಿದ್ದ ಅರ್ಘ್ಯಪಾತ್ರೆಯನ್ನು ನೋಡಿದಾಗಲೇ ಅವನ ಆರ್ಥಿಕ ಪರಿಸ್ಥಿತಿ ಕೌತ್ಸನಿಗೆ ತಿಳಿದು ತನ್ನ ಕಾರ್ಯ ಸಿದ್ಧಿಯಾಗುವ ಆಶೆ ತೊಲಗಿತು.

"ರಾಜ, ತಪೋವನದಲ್ಲಿ ಎಲ್ಲ ಕ್ಷೇಮ. ನಿನ್ನ ಆಧಿಪತ್ಯದಲ್ಲಿ ಯಾರಿಗೂ ಯಾವ ತೊಂದರೆಯೂ ಬರುವಂತಿಲ್ಲ. ಸೂರ್ಯಪ್ರಕಾಶವಿರುತ್ತ ದೃಷ್ಟಿಬಾಧಕವಾದ ತಿಮಿರವೆಂತು ಬಂದೀತು? ಪೂಜ್ಯಭಕ್ತಿ ನಿನ್ನ ಕುಲಧರ್ಮ. ನೀನು ಹಿರಿಯರಿಗಿಂತ ಮಿಗಿಲು. ನಾನು ಅಕಾಲದಲ್ಲಿ ಯಾಚಕನಾಗಿ

ಬಂದುದಕ್ಕೆ ವಿಷಾದವಾಗುತ್ತದೆ. ಸಾರ್ವಭೌಮನಾದ ನೀನು ವಿಶ್ವಜಿತ್ ಯಜ್ಞ ಮಾಡಿ ಅರ್ಥಕೋಶವನ್ನು ಬರಿದುಮಾಡಿಕೊಂಡುದು ವಿಹಿತ. ಚಂದ್ರಕಲೆಗಳು ಕೃಷ್ಣಪಕ್ಷದಲ್ಲಿ ಕ್ಷಯಿಸಿದರೂ ಶುಕ್ಲಪಕ್ಷದಲ್ಲಿ ವೃದ್ಧಿಯಾಗದಿರುವುವೇ? ಗುರುದಕ್ಷಿಣೆಯೊದಗಿಸಿಕೊಳ್ಳಲು ನಾನು ಬೇರೆಡೆಗೆ ಹೋಗುತ್ತೇನೆ. ನಿನಗೆ ಮಂಗಳವಾಗಲಿ. ಶರದೃತುವಿನ ಶ್ವೇತಮೇಘಗಳಲ್ಲಿ ಚಾತಕ ಪಕ್ಷಿ ಜೀವನವನ್ನು ಯಾಚಿಸದು. ನಾನು ನಿನಗೇಕೆ ತೊಂದರೆ ಕೊಡಲಿ?" ಎಂದು ಕೌತ್ಸನು ಹೊರಟನು. ಅವನನ್ನು ರಾಜನು ತಡೆದು ನಿಲ್ಲಿಸಿ, "ವಿಪ್ರೋತ್ತಮ, ಗುರುಕಾರ್ಯವೇತಕದು? ಧನವೆಷ್ಟು ಬೇಕು?" ಎಂದು ಪ್ರಶ್ನಿಸಿದನು.

"ರಾಜ, ವಿದ್ಯಾಭ್ಯಾಸ ಮುಗಿಸಿ ಹೊರಡುವಾಗ ಎಂಥ ದಕ್ಷಿಣೆ ಕೊಡಬೇಕೆಂದು ಗುರುವನ್ನು ಕೇಳುವುದು ಪದ್ಧತಿ. ಅದರಂತೆ ನಾನು ಕೇಳಲಾಗಿ ನನ್ನ ಬಡತನವನ್ನು ತಿಳಿದ ಗುರು, 'ನೀನು ಬಹು ಶ್ರದ್ಧೆಯಿಂದ ಈ ವರೆಗೆ ನನ್ನ ಸೇವೆ ಮಾಡಿರುವೆ. ಅದೇ ನೀನು ಕೊಟ್ಟ ಗುರುದಕ್ಷಿಣೆಯೆಂದು ತಿಳಿಯುತ್ತೇನೆ. ನೀನೀಗ ಗೃಹಸ್ಥಾಶ್ರಮ ಸ್ವೀಕಾರ ಮಾಡಿ ಧರ್ಮಜೀವನ ಮಾಡು,' ಎಂದು ಆಜ್ಞಾಪಿಸಿದನು. ನನ್ನ ದೌರ್ಭಾಗ್ಯದಿಂದ ಅದಕ್ಕೊಪ್ಪಲು ಮನಸ್ಸು ಬರಲಿಲ್ಲ. ಯತ್ಕಿಂಚಿತ್ ದ್ರವ್ಯವನ್ನು ಸ್ವೀಕರಿಸಬೇಕೆಂದು ನಿರ್ಬಂಧ ಪಡಿಸಿದೆ. ಗುರು ಕೋಪಗೊಂಡು, 'ನಿನಗೆ ಹದಿನಾಲ್ಕು ವಿದ್ಯೆಗಳನ್ನು ಕಲಿಸಿದ್ದೇನೆ. ಹದಿನಾಲ್ಕು ಕೋಟಿ ಸುವರ್ಣ ನಾಣ್ಯಗಳನ್ನು ತಂದೊಪ್ಪಿಸು,' ಎಂದು ಅಪ್ಪಣೆಯಿತ್ತನು.

"ಅಷ್ಟು ದ್ರವ್ಯ ಎಲ್ಲಿ ಸಿಕ್ಕೀತೆಂದು ಯೋಚಿಸುವಾಗ ಮೊದಲು ಮನಸ್ಸಿಗೆ ಬಂದವನು ನೀನು. ಹಾಗೆ ನಿನ್ನ ಬಳಿಗೆ ಬಂದೆ. 'ಪ್ರಭು' ಶಬ್ದ ಮಾತ್ರ ನಿನ್ನಲ್ಲಿ ಉಳಿದಿರುವುದನ್ನು ನೋಡಿದ ಬಳಿಕ ತೊಂದರೆ ಕೊಡಲು ಮನಸ್ಸು ಒಡಂಬಡದು."

"ನಿನ್ನ ಸೌಜನ್ಯಕ್ಕೆ ಈ ಮಾತು ಒಪ್ಪುವಂಥದು. ಆದರೂ ವೇದ ಶಾಸ್ತ್ರ ಪಾರಂಗತ ಬ್ರಹ್ಮಚಾರಿಯೊಬ್ಬನು ಗುರುದಕ್ಷಿಣೆಗಾಗಿ ನನ್ನ ಬಳಿಗೆ ಬಂದು ಕೃತಾರ್ಥನಾಗದೆ ಬೇರೆ ದಾನಿಯನ್ನು ಆಶ್ರಯಿಸಿದನೆಂಬ ಅಪವಾದ ಬರಬಾರದು. ನೀನು ಎರಡು ಮೂರು ದಿನ ನನ್ನ ಯಜ್ಞಶಾಲೆಯಲ್ಲಿರು. ಅಷ್ಟರಲ್ಲಿ ನಿನ್ನ ಗುರುದಕ್ಷಿಣಾ ದ್ರವ್ಯವನ್ನೊದಗಿಸಲು ಪ್ರಯತ್ನ

ಪಡುತ್ತೇನೆ." ಹೀಗೆ ವಾಗ್ದಾನವಿತ್ತೊಡನೆ ಕೌತ್ಸನು ಸಂತೋಷದಿಂದ ಒಪ್ಪಿಕೊಂಡನು.

ಭೂಲೋಕದ ಎಲ್ಲ ದೇಶಗಳನ್ನೂ ರಘು ಬರಿದಾಗಿಸಿದ್ದುದರಿಂದ ಈಗ ಧನಾಧಿಪತಿ ಕುಬೇರನಿಂದಲೇ ದ್ರವ್ಯ ಸಂಪಾದಿಸಬೇಕೆಂದು ಬಗೆದನು. ವಸಿಷ್ಠ ಗುರುವಿನ ಮಹಿಮೆಯಿಂದ ರಘುರಥಕ್ಕೆ ಭೂವ್ಯೋಮ ಸಾಗರಗಳಲ್ಲಿ ಎಲ್ಲೂ ತಡೆಯಿಲ್ಲದುದರಿಂದ ಕುಬೇರನು ಅವನ ಸಾಮಂತನೆಂದೆಣಿಸ ಬಹುದಾಗಿತ್ತು.

ರಥದಲ್ಲಿ ಆಯುಧಗಳನ್ನು ತುಂಬಿಸಿ ಪ್ರಯಾಣಕ್ಕೆ ಸಜ್ಜುಗೊಳಿಸಿ ಪ್ರಶಸ್ತವಾದ ಪ್ರದೋಷ ಕಾಲದಲ್ಲಿ ರಘು ಅರಮನೆಯಿಂದ ಹೊರಟು ರಥದಲ್ಲಿಯೇ ರಾತ್ರಿಯನ್ನು ಕಳೆದನು. ಮರುದಿನ ಉಷಃಕಾಲದಲ್ಲಿ ಕೋಶಾಗಾರ ರಕ್ಷಕರು ಕೋಶಗೃಹ ಮಧ್ಯದಲ್ಲಿ ಸುವರ್ಣ ನಾಣ್ಯಗಳು ರಾಶಿಯಾಗಿ ಬಿದ್ದಿರುವುದನ್ನು ನೋಡಿ ಆಶ್ಚರ್ಯ ಪಡುತ್ತ ರಾಜನಿಗೆ ತಿಳಿಸಿದರು. ರಘು ಕುಬೇರನನ್ನು ಸೋಲಿಸಿ ದ್ರವ್ಯಾರ್ಜನೆ ಮಾಡಬೇಕೆಂದು ಆಲೋಚಿಸಿದ ಮಾತ್ರಕ್ಕೆ ಕುಬೇರನೇ ಈ ಪರ್ವತೋಪಮ ದ್ರವ್ಯರಾಶಿಯನ್ನು ಸುರಿಸಿರಬೇಕೆಂದು ಊಹಿಸಿಕೊಂಡು ಅದನ್ನು ಸಂಪೂರ್ಣವಾಗಿ ಕೌತ್ಸನಿಗೆ ಅರ್ಪಿಸಿದನು. ಒಂಟೆ ಕುದುರೆಗಳಲ್ಲಿ ಈ ದ್ರವ್ಯರಾಶಿಯನ್ನು ಹೇರಿ ಕೌತ್ಸನಿಗೆ ಕೊಟ್ಟಾಗ ಅವನು ಸಂತೋಷಾಧಿಕ್ಯದಿಂದ ನುಡಿದನು: "ಗುರುಭಕ್ತಿ, ದಯೆ, ಸತ್ಯ, ಇಂದ್ರಿಯ ನಿಗ್ರಹ ಮೊದಲಾದ ಸದ್ಗುಣಗಳಿರುವ ರಾಜನಿಗೆ ಭೂಮಿ ಕಾಮಧೇನುವಾಗುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಸ್ವರ್ಗಲೋಕ ನಿನ್ನ ಅಭಿಲಾಷೆಯನ್ನು ತಿಳಿದು ಸ್ವರ್ಣವೃಷ್ಟಿಯನ್ನು ಸುರಿಸಿದ ಮೇಲೆ ನಿನ್ನ ಪ್ರಭಾವವೆಂಥದೆಂದು ಹೇಳಲಿ? ಸಕಲ ಶ್ರೇಯಸ್ಸುಗಳೂ ಕರಗತವಾಗಿರುವ ನಿನಗೆ ಯಾವ ಆಶೀರ್ವಚನ ನುಡಿಯಲೆಂದು ಕಾಣೆ. ದಿಲೀಪನು ನಿನ್ನನ್ನು ಪಡೆದಂತೆ ನಿನ್ನ ಗುಣ ನಡತೆಗಳಿಗೆ ಒಪ್ಪುವ ಸುಪುತ್ರನು ನಿನಗೆ ಜನಿಸಲಿ!"

೫

ಇಂದುಮತೀ ಸ್ವಯಂವರ

ಕಾಲಕ್ರಮದಲ್ಲಿ ಕೌತ್ಸಮುನಿಯ ಆಶೀರ್ವಾದ ಫಲಿಸಿತು. ಒಂದು ದಿನ ಬ್ರಾಹ್ಮ ಮುಹೂರ್ತದಲ್ಲಿ ರಘುವಿಗೆ ಶಿಶುಜನನವಾದುದರಿಂದ ಆ

ಮಗುವಿಗೆ ಬ್ರಹ್ಮನ ನಾಮಾಂತರವಾದ ಅಜನೆಂಬ ಹೆಸರು ಬಿತ್ತ
ಅಜನು ರೂಪ ತೇಜಸ್ಸುಗಳಲ್ಲಿ ತಂದೆಗಿಂತ ಕಡಮೆಯಿಲ್ಲವೆಂಬಂತೆ ಬ
ದನು. ಅವನಿಗೆ ಶಾಸ್ತ್ರೋಕ್ತ ಸಂಸ್ಕಾರಗಳೆಲ್ಲ ಯಥಾಕಾಲದಲ್ಲಿ ಯಥಾ
ವಿಧಿಯಾಗಿ ನಡೆದುವು. ರಾಜಪುತ್ರರಿಗೆ ಬೇಕಾದ ವಿದ್ಯಾಭ್ಯಾಸವು ಗುರು
ಗಳ ಮೂಲಕ ಸಾಂಗವಾಗಿ ನೆರವೇರಿತು. ಯೌವನೋದಯವಾಗಲು
ಅವನು ಅತಿಶಯಕಾಂತಿಯುಕ್ತನಾದನು. ರಾಜ್ಯಲಕ್ಷ್ಮಿಗೆ ಅವನನ್ನು
ವರಿಸುವ ಆಶೆ ಅಂಕುರಿಸಿದರೂ, ಪ್ರಬುದ್ಧಳಾದ ಕನ್ಯೆ ವಿವಾಹಕ್ಕೆ ತಂದೆಯ
ಅನುಮತಿಯನ್ನು ಪ್ರತೀಕ್ಷಿಸುವಂತೆ, ರಘುವಿನ ಆಜ್ಞೆಯನ್ನು ಎದುರು
ನೋಡುತ್ತಿದ್ದಳು.

ವಿದರ್ಭ ದೇಶದ ರಾಜನು ತಂಗಿ ಇಂದುಮತಿಯ ಸ್ವಯಂವರಕ್ಕೆ
ಏರ್ಪಾಡುಗಳನ್ನು ಮಾಡುತ್ತಿದ್ದನು. ಎಲ್ಲ ದೇಶಗಳ ರಾಜರಿಗೆ ಆಮಂ
ತ್ರಣ ಹೋಯಿತು. ರಘು ತನ್ನ ಕುಮಾರನು ಪ್ರಾಪ್ತವಯಸ್ಕನಾದು
ದನ್ನೂ ನಿರ್ದುಷ್ಟ ರಾಜಕುಲದ ಈ ಸಂಬಂಧವನ್ನೂ ಆಲೋಚಿಸಿ ಅವ
ನನ್ನು ಪರಿವಾರ ಸಹಿತ ಕಳುಹಿಸಿಕೊಟ್ಟನು. ತಂದೆಯ ಅಣತಿಯಂತೆ
ಹೊರಟ ಅಜನು ನರ್ಮದಾ ನದಿಯ ದಡದಲ್ಲಿ ವಿಶ್ರಾಂತಿಗೋಸ್ಕರ ಒಂದು
ದಿನದ ನಿವಾಸವನ್ನು ಕಲ್ಪಿಸಿದನು.

ನದಿಯಲ್ಲಿ ವಿಹರಿಸುತ್ತಿದ್ದ ಕಾಡಾನೆಯೊಂದು ಮೇಲೆ ಬಂದು
ಋಕ್ಷ ಪರ್ವತದಲ್ಲಿ ವಪ್ರಕ್ರೀಡೆಯಾಡುತ್ತ ಎಂದರೆ ದಂತಗಳಿಂದ ಪರ್ವತ
ಪಾರ್ಶ್ವವನ್ನು ಕೀಳುತ್ತ ಸೊಂಡಿಲಿನಿಂದ ಕಲ್ಲುಗಳನ್ನೆತ್ತಿ ನಡಿಗೆಸೆಯುತ್ತ
ಪಿರ್ಮರಗಳ ಕೊಂಬೆಗಳನ್ನು ಮುರಿದು ನೀರಿನಲ್ಲಿ ಮುಳುಗಿಸಿ ಮೈಮೇಲೆ
ಹಾಕಿಕೊಳ್ಳುತ್ತ ಸ್ವೇಚ್ಛಾವಿಹಾರಗೈಯುತ್ತ ಅಜನ ಪರಿವಾರದಲ್ಲಿದ್ದ ಸ್ವ
ಜಾತಿಬಾಂಧವರನ್ನು ನೋಡಿತು. ಧಾರಾಕಾರವಾಗಿ ಹರಿಯುವ ಅದರ
ಮದೋದಕದ ಗಂಧವು ಬಂದೊಡನೆ ಅಜನ ಪಳಗಿದ ಆನೆಗಳು ಮಾವುತ
ರನ್ನು ನಿರ್ಲಕ್ಷಿಸಿ ಎಲ್ಲೆಲ್ಲೋ ಓಡಿದುವು. ಕಾಡಾನೆಯು ಸೈನ್ಯವನ್ನು
ಹೊಕ್ಕು ಅಲ್ಲಿದ್ದ ರಥಗಳನ್ನು ಮುರಿದಿಕ್ಕಿತು. ಡೇರೆಗಳನ್ನು ಹಾಳುಗೆಡ
ವಿತು. ರಾಜಪರಿವಾರವು ಹೆದರಿ ಚತುರ್ದಿಕ್ಕುಗಳಲ್ಲಿ ಚದರಿತು.

ಯುದ್ಧದಲ್ಲಿ ಮಾತ್ರ ಆನೆಗಳನ್ನು ಕೊಲ್ಲಬಹುದೆಂಬ ರಾಜನೀತಿ
ಯನ್ನರಿತಿದ್ದ ಅಜನು ಮದಗಜವನ್ನು ತಿರುಗಿಸಲು ಒಂದು ಬಾಣವನ್ನು

ಲಘುವಾಗಿ ಹೊಡೆದನು. ಆನೆಯು ದಿವ್ಯಶರೀರದ ಮನುಷ್ಯಾಕಾರ ತಾಳಿತು. ಅದನ್ನು ನೋಡಿ ಆಶ್ಚರ್ಯಪಡುವ ರಾಜನನ್ನು ಈ ರೀತಿ ಮಾತಾಡಿಸಿತು: "ರಾಜಪುತ್ರ, ನಾನು ಪ್ರಿಯದರ್ಶನನೆಂಬ ಗಂಧರ್ವರಾಜನ ಮಗ ಪ್ರಿಯಂವದನು. ಮತಂಗ ಮಹರ್ಷಿಯನ್ನು ತಿಳಿಯದೆ ಅಪಮಾನಪಡಿಸಿದಾಗ ಕೋಪಗೊಂಡ ಅವನು 'ಮಾತಂಗನಾಗು' ಎಂದು ಶಾಪವಿತ್ತನು. ಪಶ್ಚಾತ್ತಾಪದಿಂದ ಋಷಿಯನ್ನು ವಂದಿಸಿ ಕ್ಷಮೆ ಬೇಡಲಾಗಿ ಅವನು ಶಾಂತನಾದನು. ಬೆಂಕಿಯಿಂದ ನೀರು ಬಿಸಿಯೇರಿದರೂ ಬೆಂಕಿಯ ಸಂಪರ್ಕ ತಪ್ಪಿ ಸ್ವಲ್ಪ ಹೊತ್ತಿನಲ್ಲಿ ಶೀತಲಸ್ವಭಾವವನ್ನು ಮರಳಿ ಪಡೆಯುವುದಿಲ್ಲವೇ? 'ಗಂಧರ್ವಕುಮಾರ' ಇಕ್ಷ್ವಾಕು ವಂಶದಲ್ಲಿ ಅಜನೆಂಬ ರಾಜನು ಹುಟ್ಟುವನು. ಅವನು ನಿನಗೆ ಬಾಣ ಹೊಡೆದೊಡನೆ ನೀನು ನಿಜರೂಪ ತಾಳುವೆ,' ಎಂದು ಸಂತೈಸಿ ತಪೋನಿರತನಾದನು. ಸತ್ವಶಾಲಿಯಾದ ನಿನ್ನ ಆಗಮನವನ್ನು ಎದುರುನೋಡುತ್ತ ಈ ನದೀತೀರದಲ್ಲಿದ್ದೆ. ನಿನ್ನ ಬಾಣದ ಏಟು ತಿನ್ನಲೆಂದೇ ಸೈನ್ಯದಲ್ಲಿ ಗಲಿಬಿಲಿ ಎಬ್ಬಿಸಿದೆ. ಇಂದಿಗೆ ನನ್ನ ಶಾಪ ವಿಮೋಚನೆಯಾಯಿತು. ಮಹಾತ್ಮ, ಪ್ರತ್ಯುಪಕಾರ ಮಾಡಲಾರದ ಉಪಕೃತನು ಜೀವಂತನಿರುವುದಕ್ಕಿಂತ ಮೃತನಾಗುವುದೇ ಲೇಸು. ನಿನಗೆ ನನ್ನ ಉಪಕಾರ ಅಗತ್ಯವಿಲ್ಲದಿರಬಹುದು. ಆದರೂ ನನ್ನ ಕರ್ತವ್ಯವನ್ನು ನೆರವೇರಿಸದಿರಲಾರೆ. ಪ್ರಾಣಸಖ, ಗಂಧರ್ವ ದೇವತಾತ್ಮಕವಾದ ಸಮ್ಮೋಹನವೆಂಬ ದಿವ್ಯಾಸ್ತ್ರವನ್ನು ಮಂತ್ರಸಮೇತ ನಿನಗೀಯುವೆನು. ಸ್ವೀಕರಿಸುವ ಕೃಪೆಮಾಡು. ನನ್ನನ್ನು ನೋಯಿಸಿದುದಕ್ಕೆ ಸಂಕೋಚಪಡಬೇಡ. ನಿನ್ನ ಬಾಣಪ್ರಯೋಗದಲ್ಲಿಯೂ ದಯಾಲುತ್ವವಡಗಿದೆ. ನಾನು ಜೀವಂತನಾಗಿ ಉಳಿದಿರುವುದೇ ಅದಕ್ಕೆ ನಿದರ್ಶನ. ಇನ್ನು ಕೂಡ ನನ್ನಲ್ಲಿ ದಯೆದೋರು. ಅಸ್ತ್ರವನ್ನು ಅಂಗೀಕರಿಸು."

ಅಜನು ನದಿಯಲ್ಲಿ ಶುದ್ಧಾಚಮನ ಮಾಡಿ ಉತ್ತರಾಭಿಮುಖನಾಗಿ ಗಂಧರ್ವನಿಂದ ಅಸ್ತ್ರೋಪದೇಶವನ್ನು ಪಡೆದನು. ದೈವಯೋಗದಿಂದ ಅವರಿಬ್ಬರು ಮಿತ್ರರಾದರು. ಪ್ರಿಯಂವದನು ಅಜನ ಅಪ್ಪಣೆ ಪಡೆದು ತನ್ನ ಲೋಕಕ್ಕೆ ತೆರಳಿದನು. ಅಜನು ವಿದರ್ಭ ದೇಶಕ್ಕೆ ಮುನ್ನಡೆದನು.

ವಿದರ್ಭರಾಜನಾದ ಭೋಜನು ಅಜನ ಆಗಮನವಾರ್ತೆಯನ್ನು

ಕೇಳಿ ರಾಜವೈಭವದಿಂದ ಇದಿರ್ಗೊಂಡನು; ಪುರಪ್ರವೇಶ ಮಾ ಸಂಭ್ರಮದಿಂದ ಕರೆತಂದನು; ಸಿಂಗರಿಸಿದ ಸೌಧದಲ್ಲಿರಿಸಿದನು. ರಾ ಸುಖವಾಗಿ ಕಳೆಯಿತು.

ಪ್ರಾತಃಕಾಲದಲ್ಲಿ ವಂದಿಮಾಗಧರ ಸ್ತುತಿವಾದ ಕೇಳುತ್ತ ಸಿ ಯಿಂದೆದ್ದು ಪ್ರಾತರ್ವಿಧಿಗಳನ್ನು ಮುಗಿಸಿ ಅನುರೂಪ ವೇಷಭೂಷ ಗಳಿಂದ ಅಲಂಕೃತನಾಗಿ ಸ್ವಯಂವರ ಮಂಟಪಕ್ಕೆ ಹೊರಟನು.

ಸುತ್ತಲೂ ಎತ್ತರವಾದ ಆಸನಗಳಲ್ಲಿ ರಾಜಪುತ್ರರು ಆಸೀನರಾ ದ್ದರು. ದೇವ ಸಭೆಯಂತಿರುವ ಅಲ್ಲಿಗೆ ಅಜಮಹಾರಾಜನು ಬಂದನ ಮನ್ಮಥರೂಪದ ಅವನನ್ನು ನೋಡಿದ ಇತರ ರಾಜಕುಮಾರರಿಗೆ ಇಂದ ಮತಿ ದೊರೆಯುವ ಆಸೆ ತಪ್ಪಿತು.

ಭೋಜನು ಎತ್ತರವಾದ ಮಂಚವೊಂದನ್ನು ಅಜನಿಗೆ ತೋರಿಸಿದನು ಅಜನು ಮೆಟ್ಟಲು ಹತ್ತಿ ವಿವಿಧ ವರ್ಣರಂಜಿತವಾದ ರತ್ನಾಸನದಲ್ಲಿ ಕು ತಾಗ ಮಯೂರವಾಹನನಾದ ಸುಬ್ರಹ್ಮಣ್ಯನಂತೆ ಶೋಭಿಸಿದನು. ಮೇ ಪಂಕ್ತಿಗಳಲ್ಲಿ ಕಾಣುವ ಮಿಂಚಿನಂತೆ, ಕಲ್ಪವೃಕ್ಷಗಳ ಸಾಲಿನಲ್ಲಿರು ಪಾರಿಜಾತದಂತೆ, ರಾಜಕುಮಾರರ ಮಧ್ಯದಲ್ಲಿ ಅಜನು ಕಂಗೊಳಿಸಿದನು ಕಾಡಿನಲ್ಲಿ ಮದ್ದಾನೆಯನ್ನು ಕಂಡೊಡನೆ ಭ್ರಮರಗಳು ಪುಷ್ಪಗಳಿಂದೆದ್ದು ಮದಜಲಕ್ಕಾಗಿ ಆನೆಯ ಮೇಲೆರಗುವಂತೆ ಸಭೆಯಲ್ಲಿದ್ದ ಜನರ ದೃಷ್ಟಿ ಇತರ ರಾಜಪುತ್ರರನ್ನು ಬಿಟ್ಟು ಅಜನ ಮೇಲೆ ಬಿತ್ತು.

ದೋಲಿಯಲ್ಲಿ ಕುಳಿತ ಇಂದುಮತಿ ಕನ್ಯಾಪರಿವಾರದೊಡನೆ ಸಭೆ ಬಂದು ರಾಜಪುತ್ರರ ಪೀಠ ಪಂಕ್ತಿಗಳ ಮಧ್ಯದಲ್ಲಿ ಹಾದುಹೋದಳು ಆಕೆಯನ್ನು ಹೊಂದಬೇಕೆಂಬ ಲವಲವಿಕೆಯಿಂದ ರಾಜಪುತ್ರರಲ್ಲಿ ಬಹು ವಿಧದ ಚೇಷ್ಟೆಗಳು ಕಾಣಿಸಿಕೊಂಡುವು. ಒಬ್ಬನು ಕೈಯಲ್ಲಿದ್ದ ಕಮಲ ವನ್ನು ತಿರುಗಿಸುತ್ತಿದ್ದನು. ಇನ್ನೊಬ್ಬನು ತನ್ನ ಕೇಯೂರವು ಕಾಣು ವಂತೆ ಉತ್ತರೀಯವನ್ನು ಆಗಾಗ ಸರಿಪಡಿಸುತ್ತಿದ್ದನು. ಬೇರೊಬ್ಬನು ಕಾಲಬೆರಳುಗಳಿಂದ ಪಾದಪೀಠವನ್ನು ಗೀರಿದನು. ಮಗದೊಬ್ಬನು ಮಾಂಸಲವಾದ ಬಾಹುಗಳನ್ನು ತೋರಿಸುತ್ತ ಪಕ್ಕದವನೊಡನೆ ಮಾತ ಡುವಂತೆ ನಟಿಸಿದನು. ರಸಿಕನೊಬ್ಬನು ಕೇದಗೆಯ ತುದಿಯಿಂದ ತೊಡೆಯ ಮೇಲೆ ಬರೆಯುವಂತೆ ವರ್ತಿಸಿದನು. ಇನ್ನೊಬ್ಬನು ಕಿರಿ

ಟವು ಸರಿಯಾಗಿದ್ದರೂ ಸರಿಯಾಗಿರಿಸುವ ನೆವದಿಂದ ಕೈಯನ್ನು ಕಿರೀಟದ ಮೇಲಿಟ್ಟನು, ತನ್ನ ಹಿರಿಮೆಯನ್ನರಿತ ಇಂದುಮತಿಯಲ್ಲಿ ಈ ಶೃಂಗಾರ ಚೇಷ್ಟೆಗಳು ಯಾವ ಪರಿಣಾಮವನ್ನೂ ಮಾಡಲಿಲ್ಲ.

ಆಮಂತ್ರಣ ಪಡೆದು ಬಂದ ರಾಜಕುಮಾರರಲ್ಲಿ ಕ್ರಮವಾಗಿ ಪ್ರತಿಯೊಬ್ಬರ ವಂಶ, ಕೀರ್ತಿ, ಶೌರ್ಯಾದಿಗಳನ್ನು ಸ್ವಯಂವರ ಕನ್ಯೆಗೆ ಹೇಳುವುದು ವಾಡಿಕೆ. ಅದರಂತೆ ಪ್ರಗಲ್ಭೆಯಾದ ಸುನಂದಾ ದೂತಿ ಒಬ್ಬೊಬ್ಬರ ಗುಣಗಾನವನ್ನೂ ಮಾಡುತ್ತ ಹೋದಳು. ಸರೋವರಗಳಲ್ಲಿ ರಾಜಹಂಸಿಯು ಕಮಲದಿಂದ ಕಮಲಕ್ಕೆ ಸರಿಯುವಂತೆ ರಾಜಪುತ್ರಿ ಮುಂದುವರಿದಳು. ಮಗಧ ದೇಶದ ರಾಜನನ್ನು ದಾಟಿ ಅಂಗಾಧಿಪತಿಯ ಸರದಿ ಬಂತು. "ಅಪ್ಸರಸ್ತ್ರೀಯರೂ ಇವನನ್ನು ಆಶಿಸುವರು. ಲಕ್ಷ್ಮಿ ಸರಸ್ವತಿಯರು ಪರಸ್ಪರ ಶತ್ರುಗಳಾದರೂ ಇವನಲ್ಲಿ ಮಿತ್ರತ್ವದಿಂದ ಆಶ್ರಯಪಡೆದಿದ್ದಾರೆ. ನೀನು ಮೂರನೆಯವಳಾಗುವೆಯಾ?" ಅವಂತಿ ದೇಶದ ರಾಜಪುತ್ರನ ವರ್ಣನೆಯಾಯಿತು. "ಇವನ ಅಧೀನದಲ್ಲಿರುವ ಮಹಾಕಾಲವೆಂಬ ಸ್ಥಳದಲ್ಲಿ ಚಂದ್ರಮೌಳಿ ವಾಸಿಸುವನು. ಅಲ್ಲಿ ಕೃಷ್ಣಪಕ್ಷದಲ್ಲಿಯೂ ಬೆಳದಿಂಗಳು ತಪ್ಪುವುದಿಲ್ಲ. ಇಂದುಮತಿ ಮುಂದೊತ್ತಿದಳು. ಅನೂಪ, ಶೂರಸೇನ, ಕಲಿಂಗ, ಪಾಂಡ್ಯ ಮೊದಲಾದ ಹಲವು ರಾಜರನ್ನು ಬಿಟ್ಟು ಮುಂದೆ ಹೋದಳು. ಅವರೆಲ್ಲ ವಿವಿಧ ಗುಣಸಂಪನ್ನರಾಗಿದ್ದರೂ ಅವಳಿಗೆ ಒಪ್ಪಿಗೆಯಾಗಲಿಲ್ಲ. "ಲೋಕೋ ಭಿನ್ನ ರುಚಿಃ!" ಇಂದುಮತಿ ಮುಂದೆ ಹೋಗುತ್ತಿದ್ದಂತೆ ಹಿಂದಿದ್ದವರ ಮುಖಗಳು ಕಪ್ಪಾದುವು. ಅನಂತರ ರಘುಪುತ್ರನಾದ ಅಜನ ಸಮೀಪಕ್ಕೆ ಬರಲು ಅವನ ಬಲಭುಜ ಅದುರಿತು. ಇಂದುಮತಿ ಸ್ಥಿರವಾಗಿ ನಿಂತಳು. ಪುಷ್ಪಭರಿತವಾದ ಸಹಕಾರ ವೃಕ್ಷವನ್ನು ನೋಡಿದರೆ ಭ್ರಮರವು ಬೇರೆ ಮರಗಳನ್ನು ಹುಡುಕುವುದೆ? ಸುನಂದೆಗೆ ಇದರ ಅರ್ಥ ತಿಳಿಯಿತು. ತನ್ನ ಜಾಣ್ಮೆಯನ್ನು ತೋರ್ಪಡಿಸಲು, "ಸೂರ್ಯವಂಶದ ಕಕುತ್ಸ್ಥ ರಾಜನು ದೇವತೆಗಳಿಂದಲೂ ಆಗದ ರಾಕ್ಷಸ ಸಂಹಾರಮಾಡಿ ಇಂದ್ರನ ಆಸ್ಥಾನದಲ್ಲಿ ಅರ್ಧಭಾಗಕ್ಕೆ ಹಕ್ಕುದಾರನಾದನು. ಆ ಮೇಲೆ ಈ ವಂಶಕ್ಕೆ ದೀಪದಂತಿರುವ ದಿಲೀಪನು ಹುಟ್ಟಿದನು. ಮಹಾತ್ಯಾಗಿಯಾದ ಅವನ ಮಗನೇ ರಘು; ವಿಶ್ವಜಿತ್ ಯಜ್ಞಮಾಡಿದ ಶೂರ; ಮೃತ್‌ಪಾತ್ರೆಗಳನ್ನು ಮಾತ್ರ

ಉಳಿಸಿಕೊಂಡ ಉದಾರಿ, ಆ ಮಹಾಪುರುಷನ ಮಗನಾದ ಈ ಸುಕು
ರನ ಹೆಸರು ಅಜ. ನಿನಗೆ ತಕ್ಕ ಕುಲ, ಪ್ರಾಯ, ಗುಣ, ಕಾಂತಿ
ನವು. ಇವನನ್ನು ವರಿಸು. "ರತ್ನವು ಚಿನ್ನದೊಡನೆ ಸೇರಲಿ."

ಅಜನನ್ನೇ ವರಿಸಲು ನಿಶ್ಚಯಿಸಿದ ಇಂದುಮತಿ ಹೂಮಾಲೆಯ
ಎತ್ತಿ ಹಿಡಿದಳು. ಸುನಂದೆ ಏನೂ ಅರಿಯದವಳಂತೆ, 'ನಿಂತುದ
ಮುಂದೆ ನಡೆ', ಎಂದು ಓರೆಗಣ್ಣಿನಿಂದ ನೋಡಿದಳು. ಅಜನ ಕಂ
ಪುಷ್ಪಹಾರ ಬಿತ್ತು. ಕೌಮುದಿಯು ಚಂದ್ರನನ್ನು ಸೇರಿತು. ಜಾಹ
ಸಮುದ್ರದಲ್ಲಿ ಒಂದಾಯಿತು: ಅನುರೂಪ ಪತಿಪ್ರಾಪ್ತಿಯಿಂದ 'ಹ
ವೊಂದು ದೇಹವೆರಡು' ಎಂಬಂತಾಯಿತು. ಜನರು ಏಕಕಂಠದ
ಜಯಘೋಷಗೈದರು. ಇತರ ರಾಜರಿಗೆ ಅದು ಕರ್ಣಕಠೋರವಾಯಿ

೬

ಈರ್ಷ್ಯೆಯ ಪ್ರತಿಫಲ

ಅಜನನ್ನೂ ಇಂದುಮತಿಯನ್ನೂ ಆನೆಯ ಮೇಲೆ ಕುಳ್ಳಿರಿಸಿ ಭೋ
ರಾಜನು ಅತಿ ವೈಭವದಿಂದ ರಾಜಧಾನಿಗೆ ಕರೆದೊಯ್ದನು. ಇ
ರಾಜರು ವ್ಯರ್ಥಮನೋರಥರಾದರು. ಬೆಳಗಿನ ಚಂದ್ರನಂತೆ ತೇಜ
ಹೀನರಾದರು. ತಮ್ಮ ರೂಪ ವೇಷ ಭೂಷಣಗಳನ್ನು ತೆಗಳಿಕೊಂ
ಬೀಡುಗಳಿಗೆ ತೆರಳಿದರು.

ವಧೂವರರ ಮೆರವಣಿಗೆ ಹೊರಟಿತು. ಬೀದಿಯಲ್ಲಿ ಕಾಮನಬ
ನಂತಿರುವ ತೋರಣಗಳಿದ್ದುವು. ತಳಿರು ಪತಾಕೆಗಳಿಂದ ಬಿಸಿಲೂ ಬೀ
ವಂತಿರಲಿಲ್ಲ. ವಾದ್ಯಘೋಷ ಕೇಳಿ ಸ್ತ್ರೀಯರು ಕೆಲಸಗಳನ್ನೆಲ್ಲ ಬಿ
ಓಡಿಬಂದು ಉಪ್ಪರಿಗೆಗಳ ಕಿಟಿಕಿಗಳಿಂದ ನೋಡುತ್ತಿದ್ದರು. ತಲೆಬಾ
ತ್ತಿದ್ದವಳೊಬ್ಬಳು ಬಿಚ್ಚುದಲೆಯಲ್ಲೇ ಮೆರವಣಿಗೆ ನೋಡಲು ಧಾವಿ
ಬಂದಳು. ಕಣ್ಣಿಗೆ ಅಂಜನ ಹಾಕುತ್ತಿದ್ದ ಒಬ್ಬ ಹೆಣ್ಣು ಒಂದೇ ಕಣ್ಣಿ
ಹಾಕಿ ಕರಡಿಗೆಯನ್ನು ಕೈಯಲ್ಲಿ ಹಿಡಿದಿದ್ದು ನೋಡುತ್ತಿದ್ದಳು. "ಇವ
ರೂಪರಾಶಿಯನ್ನು ಸೃಷ್ಟಿಸಿದ ಬ್ರಹ್ಮನ ಪ್ರಯತ್ನ ಸಾರ್ಥಕವಾಯಿತ
ಇವರು ರತಿ ಮನ್ಮಥರು. ಇದು ಇವರ ಜನ್ಮಾಂತರದ ಪುಣ್ಯ ಫಲ
ಹೀಗೆಲ್ಲ ಮಾತಾಡುತ್ತಿದ್ದಂತೆ ಮೆರವಣಿಗೆ ರಾಜದ್ವಾರವನ್ನು ಸಮೀಪಿಸಿತ

ಅರಮನೆಗೆ ವಿಶೇಷ ಅಲಂಕಾರವಾಗಿತ್ತು. ಅಜನು ಆನೆಯಿಂದ ಇಳಿದೊಡನೆ ಭೋಜನು ಅಂತಃಪುರಕ್ಕೆ ಕರೆದೊಯ್ದನು.

ಉಚಿತಾಸನದಲ್ಲಿ ಕುಳ್ಳಿರಿಸಿ ವಿವಾಹ ವಿಧಿಗನುಸಾರವಾಗಿ ವರಪೂಜೆಯಾಯಿತು. ವರನಿಗೆ ರಾಜೋಪಚಾರ ಸಲ್ಲಬೇಕಾದುದು ಶಾಸ್ತ್ರನಿಯಮ. ವರನು ರಾಜನೇ ಆದಾಗ ಆ ಪೂಜೆಗೆ ಮತ್ತಷ್ಟು ಕಳೆಯೇರುವುದಿಲ್ಲವೆ? ಸುಗಂಧಾನ್ವಿತ ಪಾದ್ಯ, ರತ್ನಸಹಿತ ಅರ್ಘ್ಯ, ಮಧುಪರ್ಕ, ಚೀನವಸನೋತ್ತರೀಯ, ಇತ್ಯಾದಿ ರಾಜಯೋಗ್ಯ ವಸ್ತುಗಳಿಂದ ವರಪೂಜೆ ನಡೆಯಿತು. ಅಜನು ಇವುಗಳನ್ನೆಲ್ಲ ಸ್ತ್ರೀಕಟಾಕ್ಷಗಳೊಡನೆ ಸ್ವೀಕರಿಸಿದನು. ರೇಷ್ಮೆ ಬಟ್ಟೆಗಳನ್ನುಟ್ಟ ವರನನ್ನು ವಿನೀತರಾದ ಅಂತಃಪುರ ಸೇವಕರು ವಧೂಸಮೀಪಕ್ಕೊಯ್ದರು — ಶೀತಲ ಚಂದ್ರಕಿರಣಗಳು ಬಿಳಿನೊರೆಯ ತೆರೆಗಳನ್ನು ಸಮುದ್ರ ತಟಕ್ಕೊಯ್ಯುವಂತೆ.

ವಿವಾಹಾಂಗವಾದ ಲಾಜಹೋಮದೊಡನೆ ಅಗ್ನಿಸಾಕ್ಷಿಯಾಗಿ ಪಾಣಿಗ್ರಹಣವಾಯಿತು. ತಂಗಿಯ ಅಂಜಲಿಯಲ್ಲಿ ಶಮೀಪತ್ರ ಮಿಶ್ರಿತವಾದ ಅರಳುಗಳನ್ನು ರಾಜನು ತುಂಬಿಸಿದನು. ವರನು ಆ ಅಂಜಲಿಯನ್ನು ಮುಟ್ಟಿಕೊಂಡು ಹೋಮಿಸಿ ವಧುವನ್ನು ಹೋಮಕ್ಕೆ ಪ್ರದಕ್ಷಿಣೆ ಬರಿಸಿ ಅಲ್ಲೇ ಇಟ್ಟಿರುವ ಕಲ್ಲಿನ ಮೇಲೆ ಆಕೆಯ ಪಾದಗಳನ್ನಿಡಿಸಿ, ಅರಳು ತುಂಬಿಸಿದ ಅಣ್ಣನಿಗೆ ಉಡುಗೊರೆ ಕೊಟ್ಟನು. ಆ ಧಾರ್ಮಿಕ ವಿಧಿಗಳು ಮುಗಿದ ಬಳಿಕ ಮೂರು ರಾತ್ರಿ ವಿವಾಹವ್ರತದ ಆಚರಣೆಯಾಯಿತು.

ಆಮಂತ್ರಿತರಾಗಿ ಬಂದಿದ್ದ ರಾಜರಿಗೂ ಮುನಿಗಳಿಗೂ ಯಥೋಚಿತೋಪಚಾರಗಳು ಸ್ವಲ್ಪವೂ ನ್ಯೂನಾತಿರೇಕಗಳಿಲ್ಲದೆ ನಡೆದುವು. ಮಹಾಜಲಾಶಯದ ನೀರು ಪ್ರಸನ್ನವಾಗಿ ಕಾಣಿಸಿದರೂ ಅದರೊಳಗೆ ಮೊಸಳೆಗಳು ವಿಹರಿಸುವಂತೆ, ಆ ರಾಜರ ಮುಖದಲ್ಲಿ ಪ್ರಸನ್ನತೆ ತೋರ್ಪಟ್ಟರೂ ಮನಸ್ಸಿನಲ್ಲಿ ಕ್ರೂರಾಲೋಚನೆಗಳು ತಾಂಡವವಾಡುತ್ತಿದ್ದುವು. ಅಜನು ಇಂದುಮತಿಯೊಡನೆ ತನ್ನ ರಾಜಧಾನಿಗೆ ಹೋಗುವ ದಾರಿಯಲ್ಲಿ ಅವನನ್ನು ಆಕ್ರಮಿಸಿ ಅವಳನ್ನು ಅಪಹರಿಸುವ ಉದ್ದೇಶವುಳ್ಳ ರಾಜರು ವಿದರ್ಭಾಧಿಪತಿಯ ಉಪಚಾರಗಳನ್ನು ಕಡೆಗಣಿಸಿ ಹೊರಟು ಹೋದರು.

ವಿವಾಹದ ಅವಭೃಥ ಸ್ನಾನವಾಯಿತು. ಭೋಜನು ತನ್ನ ಸ್ಥಾನಸಂಪತ್ತುಗಳಿಗೆ ಒಪ್ಪುವ ಬಳುವಳಿಯನ್ನು ತಂಗಿಗೆ ಕೊಟ್ಟನು. ನವದಂಪತಿ

ಗಳು ವೈಭವದಿಂದ ಅಯೋಧ್ಯೆಗೆ ಹೊರಟರು. ಭೋಜನು ಸ್ವಲ್ಪ ದ
ಅನುಸರಿಸಿ ಮೂರು ವಸತಿಗಳ ವರೆಗೆ ಜೊತೆಯಲ್ಲಿದ್ದು ಅನಂತರ ಹಿ
ಬಂದನು. ಅಜನು ಮುಂತೆರಳಿದನು.

ಬಲಿಚಕ್ರವರ್ತಿಯು ವಾಮನನಿಗೆ ಮೂರು ಹೆಜ್ಜೆಗಳಷ್ಟು ಸ್ಥಳವ
ದಾನ ಮಾಡಿದ ಬಳಿಕ ವಾಮನನ ಒಂದು ಪಾದವು ಆ ಭೂಮಿಯನ್
ಆಕ್ರಮಿಸುವಾಗ ಅದನ್ನು ಪ್ರಹ್ಲಾದನು ತಡೆದಂತೆ, ಅಜನು ಸೈನ್ಯಸಮೇ
ಹೋಗುವಾಗ ರಾಜಸಮೂಹವು ಅವನನ್ನು ತಡೆಯಿತು. ಇಂದುಮ
ಯನ್ನು ಸೈನ್ಯಸಮೇತನಾದ ಮಂತ್ರಿಯ ರಕ್ಷಣೆಯಲ್ಲಿಟ್ಟು ಅಜನು ಸ
ರೋಪನು ಶತ್ರು ಸೈನ್ಯವನ್ನು ತಡೆದನು—ಗಂಗಾಪ್ರವಾಹವನ್ನು ಶೋ
ನದಿ ನಿರೋಧಿಸುವಂತೆ.

ರಣವಾದ್ಯಗಳು ಮೊಳಗಿ ಒಬ್ಬರಿಗೆ ಇನ್ನೊಬ್ಬರ ಸ್ವರ ಕೇಳುವಂ
ಲಿಲ್ಲ. ಧೂಳಿಯೆದ್ದು ಒಬ್ಬರು ಮತ್ತೊಬ್ಬರನ್ನು ಕಾಣಲು ಅಶ
ವಾಗಿತ್ತು. ರಥಚಕ್ರಗಳ ಸ್ವರದಿಂದ ರಥವಿರುವುದನ್ನೂ ಘಂಟಾರವದಿ
ಆನೆಯಿರುವುದನ್ನೂ ಗುರುತಿಸ ಬೇಕಾಗಿತ್ತು. ಸೈನಿಕರ ತಲೆಗಳು ಉ
ಳಿದುವು. ಅವರ ಶಿರಸ್ತ್ರಾಣಗಳೇ ಪಾನಪಾತ್ರೆಗಳಾಗಿ ರಕ್ತವೇ ಮ
ವಾಗಿರುವ ಮೃತ್ಯುವಿನ ಪಾನಭೂಮಿಯದು ಎಂಬಂತಿತ್ತು.

ರಾಜರ ಸೈನ್ಯಗಳು ಯುದ್ಧಸನ್ನದ್ಧವಾಗಿ ನಿಂತಿದ್ದುವು. ಅಜ
ಸೈನ್ಯವು ಯಾವ ಎಚ್ಚರಿಕೆಯೂ ಇಲ್ಲದೆ ಉಲ್ಲಾಸದಿಂದ ಮುಂದೆ ಬ
ತ್ತಿದ್ದುದರಿಂದ ನಾಶಮುಖವನ್ನು ಪ್ರವೇಶಿಸಿತು. ಆದರೂ ಅಜನು ಹಿಮ
ಟ್ಟದೆ ಶತ್ರುಸೈನ್ಯವನ್ನು ಹೊಕ್ಕನು. ಗಾಳಿಯು ಹೊಗೆಯನ್ನು ಓಡಿಸ
ಲ್ಲದಲ್ಲದೆ ಬೆಂಕಿಯನ್ನು ಓಡಿಸುವುದೆ? ಒಣಹುಲ್ಲಿನ ರಾಶಿಯಲ್ಲಿ ಅ
ಹರಡುವುದು ಸಹಜ.

ಅಜನ ಹಸ್ತಲಾಘವ ಅನಿರ್ವಚನೀಯ. ಬತ್ತಳಿಕೆಯಿಂದ ಬಾಣ
ಳನ್ನು ತೆಗೆಯುವುದು ವೇಗಾತಿಶಯದಿಂದ ಕಾಣುತ್ತಿರಲಿಲ್ಲ. ಬಾಣಗಳು ಬಿ
ನಲ್ಲಿದ್ದಂತೆಯೇ ಕಾಣುತ್ತಿತ್ತು. ಅಷ್ಟು ವೇಗದಿಂದ ಒಂದರ ಹಿಂದೆ ಒಂ
ಹೋಗುತ್ತಿದ್ದರೂ ಅವನ ರಥವನ್ನು ಶಸ್ತ್ರ ಸಮೂಹವು ಮುಚ್ಚಿಬಿಟ್ಟಿತ
ಮಂಜುಮುಚ್ಚಿಕೊಂಡಿರುವ ಪ್ರಾತಃಕಾಲದಲ್ಲಿ ಸೂರ್ಯನು ಬಹುದೂರದ
ಪ್ರಕಾಶಿಸಿದಂತೆ ಅಜನ ರಥಧ್ವಜವು ಬಹುದೂರದ ವರೆಗೆ ಕಾಣುತ್ತಿತ್ತು.

ಪ್ರಿಯಂವದನು ಕೊಟ್ಟಿದ್ದ ಸಮ್ಮೋಹನಾಸ್ತ್ರವನ್ನು ಅಜನು ತೊಟ್ಟೊಡನೆ ಅರಿಸೈನ್ಯವು ನಿದ್ರಾವಶವಾದಂತೆ ಮಲಗಿತು. ಅಜನು ಶ್ವೇತಕೀರ್ತಿಯನ್ನು ಪಾನಮಾಡುವವನಂತೆ ಶಂಖವೂದಿದನು. ಶಂಖಧ್ವನಿಯನ್ನು ಕೇಳಿದೊಡನೆ ಪರಿವಾರವು ಸಮೀಪಕ್ಕೆ ಬಂತು.

ಸರೋವರಗಳಲ್ಲಿ ರಾತ್ರಿ ಕಮಲಗಳು ಮುಚ್ಚಿಕೊಂಡಿದ್ದು ಅವುಗಳ ನಡುವೆ ಚಂದ್ರಬಿಂಬವು ಪ್ರಕಾಶಿಸುವಂತೆ ಮ್ಲಾನವದನರಾಗಿ ಬಿದ್ದಿರುವ ರಾಜರ ಮಧ್ಯದಲ್ಲಿ ಅಜನು ಶೋಭಾನ್ವಿತನಾಗಿದ್ದನು. ಬಾಣಾಗ್ರವನ್ನು ರಕ್ತಸಿಕ್ತವನ್ನಾಗಿ ಮಾಡಿ ಅವನು ಅರಿರಾಜರ ಪತಾಕೆಗಳಲ್ಲಿ ಬರೆದನು. "ನನ್ನ ತಂದೆ ನಿಮ್ಮ ಕೀರ್ತಿಯನ್ನು ಅಪಹರಿಸಿದರೂ ದೇಶಗಳನ್ನು ಆಕ್ರಮಿಸಲಿಲ್ಲ. ನಾನಾದರೂ ನಿಮ್ಮ ಕೀರ್ತಿಯನ್ನು ಸೆಳೆದೆನೇ ಹೊರತು ಪ್ರಾಣಹಾರಕನಾಗಲಿಲ್ಲ."

ಬಿಲ್ಲಿನ ಒಂದು ತುದಿಯನ್ನು ನೆಲದಲ್ಲಿ ಊರಿ ಇನ್ನೊಂದು ತುದಿಯಲ್ಲಿ ಬಲತೋಳನ್ನಿರಿಸಿ ನಿಂತ ಅಜನ ಕೂದಲು ಕೆದರಿತ್ತು. ಶಿರಸ್ತ್ರಾಣವಿರಲಿಲ್ಲ. ಹಣೆಯಲ್ಲಿ ಬೆವರು ತೊಟ್ಟಿಕ್ಕುತ್ತಿತ್ತು. ಇಂದುಮತಿ ಸಮೀಪದಲ್ಲಿ ನಿಂತಿದ್ದಳು. ಅವಳನ್ನುದ್ದೇಶಿಸಿ, "ಇಲ್ಲಿ ಬಿದ್ದಿರುವ ರಾಜಸಮೂಹವನ್ನು ನೋಡು. ಇವರ ಆಯುಧಗಳನ್ನು ಮಕ್ಕಳು ಕೂಡ ಕಸಿದುಕೊಳ್ಳಬಹುದು. ಇವರು ನಿನ್ನ ಸವತಿಯನ್ನು ಆಕ್ರಮಿಸಿದ್ದಾರೆ ನೋಡು," ಎಂದು ಉಪಹಾಸ ಮಾಡಿದನು.

ಇಂದುಮತಿ ಸಂತಸಗೊಂಡರೂ ಲಜ್ಜಾನ್ವಿತೆಯಾದುದರಿಂದ ಪತಿಯನ್ನು ಅಭಿನಂದಿಸಲು ಅಸಮರ್ಥಳಾಗಿದ್ದಳು. ಹೊಸ ಮಳೆ ಬಿದ್ದೊಡನೆ ನವಿಲುಗಳ ಕೇಕಾರವವು ಮೇಘಮಾಲೆಗಳನ್ನು ಕರೆಯುವಂತೆ ಸಖಿಯರ ಸಂವಾದದಲ್ಲಿ ಅಜನ ಪರಾಕ್ರಮದ ವರ್ಣನೆ ತುಂಬಿತ್ತು.

ಇಂತು ವಿರೋಧಿರಾಜರು ಸೋತ ಬಳಿಕ ಅಜನು ಇಂದುಮತಿಯೊಡನೆ ಅಯೋಧ್ಯೆಗೆ ತೆರಳಿದನು. ರಥಗಳ ಮತ್ತು ಕುದುರೆಗಳ ಓಟದಿಂದ ಮೇಲಕ್ಕೆದ್ದ ಧೂಳಿ ವಿಜಯಶ್ರೀಯಂತೆ ಅಜನ ಅಂಗಾಂಗಗಳನ್ನು ವ್ಯಾಪಿಸಿತು.

೨

ಗೃಹಸ್ಥ – ವಾನಪ್ರಸ್ಥ

ಸ್ವಯಂವರದಲ್ಲಿ ಮಗನು ಜಯಶಾಲಿಯಾದ ಸುದ್ದಿ ಈ ವೇಳ ರಘು ಮಹಾರಾಜನ ಕಿವಿಗೆ ಬಿದ್ದಿತ್ತು. ಎದುರಿಸಿದ ರಾಜರನ್ನು ಸೋ ಸ್ತುತ್ಯರ್ಹಳಾದ ಪತ್ನಿಯೊಂದಿಗೆ ರಾಜಧಾನಿಗೆ ಬಂದ ರಾಜಕುಮಾರನ ನೋಡಿ ರಾಜನು ತನ್ನ ಭಾಗ್ಯವನ್ನು ಕೊಂಡಾಡಿದನು; ಸೂರ್ಯ ವಂ ಎಲ್ಲ ರಾಜರ ಪದ್ಧತಿಯಂತೆ ಧುರಂಧರನಾದ ಮಗನಿಗೆ ರಾಜ್ಯಭಾರವನ ಪ್ಪಿಸಿ ಇಂದ್ರಿಯನಿಗ್ರಹದಿಂದ ಮುನಿವೃತ್ತಿಯನ್ನು ಆಶ್ರಯಿಸಲು ಸನ್ನ ನಾದನು.

ಅಜನ ಪಟ್ಟಾಭಿಷೇಕ ಮಹೋತ್ಸವದ ಏರ್ಪಾಡುಗಳು ಭರದಿ ಸಾಗಿದುವು. ಅವನಿಗೆ ಅಧಿಕಾರಲಾಲಸೆಯಾಗಲಿ ರಾಜ್ಯಭೋಗಾಭಿಲಾ ಯಾಗಲಿ ಇಲ್ಲದಿದ್ದರೂ ತಂದೆಯ ಅಭೀಷ್ಟಸಾಧನೆಗಾಗಿ ಅವನು ಏರ್ಪಾಡುಗಳಿಗೆ ತಲೆವಾಗಿದನು.

ಸಿಂಹಾಸನಾರೋಹಣದ ಮುಖ್ಯಾಂಗವಾದ ತೀರ್ಥಸ್ನಾನವು ವ ಷ್ಠನ ದಿವ್ಯಹಸ್ತದಿಂದ ನೆರವೇರಿತು; ಮಂತ್ರಪೂತ ಸುಗಂಧಾನ್ವಿತ ಪು ಜಲದಿಂದ ಅಭಿಷೇಕವಾಯಿತು. ನೆಲದ ಮೇಲೆ ಬಿದ್ದ ನೀರಿನಿಂ ಮೇಲೆದ್ದ ಉಗಿ ಭೂದೇವಿಯ ಕೃತಾರ್ಥತಾಸೂಚನೆಯಂತಿತ್ತು.

ಸ್ವಾಭಾವಿಕವಾಗಿಯೇ ಮಹಾಶೂರನಾದ ಅಜನು ವಸಿಷ್ಠನ ಅ ಷೇಕದ ಮತ್ತು ಆಶೀರ್ವಾದದ ಪ್ರಭಾವದಿಂದ ಅತಿ ದುರ್ಧರ್ಷನಾದನ ಅಗ್ನಿ ವಾಯು ಸಂಯೋಗವಾದರೆ ಅದರ ಶಕ್ತಿಯನ್ನು ಕೇಳಬೇಕೆ?

ರಘುವಿನ ರೂಪಗುಣಾದಿಗಳೆಲ್ಲ ಅಜನಲ್ಲಿ ಪ್ರತಿಬಿಂಬಿತವಾಗಿದ್ದು ರಿಂದ ರಘು ಪುನಃ ಯುವಕನಾದನೆಂಬ ಭ್ರಮೆ ಪ್ರಜಾಜನರಲ್ಲುಂಟಾ ಯಿತು. ರಾಜಪುರುಷರೆಲ್ಲ ಅಹಮಹಮಿಕೆಯಿಂದ ರಾಜನ ಪ್ರೀತಿಯನ ಗಳಿಸಲು ಪ್ರಯತ್ನಪಟ್ಟರು. ಸಮುದ್ರವು ಎಲ್ಲ ನದಿಗಳ ನೀರನ ಸ್ವೀಕರಿಸುವಂತೆ ರಾಜನು ಎಲ್ಲ ಪ್ರಜೆಗಳ ಗೌರವವನ್ನು ಪಡೆದನ ಎತ್ತರವಾಗಿ ಬೆಳೆಯುವ ಮರಗಳು ಗಾಳಿಗೆ ಬಾಗುವಂತೆ ಉದ್ಧತರಾ ರಾಜರನ್ನು ಅಜನು ತನ್ನ ಗುಣಗಣದಿಂದ ನಮ್ರರನ್ನಾಗಿ ಮಾರ್ಪ ಡಿಸಿದನು.

ಪ್ರಜೆಗಳಿಗೆ ಮತ್ತು ಪ್ರಕೃತಿಗೆ ಹಿತಕಾರಿಯಾದ ಅಜನನ್ನು ನೋಡಿ ರಘು ತನ್ನ ಗೃಹಸ್ಥಜೀವನದಲ್ಲಿ ನಿಸ್ಪೃಹನಾದುದು ಸಹಜ. ಗುಣಶಾಲಿಯಾದ ಮಗನಿಗೆ ಪಟ್ಟವೊಪ್ಪಿಸಿ ತಂದೆ ವಾನಪ್ರಸ್ಥ ಸ್ವೀಕಾರ ಮಾಡುವುದು ಮನುಕುಲಧರ್ಮವಾದುದರಿಂದ ರಘು ಇನ್ನು ಮುಂದೆ ತನ್ನ ಹೆಸರು ಶಾಶ್ವತವಾಗಿ ನಿಲ್ಲುವ ವಂಶಧರ್ಮವನ್ನು ಬಿಡುವನೆ?

ತಂದೆ ತಪೋವನಾಭಿಮುಖನಾದುದನ್ನು ತಿಳಿದ ಅಜನು ಪಿತೃಪಾದಗಳಿಗೆ ಬಾಷ್ಪಾಂಬುಸ್ನಾನ ಮಾಡಿಸಿ ತಂದೆ ಅರಣ್ಯಕ್ಕೆ ಹೋಗಬಾರದೆಂದು ಪ್ರಾರ್ಥಿಸಿದನು. ಪುತ್ರವತ್ಸಲನಾದ ರಘು ಮಗನ ಕಣ್ಣೀರನ್ನು ನೋಡಿ ಅರಣ್ಯಗಮನವನ್ನು ನಿಲ್ಲಿಸಿದರೂ ರಾಜಧಾನಿಯಿಂದ ಅನತಿದೂರದ ಶಾಂತಸ್ಥಳದಲ್ಲಿ ಮುನಿವೃತ್ತಿಯನ್ನಾಶ್ರಯಿಸಿದನು.

ಶುದ್ಧನಾದ ವಂಶದಲ್ಲಿ ಮುಮುಕ್ಷು ರಘು ಮತ್ತು ಅಭ್ಯುದಯಶೀಲ ಅಜ ಒಂದೆಡೆ, ಪ್ರಭಾತದ ಶುಭ್ರಾಕಾಶದಲ್ಲಿ ಅಸ್ತಮಿಸುತ್ತಿರುವ ಚಂದ್ರ ಮತ್ತು ಉದಯೋನ್ಮುಖ ಸೂರ್ಯ ಇನ್ನೊಂದೆಡೆ–ಹೀಗೆ ತಕ್ಕಡಿಯ ಎರಡು ತಟ್ಟೆಗಳಲ್ಲಿ ಸಮತೂಕದ ವಸ್ತುಗಳನ್ನು ಬ್ರಹ್ಮನು ತೂಗಿ ಹೋಲಿಸುವಂತಿತ್ತು ಅವುಗಳೊಳಗಿನ ಸಾಮ್ಯ.

ಪ್ರವರ್ತಕ ನಿವರ್ತಕ ಧರ್ಮಗಳು ಶರೀರವೆತ್ತಿ ಸಂಧಿಸುವಂತೆ ಅಜ ಮತ್ತು ರಘು ಆಗಾಗ ಸಂಧಿಸುತ್ತಿದ್ದರು. ಈ ತನಕ ತನ್ನ ಅಂಕೆಗೆ ಒಳಪಡದ ದೇಶಗಳನ್ನು ಜಯಿಸುವ ಆಕಾಂಕ್ಷೆ ಅಜನಿಗಾದರೆ ಮೋಕ್ಷಪ್ರಾಪ್ತಿಗೆ ಬೇಕಾದ ಜ್ಞಾನಾರ್ಜನೆಗಾಗಿ ಯೋಗಿಗಳೊಡನೆ ಸಮಾಲೋಚನೆ ಮಾಡುವುದು ರಘುವಿನ ನಿತ್ಯಕರ್ಮ. ಪ್ರಜೆಗಳ ವ್ಯವಹಾರಗಳನ್ನು ವಿಚಾರಣೆ ಮಾಡಲು ಯುವಕ ಅಜನು ಧರ್ಮಾಸನವನ್ನೇರಿದರೆ ಚಿತ್ತೈಕಾಗ್ರತೆಯನ್ನು ಅಭ್ಯಸಿಸಲು ವೃದ್ಧ ರಘು ದರ್ಭಾಸನದಲ್ಲಿ ಕುಳಿತಿರುವನು. ಸಾಮಂತರನ್ನು ಪ್ರಭುಶಕ್ತಿಯಿಂದ ಸ್ವಾಧೀನದಲ್ಲಿರಿಸಿಕೊಳ್ಳಲು ಅಜನ ಸಾಹಸ; ಪಂಚಪ್ರಾಣಗಳನ್ನು ಸಮಾಧಿಯಿಂದ ನಿರೋಧಿಸಲು ರಘುವಿನ ಪ್ರಯತ್ನ. ಶತ್ರುಗಳ ಯುದ್ಧೋದ್ಯಮವನ್ನು ಅಜನು ಚಾಣಾಕ್ಷನಾಗಿ ಧ್ವಂಸಮಾಡುವ ವೇಳೆಗೆ ರಘು ತನ್ನ ಕರ್ಮಫಲಗಳನ್ನು ಜ್ಞಾನಾಗ್ನಿಯಿಂದ ಭಸ್ಮ ಮಾಡುತ್ತಿದ್ದನು. ಸಂಧಿ, ವಿಗ್ರಹ, ಯಾನ, ಆಸನ, ಭೇದ, ಆಶ್ರಯ–ಈ ಆರು ಗುಣಗಳ ಫಲಗಳನ್ನು ನೋಡಿಕೊಂಡು ಉಪ

ಯುಕ್ತವಾದ ಯಾವುದಾದರೊಂದನ್ನು ಅಜನು ಆಶ್ರಯಿಸುವನು; ರಘು ಚಿನ್ನಮಣ್ಣುಗಳನ್ನು ಸಮಾನದೃಷ್ಟಿಯಿಂದ ನೋಡಿಕೊಂಡು ರಜಸ್ತಮಗಳ ವಿಕಾರಕ್ಕೊಳಗಾಗದೆ ಸತ್ವಗುಣವನ್ನೇ ಪ್ರದರ್ಶಿಸುವನು. ಅಜನು ವೈರಿಗಳ ವಿಷಯದಲ್ಲಿ ಜಾಗರೂಕನಾಗಿದ್ದರೆ ರಘು ಇಂದ್ರಿಯಗಳ ವಿಷಯದಲ್ಲಿ ಜಾಗರೂಕನಾಗಿದ್ದನು. ಅಜನು ಅಭ್ಯುದಯಸಿದ್ಧಿಗೆ ಗೋಜಿತ್ತಿದರೆ ರಘು ಮೋಕ್ಷಪ್ರಾಪ್ತಿಗೋಸ್ಕರ ಉತ್ಸುಕನಾಗಿದ್ದನು. ಫಲಪ್ರಾಪ್ತಿಯು ತನಕ ಕಾರ್ಯ ಪ್ರವೃತ್ತನಾಗಿರುವ ಅಜನಿಗೂ ಪರಮಾತ್ಮ ದರ್ಶನ ಪರ್ಯಂತ ಯೋಗವಿಧಿಯಲ್ಲಿರುವ ರಘುವಿಗೂ ಒಂದು ಬಗೆಯಲ್ಲಿ ಹೋಲಿಕೆಯೂ ಇನ್ನೊಂದು ರೀತಿಯಲ್ಲಿ ವ್ಯತ್ಯಾಸವೂ ಎದ್ದು ಕಾಣುತ್ತಿದ್ದುವು.

ರಘು ಸರ್ವ ವಿಷಯಗಳಲ್ಲಿ ಸಮದೃಷ್ಟಿಯುಳ್ಳ ಕೆಲವು ವರ್ಷ ಶಾಂತಿಯಿಂದ ಕಳೆದು ಒಂದು ದಿನ ಯೋಗಬಲದಿಂದ ಸಾಯುಜ್ಯವನ್ನು ಪಡೆದನು. ತಂದೆ ದೇಹತ್ಯಾಗ ಮಾಡಿದ ವಾರ್ತೆ ಕೇಳಿ ಅಜನಿಗೆ ವ್ಯಸನವಾಯಿತು. ವಸಿಷ್ಠನ ಪೌರೋಹಿತ್ಯದಲ್ಲಿ ಯುಕ್ತಯೋಗ್ಯವಾದ ಅಂತ್ಯ ಕ್ರಿಯೆಗಳಾದುವು. ಪಿತೃಭಕ್ತಿಯಿಂದ ಪುತ್ರಧರ್ಮದಿಂದ ಅಜನು ಎಲ್ಲ ಔರ್ಧ್ವದೈಹಿಕ ಕ್ರಿಯೆಗಳನ್ನು ಲೋಪ ದೋಷಗಳಿಲ್ಲದೆ ವಿಧಿಪೂರ್ವಕ ಮಾಡಿದನು. ಯೋಗದಿಂದ ಮೋಕ್ಷಸಿದ್ಧಿ ಪಡೆದ ತಂದೆ ಪುತ್ರನ ಪಿಂಡೋದಕವನ್ನು ಎದುರುನೋಡುವುದಿಲ್ಲವೆಂದು ಅಜನಿಗೇನು ಗೊತ್ತು?

ಪಿತೃವಿಯೋಗದಿಂದ ಖಿನ್ನನಾದ ಅಜನು ರಾಜ್ಯದ ವಿಷಯದಲ್ಲಿ ನಿರುತ್ಸಾಹಿಯಾದನು. ಇದನ್ನು ನೋಡಿದ ಮಂತ್ರಿಗಳು ಯುಕ್ತಿಯುಕ್ತವಾದ ಮಾತುಗಳಿಂದ ಅವನನ್ನು ಸಮಾಧಾನಪಡಿಸಿದರು. ಅಜನ ದುಃಖೋದ್ವೇಗ ಕಡಮೆಯಾಗಿ ಕ್ರಮೇಣ ಅವನು ಆಡಳಿತಕ್ಕೆ ಮನಸ್ಸು ಕೊಡಲು ಸಾಧ್ಯವಾಯಿತು.

೮

ಅಜವಿಲಾಪ

ಭೂದೇವಿ ಮತ್ತು ಇಂದುಮತಿ ಏಕ ಕಾಲದಲ್ಲಿ ಪತ್ನೀಸ್ಥಾನದಲ್ಲಿದ್ದ ಅಜನಿಗೆ ಭೂಗರ್ಭದಲ್ಲಿ ವಿವಿಧ ರತ್ನಗಳೂ ಇಂದುಮತೀ ಗರ್ಭದಲ್ಲಿ ಒಂದು ಪುತ್ರ ರತ್ನವೂ ದೊರೆತುವು. ಅತಿಥಿ ಸತ್ಕಾರದಿಂದ ಮನುಷ್ಯ ಋಣವನ್ನು

ಶಾಸ್ತ್ರೋಕ್ತ ವಿಧಿಪೂರ್ವಕವಾದ ಯಜ್ಞದಿಂದ ದೇವ ಋಣವನ್ನೂ ಈ ಮೊದಲೇ ತೀರಿಸಿದ ಅಜನು ಈಗ ಪುತ್ರೋತ್ಸವವಾದುದರಿಂದ ಪಿತೃಋಣ ದಿಂದಲೂ ಮುಕ್ತನಾದಂತಾಯಿತು. ಮಗನ ಕೀರ್ತಿ ದಶ ದಿಕ್ಕುಗಳ ಲ್ಲಿಯೂ ಹರಡಿ ಅವನ ರಥವು ಎಲ್ಲೆಲ್ಲೂ ತಡೆಯಿಲ್ಲದೆ ನಡೆಯುವುದೆಂಬ ಲಕ್ಷಣಗಳು ಜನನ ಕಾಲದಲ್ಲೇ ತೋರಿದುದರಿಂದ ಮಗುವಿಗೆ ದಶರಥ ನೆಂದು ನಾಮಕರಣವಾಯಿತು.

ಮಗನು ಶುಕ್ಲಪಕ್ಷದ ಚಂದ್ರನಂತೆ ದಿನ ದಿನಕ್ಕೆ ಮಾಸ ಮಾಸಕ್ಕೆ ಹೆಚ್ಚು ಹೆಚ್ಚಿನ ಚಟುವಟಿಕೆಗಳೊಡನೆ ಬಳೆದು ತಂದೆ ತಾಯಿಗಳಿಗೆ ಮತ್ತು ಸಕಲ ಪ್ರಜಾ ಜನರಿಗೆ ನಯನಾನಂದಕರನಾಗಿದ್ದನು.

ಇಂದ್ರನು ಶಚಿಯೊಡನೆ ನಂದನ ವನದಲ್ಲಿ ವಿಹರಿಸುವಂತೆ ಒಂದು ದಿನ ರಾಜನು ಇಂದುಮತಿಯೊಡನೆ ನಗರೋದ್ಯಾನದಲ್ಲಿ ವಿಹಾರಕ್ಕಾಗಿ ಹೋದನು. ಅದೇ ಸಮಯದಲ್ಲಿ ದಕ್ಷಿಣ ದೇಶದ ಪಶ್ಚಿಮ ಸಮುದ್ರ ತೀರದ ಗೋಕರ್ಣನಾಥೇಶ್ವರನ ಪೂಜೆಗೋಸ್ಕರ ನಾರದನು ಆಕಾಶ ಮಾರ್ಗದಿಂದ ಚಿತ್ತೈಸುತ್ತಿದ್ದನು. ಅವನ ವೀಣೆಯಲ್ಲಿ ಪಾರಿಜಾತ ಕುಸುಮಗಳ ಸುಮಧುರ ಮಾಲೆಯೊಂದು ಜೋಲಾಡುತ್ತಿತ್ತು. ಗಾಳಿ ಅದನ್ನು ಅಪಹರಿಸಿ ಉದ್ಯಾನದಲ್ಲಿದ್ದ ಇಂದುಮತಿಯ ಮೈಮೇಲೆ ಬೀಳಿ ಸಿತು. ಅಜನು ಅದನ್ನು ನೋಡಿ ಆಶ್ಚರ್ಯಪರವಶನಾದನು. ಕ್ಷಣಾರ್ಧ ದಲ್ಲಿ ಇಂದುಮತಿ ಗತಪ್ರಾಣಳಾಗಿ ಭೂತಲದಲ್ಲೆರಗಿದುದಲ್ಲದೆ ರಾಜನನ್ನೂ ಹಾಗೆಯೇ ಬೀಳಿಸಿದಳು.

ಅನುಚರರ ಉದ್ಗಾರ ಕೇಳಿ ಸರೋವರದ ಹಂಸಗಳೂ ಹೆದರಿ ಕೂಗಿದುವು. ಸೇವಕರು ಮೃತ ಶರೀರಗಳಿಗೆ ಗಾಳಿ ಬೀಸಿದರು, ಮುಖ ಗಳಿಗೆ ನೀರೆರಚಿದರು. ರಾಜನಿಗೆ ಸ್ವಲ್ಪ ಚೇತನ ಬಂತು.

ವೀಣೆಯ ತಂತಿ ಕಿತ್ತೊಡನೆ ಅದನ್ನು ಸರಿಪಡಿಸಲು ವೀಣೆಯನ್ನು ಮಡಿಲಿನಲ್ಲಿರಿಸುವಂತೆ ಪ್ರಾಣ ಹೋದ ಇಂದುಮತಿಯನ್ನು ಅಜನು ಮಲ ಗಿಸಿಕೊಂಡನು. ಪ್ರಾತಃಕಾಲದ ಚಂದ್ರನಂತೆ ಆಕೆ ಕಾಂತಿಹೀನೆ ಯಾಗಿದ್ದಳು.

ಅಜನು ಸ್ವಭಾವತಃ ಧೀರನಾದರೂ ಈಗ ಕಣ್ಣೀರು ಮಿಡಿಯುತ್ತ ಗದ್ಗದ ಕಂಠದಿಂದ ಅಳುತ್ತಿದ್ದನು. ಕಬ್ಬಿಣವಾದರೂ ಚೆನ್ನಾಗಿ ಕಾದಾಗ

ಮೇತ್ರಗಾಗುವಂತೆ ದುಃಖಸಂತಪ್ತನಾದ ಮನುಷ್ಯನೂ ಮೃದುಹೃದಯ ನಾಗುತ್ತಾನೆ.

("ಅತಿ ಕೋಮಲವಾದ ಪುಷ್ಪಗಳು ಕೂಡ ಪ್ರಾಣಹಾರಿಯಾಗ ಬಲ್ಲವು ಎಂದ ಮೇಲೆ ವಿಧಿಗೆ ಯಾವ ಸಾಧನವಾದರೂ ಸಾಕಾಗುತ್ತದೆಂದಾಯಿತು. ಮೃದು ವಸ್ತುಗಳನ್ನು ನಾಶಮಾಡಲು ಕಾಲನು ಕೋಮಲವಾದ ಉಪಕರಣಗಳನ್ನು ಉಪಯೋಗಿಸುತ್ತಾನೇನೋ! ಹಿಮವು ಕಮಲಗಳನ್ನು ನಾಶಮಾಡುವುದಿಲ್ಲವೆ? ಹಾಗೆಯೇ ಸುಕೋಮಲೆಯಾದ ಇಂದುಮತಿಯನ್ನು ಪುಷ್ಪಮಾಲೆ ಸಂಹರಿಸುವುದರಲ್ಲಿ ಆಶ್ಚರ್ಯವೇನು?

"ಈ ಸುಮಮಾಲೆಯನ್ನು ನನ್ನ ಎದೆಯಲ್ಲೇ ಇಟ್ಟರೂ ಅದು ನನ್ನನ್ನು ಕೊಲ್ಲದಿದೆಯೇಕೆ? ದೈವೇಚ್ಛೆಯಿಂದ ಅಮೃತವು ವಿಷವಾಗಿಯೂ ವಿಷವು ಅಮೃತವಾಗಿಯೂ ಪರಿಣಮಿಸುವುದಕ್ಕೆ ಇದು ನಿದರ್ಶನ. ವಿಧಿಯು ಈ ಪುಷ್ಪಮಾಲೆಯನ್ನು ವಜ್ರಾಯುಧವನ್ನಾಗಿ ಮಾರ್ಪಡಿಸಿ ಉಪಯೋಗಿಸಿತೆನ್ನುವಂತೆಯೂ ಇಲ್ಲ. ಏಕೆಂದರೆ ಮರವಾಶ್ರಿತೆಯಾದ ವಲ್ಲಿ ಕಡಿದು ಬಿತ್ತೇ ಹೊರತು ಮರವು ನಿರಾಯವಾಗಿದೆ.

"ಪ್ರಿಯೆ, ಇಂದುಮತಿ, ನಾನು ಅಪರಾಧ ಮಾಡಿದ ಸಂದರ್ಭಗಳಲ್ಲಿ ಕೂಡ ನೀನು ಎಂದೂ ಅನಾದರ ತೋರಲಿಲ್ಲ. ಈಗ ನಾನು ನಿರಪರಾಧಿಯಾಗಿದ್ದರೂ, ನಿನಗೆ ಮನಸ್ಸಿನಲ್ಲಿಯೂ ಅಪ್ರಿಯವನ್ನು ಎಣಿಸದಿದ್ದರೂ, ನನ್ನನ್ನೇಕೆ ಬಿಟ್ಟುಹೋದೆ? ನೀನಿಲ್ಲದ ಮೇಲೆ ನಾನು ಭೂಪತಿಯಾಗಿರುವುದು ಅಕ್ಷರಶಃ ನಿಜವಾದರೂ ಆ ಹೆಸರು ನನಗೆ ಅನ್ವರ್ಥವಾಗಲಾರದು. ರಾತ್ರಿ ಒಮ್ಮೆ ಹೋದರೂ ಮರಳಿ ಚಂದ್ರನನ್ನು ಕೂಡಿಕೊಳ್ಳದೆ? ಚಕ್ರವಾಕ ಗಂಡು ಒಂದು ಸಲ ತ್ಯಜಿಸಿದ ಹೆಣ್ಣು ಹಕ್ಕಿಯನ್ನು ಆ ಮೇಲೆ ಬಂದು ಸೇರಿ ಕೊಳ್ಳುವುದಲ್ಲವೆ? ಅವು ತಮ್ಮ ವಿಯೋಗಾವಧಿಯನ್ನು ಸಹಿಸುತ್ತವೆ. ಪುನಃ ಬರದಿರುವ ನೀನು ನನ್ನನ್ನು ದಹಿಸುವೆಯಲ್ಲ! ನಿನ್ನ ಕೋಮಲ ಶರೀರಕ್ಕೆ ಚಿಗುರೆಲೆಗಳ ಹಾಸುಗೆಯಲ್ಲಿ ಮಲಗಿದರೂ ನೋವಾಗುವುದನ್ನು ನಾ ಬಲ್ಲೆ. ಈಗ ಕಠಿಣವಾದ ಚಿತೆಯಲ್ಲಿ ಮಲಗುವೆಯೆಂತು?

"ನೀನು ಸ್ವರ್ಗಕ್ಕೆ ಹೋಗುವಾಗ ನಿನ್ನ ಮಂಜುಳನಾದವನ್ನು ಕೋಗಿಲೆಗಳಿಗೂ ಮಂದಗಮನವನ್ನು ಹಂಸಗಳಿಗೂ ವಿಲಾಸಲಹರಿಯನ್ನು

ಯಂದ ಮಾರುತದಿಂದ ಕಂಪಿಸುವ ಲತೆಗಳಿಗೂ ಕೊಟ್ಟು ಹೋದೆಯೇನು? ಅವುಗಳನ್ನು ನೋಡಿ ನನಗೆ ವಿಯೋಗವ್ಯಥೆ ಕಡಿಮೆಯಾಗಬಹುದೆಂದು ಎಣಿಸಬಹುದು. ಆದರೆ ಅದು ವ್ಯರ್ಥ.

"ಪ್ರಿಯೆ, ಈ ಉದ್ಯಾನದಲ್ಲಿ ಚೂತವೃಕ್ಷವನ್ನೂ ಪ್ರಿಯಂಗೂಲತೆಯನ್ನೂ ಜತೆಗೂಡಿಸಿರುವೆಯಾದರೂ ಅವುಗಳ ವಿವಾಹವಾಗದೆ ನೀನು ಹೋದುದು ಯುಕ್ತವೆ? ನಿನ್ನ ಪಾದಾಘಾತದಿಂದ ಈ ಅಶೋಕವು ಚಿಗುರೊಡೆದು ಹೂಬಿಟ್ಟಿದೆ. ಆ ಹೂಗಳಿಂದ ನಿನ್ನ ತಲೆಯನ್ನು ಅಲಂಕರಿಸುವ ಬದಲು ತರ್ಪಣ ಬಿಡುವ ಹಾಗಾಯಿತೆ?

"ಸುಖದುಃಖಗಳಲ್ಲಿ ಸಮಭಾಗವಹಿಸುವ ಸಖೀಜನರನ್ನೂ ಬಿದಿಗೆಯ ಚಂದ್ರನಂತಿರುವ ಮುದ್ದು ಕುವರನನ್ನೂ ಒಲುಮೆಯ ಬೀಡಿನಂತಿರುವ ನನ್ನನ್ನೂ ನೀನು ಬಿಟ್ಟು ಹೋಗುವೆಯೆಂದೆಣಿಸುವುದೇ ಅಸಹ್ಯ ವೇದನೆಗೆ ಕಾರಣವಾಗುವಾಗ ಬಿಟ್ಟೇ ಹೋಗುವುದನ್ನು ಸಹಿಸುವುದೆಂತು? ನನ್ನ ಧೈರ್ಯಸಂತೋಷಗಳು ಹಾರಿ ಹೋದುವು. ಉತ್ಸವಸಂಗೀತಗಳ ಆಸೆ ತಪ್ಪಿತು. ಲೋಕ ನೀನಿಲ್ಲದೆ ಶೂನ್ಯವಾಗಿದೆ.

"ರಾಜಕಾರ್ಯಗಳಲ್ಲಿ ಮಂತ್ರಿಯೂ ಲಲಿತಕಲೆಗಳಲ್ಲಿ ಪ್ರಿಯ ಶಿಷ್ಯೆಯೂ ಆಗಿರುವ ನಿನ್ನನ್ನು ನಿರ್ದಯ ಮೃತ್ಯು ಕೊಂಡೊಯ್ದರೂ ನನ್ನನ್ನೇಕೆ ಒಯ್ಯಲಿಲ್ಲ? ನನ್ನ ಜೊತೆಯಲ್ಲಿ ಕುಳಿತು ನಾನು ಕೊಡುತ್ತಿದ್ದ ಪೇಯಗಳನ್ನು ಕುಡಿದು ಹರ್ಷತಾಳುತ್ತಿದ್ದ ನೀನು ಈಗ ನನ್ನ ಅಶ್ರುಮಿಶ್ರಿತ ಜಲಾಂಜಲಿಯನ್ನು ಹೇಗೆ ಕೈಗೊಳ್ಳುವೆ?

"ಇಂದ್ರ ವೈಭವವಿದ್ದರೂ ನನಗೆ ಸುಖಸಂತೋಷಗಳಿಲ್ಲ. ಯಾವ ವಿಲೋಭನಗಳೂ ನನ್ನನ್ನು ಸೆಳೆದುಕೊಳ್ಳಲಾರದಾಗಿವೆ.")

ಹೀಗೆ ದುಃಖವೇ ಕರಗಿ ನೀರಾದಂತೆ ಅಜನು ಕಣ್ಣೀರಿಡುತ್ತ ರೋದಿಸಿದನು. ಉದ್ಯಾನದ ಲತಾವೃಕ್ಷಗಳು ಕೂಡ ಅನುತಾಪದಿಂದ ಬಾಷ್ಪ ವಿಸರ್ಜನ ಮಾಡುವಂತೆ ತೋರಿತು.

ರಾಜನು ಕೊನೆಗೆ ಬಂಧುಗಳ ನಿರ್ಬಂಧದಿಂದ ಮೃತದೇಹವನ್ನು ಕೆಳಗಿಳಿಸಿದಾಗ ಅವರು ಚಂದನದ ಚಿತೆಯನ್ನು ತಯಾರಿಸಿ ಅಂತ್ಯ ಸಂಸ್ಕಾರಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿದರು. ವಿಯೋಗದಿಂದ ಕಳೆಗುಂದಿದ ಅಜನು ಹತ್ತು ದಿನಗಳ ಅಶೌಚಕಾಲವನ್ನು ಅಲ್ಲೇ ಕಳೆದು

ಆಕೆಯ ಮೇಲಿರುವ ಮಮತೆಗೆ ತಕ್ಕಂತೆ ಶಾಸ್ತ್ರೋಕ್ತ ವಿಧಿಗಳನ್ನು ಮಾ
ಸಿದ ಬಳಿಕ ರಾಜಧಾನಿಗೆ ಬಂದನು.

೬

ಸಮಾಶ್ವಾಸನ

ವಸಿಷ್ಠ ಮಹರ್ಷಿ ಇದೇ ಸಮಯಕ್ಕೆ ಸರಿಯಾಗಿ ಯಜ್ಞದೀ
ಕೊಟ್ಟಿದ್ದನು. ಅಜನು ದುಃಖಾತಿರೇಕದಿಂದ ಜಡನಾಗಿದ್ದನೆಂದು ತಿಳಿ
ಅವನು ಒಬ್ಬ ಶಿಷ್ಯನೊಡನೆ ರಾಜನಿಗೆ ಸಮಾಧಾನದ ಮಾತುಗಳನ್ನು ಹೇ
ಕಳುಹಿಸಿದನು.

"ರಾಜರ್ಷಿಶ್ರೇಷ್ಠ, ಗುರು ವಸಿಷ್ಠನು ಯಾಗತತ್ಪರನಾಗಿದ್ದರೂ ನಿ
ದುಃಖದಲ್ಲಿ ಸಹಾನುಭೂತಿಯಿಂದ ನಿನಗೆ ಹಿತವಚನವನ್ನು ಹೇಳುವ
ನನಗೆ ಆದೇಶವಿತ್ತಿರುವನು. ಅವನ ಸಂದೇಶವನ್ನು ಸ್ವೀಕರಿಸಿ ಶಾಂ
ಚಿತ್ತನಾಗು. ಭಗವಂತನ ಲೀಲೆಯಿಂದ ತ್ರಿಲೋಕಗಳಲ್ಲಿ ತ್ರಿಕಾಲಗಳ
ಏನೇನು ನಡೆಯುವುದೆಂದು ವಸಿಷ್ಠನು ಬಲ್ಲನೆಂಬ ಸಂಗತಿ ನಿನ್ನ ಹಿರಿಯ
ರಿಗೂ ನಿನಗೂ ತಿಳಿದಿದೆ. ನಿನ್ನ ದುಃಖದ ಕಾರಣವನ್ನು ಅವನು ಅರಿತ
ಕೊಂಡಿದ್ದಾನೆ. ಹಿಂದೆ ತೃಣಬಿಂದುವೆಂಬ ಮುನಿಯು ಕಠಿನ ತಪಸ್ಸನ
ಆಚರಿಸುತ್ತಿದ್ದನು. ಇಂದ್ರನು ಸ್ಥಾನಚ್ಯುತಿಯ ಭೀತಿಯಿಂದ ತಪೋ
ವಿಘ್ನ ಮಾಡಿಸಲು ಹರಿಣೀ ಎಂಬ ದೇವತಾಸ್ತ್ರೀಯನ್ನು ಕಳುಹಿದನು
ಅವಳು ಮುನಿಯ ಮುಂದೆ ತನ್ನ ವಿಲಾಸ ವೈಭವಗಳನ್ನೆಲ್ಲ ತೋರ್ಪಡಿ
ಸಲು ಅವನು ಸಿಟ್ಟುಗೊಂಡು ಶಪಿಸಿದನು: 'ನೀನು ಮನುಷ್ಯ ಸ್ತ್ರೀಯಾಗಿ
ಭೂಲೋಕದಲ್ಲಿ ಜನಿಸು.' ಇದರಿಂದ ಗಾಬರಿಗೊಂಡ ಆಕೆ, 'ಪ್ರಾಜ್ಞನಾದ
ನಾನು ಪರಾಧೀನೆ; ಸ್ವಾಮಿಯ ಆದೇಶದಂತೆ ವರ್ತಿಸಿದ ನನ್ನ ಈ ಅಪ
ರಾಧವನ್ನು ಕ್ಷಮಿಸಿ ಶಾಪವನ್ನು ಹಿಂದೆಗೆದು ಕರುಣಿಸು,' ಎಂದು ಬಹು
ವಿಧವಾಗಿ ಪ್ರಾರ್ಥಿಸಿದಾಗ ಮುನಿ ಪ್ರಸನ್ನನಾಗಿ, 'ದೇವಲೋಕದ ಪುಷ್ಪ
ಸ್ಪರ್ಶವಾದೊಡನೆ ನಿನಗೆ ಶಾಪವಿಮೋಚನೆಯಾಗುವುದು,' ಎಂದು ಸಮಾ
ಧಾನಪಡಿಸಿದನು. ಅವಳು ಕ್ರಥಕೈಶಿಕ ಕುಲದಲ್ಲಿ ಹುಟ್ಟಿ ನಿನ್ನನ್ನು
ವರಿಸಿದಳು. ಶಾಪಾವಸಾನಕಾಲ ಬಂದೊದಗಲು ನಾರದನ ವೀಣೆಯಿಂದ
ಸುಮಮಾಲಿಕೆ ಮೈಮೇಲೆ ಬಿದ್ದು ನಿಜಸ್ಥಾನವನ್ನು ಸೇರಿದ ಅವಳ ಚಿಂತೆ
ಯನ್ನು ಬಿಡು. ಲೋಕಪಾಲನೆಗೆ ಮನವೊಪ್ಪಿಸು. ಏಳಿಗೆಯ ಕಾಲ

ದಲ್ಲಿಯೂ ಮದೋನ್ಮತ್ತನಾಗದ ನೀನು ಶಾಸ್ತ್ರಜ್ಞಾನವನ್ನು ಸ್ಮರಿಸಿಕೊಂಡು ಕರ್ತವ್ಯನಿರತನಾಗು. ಎಷ್ಟು ಕಣ್ಣೀರು ಸುರಿಸಿದರೂ, ಮೃತಿಯನ್ನು ಪಡೆದ, ಆಕೆ ಪುನಃ ಲಭಿಸಳು. ಅವನವನ ಕರ್ಮಫಲಕ್ಕನುಗುಣವಾಗಿ ಪರಲೋಕದಲ್ಲಿ ಸ್ಥಾನಗತಿಗಳು ಭಿನ್ನವಾಗುತ್ತವೆ. ಶೋಕಿಸುವುದನ್ನು ಬಿಟ್ಟು ತರ್ಪಣಾದಿಗಳಿಂದ ಸಹಧರ್ಮಿಣಿಯಲ್ಲಿ ಅನುಗ್ರಹತೋರು.

"ಮರಣವು ಸ್ವಾಭಾವಿಕವಾದುದರಿಂದ ಅದಕ್ಕೆ ದುಃಖಿಸಬಾರದು. ಜೀವಿಸಿರುವಷ್ಟು ಕಾಲವನ್ನು ಲಾಭವೆಂದೇ ತಿಳಿಯಬೇಕು. ಪ್ರಿಯನಾಶವು ಹೃದಯದಲ್ಲಿ ನೆಟ್ಟ ಬಾಣವೆಂದು ತಿಳಿಯುವವನು ಮೂಢ. ಸಂಸಾರ ಕ್ಲೇಶದಿಂದ ಮುಕ್ತಿ ದೊರೆತರೆ ಅದು ದುಃಖವೇ? ದೇಹ ಆತ್ಮಗಳ ನಿಜ ಸ್ವರೂಪವನ್ನು ತಿಳಿದವನಿಗೆ ಪುತ್ರಮಿತ್ರಕಳತ್ರರ ಸಂಯೋಗದಿಂದ ಸಂತೋಷವಾಗಲಿ ವಿಯೋಗದಿಂದ ವ್ಯಥೆಯಾಗಲಿ ಆಗುವುದೆಂತು? ಅಜ ಮಹಾರಾಜ, ಜಿತೇಂದ್ರಿಯರಲ್ಲಿ ಅಗ್ರಗಣ್ಯನಾದ ನೀನು ಹೀಗೆ ಶೋಕಪರವಶನಾಗುವುದು ನಿನಗೆ ಭೂಷಣವಲ್ಲ. ಗಾಳಿಗೆ ಮರಗಳು ಅಲುಗಾಡುವಂತೆ ಪರ್ವತಗಳೂ ನಡುಗಿದರೆ ಅವುಗಳಿಗೆ 'ಅಚಲ'ವೆಂಬ ಹೆಸರು ಒಪ್ಪುವುದೆ?"

ಶಿಷ್ಯನ ಈ ಮಾತುಗಳನ್ನು ಕೇಳಿ ಅಜನಿಗೆ ಸ್ವಲ್ಪ ಧೈರ್ಯ ಬಂದರೂ ಅವನು ಅಜನ ಉಪಚಾರವನ್ನು ಕೈಕೊಂಡು ಹೋಗುವಾಗ ಅವನ ಉಪದೇಶವೂ ಅವನ ಹಿಂದೆಯೇ ಹೋದಂತೆ ತೋರಿತು.

ಮಗ ದಶರಥನು ರಾಜ್ಯಭಾರ ನಿರ್ವಹಣಕ್ಕೆ ಸಮರ್ಥನಾಗುವವರೆಗೆ ಎಂಟು ವರ್ಷಗಳ ಕಾಲ ಅಜನು ರಾಜ್ಯಸೂತ್ರಗಳನ್ನು ಮನಸ್ಸಿಲ್ಲದ ಮನಸ್ಸಿನಿಂದ ಹಿಡಿದಿದ್ದನು. ದುಃಖಶಲ್ಯವು ಅವನ ಹೃದಯವನ್ನು ಭೇದಿಸಿದ್ದುದರಿಂದ ರೋಗಪೀಡೆಯೂ ಕಾಣಿಸಿಕೊಂಡಿತು. ವೈದ್ಯರ ಚಿಕಿತ್ಸೆಗೆ ಮಿಗಿರಿದ ಈ ರೋಗವು ಮರಣದಿಂದಲೇ ನಿವೃತ್ತಿಯಾಗತಕ್ಕದ್ದೆಂದು ಅವನು ತಿಳಿದನು. ಹಾಗಾಗಿ ವಿನಯಶೀಲವಾದ ದಶರಥನಿಗೆ ಪ್ರಜಾಪಾಲನೆಯನ್ನು ವಹಿಸಿಕೊಟ್ಟು ರೋಗಜರ್ಜರಿತವಾದ ತನ್ನ ದೇಹವನ್ನು ಪ್ರಾಯೋಪವೇಶನದಿಂದ ಗಂಗಾಸರಯೂಸಂಗಮದಲ್ಲಿ ತ್ಯಜಿಸಿ ಸ್ವರ್ಗಲೋಕದಲ್ಲಿ ಕಾಂತೆಯೊಡನೆ ನಂದನೋದ್ಯಾನದಲ್ಲಿ ವಿಹರಿಸುತ್ತ ಅತ್ಯಂತ ಸಂತೋಷದಿಂದಿದ್ದನು.

೧೦

ತಾಂಡವ ವೃತ್ತಾಂತ

ಮಳೆಸುರಿಸಿ ಬೆಳೆಬೆಳೆಯುವಂತೆ ಮಾಡುವ ಇಂದ್ರನೂ ರಾ ನೀತಿಗೆ ತಪ್ಪದೆ ಪ್ರಜಾಪಾಲನೆ ಮಾಡುವ ರಾಜನೂ ಲೋಕದ ಸು ಸಂತೋಷಗಳಿಗೆ ಕಾರಣರಾಗುವರು. ಇಂದ್ರ ದಶರಥರು ಕರ್ತವ್ಯತತ್ಪ ರಾಗಿದ್ದುದರಿಂದ ಜನರು ಅತ್ಯಂತ ಸುಖಿಗಳಾಗಿದ್ದರು. ರಘುವಿನ ದಿಗ್ ಜಯದಿಂದಲೂ ಅಜನ ಪೋಷಣೆಯಿಂದಲೂ ಹಿಂದೆ ಶೋಭಿಸಿದ ಭೂಮಿ ಈಗ ದಶರಥನ ಆಳ್ವಿಕೆಯಿಂದ ಮತ್ತಷ್ಟು ಶೋಭಿಸಿತು.

ರಾಜಕುಮಾರರು ಸಿಂಹಾಸನವೇರಿದೊಡನೆ ಬೇಟೆ ಜೂಜು ಮೊದಲಾದ ದುರ್ವ್ಯಸನಗಳು ಅವರಿಗೆ ಅಂಟಿಕೊಳ್ಳುತ್ತವೆ. ಆದರೆ ದಶರಥನಿಗೆ ಅವುಗಳ ಸಂಪರ್ಕವಾಗಲಿಲ್ಲ. ಅವನು ಪರಿಹಾಸಕ್ಕಾದರೂ ಅಸತ್ಯವಚನ ನುಡಿದವನಲ್ಲ, ನಿಷ್ಠುರ ವಾಕ್ಯಗಳನ್ನಾಡಿದವನಲ್ಲ. ಅವನ ಆಜ್ಞಾನುವರ್ತಿಗಳಾದ ರಾಜರು ಅಭ್ಯುದಯವನ್ನು ಪಡೆದರು, ವಿರೋಧಿಸಿದವರು ಅಸ್ತಂಗತರಾದರು. ಮಹಾರಥನಾದ ದಶರಥನು ಸಮುದ್ರದಿಂದ ಆವೃತವಾದ ಭೂತಲವನ್ನೆಲ್ಲ ಜಯಿಸಿದನು. ಸ್ವರ್ಗದಲ್ಲಿ ದೇವತೆಗಳೆಲ್ಲ ಇಂದ್ರನ ಪಾದಗಳಿಗೆರಗುವಂತೆ ಭೂಲೋಕದಲ್ಲಿ ಇತರ ರಾಜರು ದಶರಥನ ಚರಣಗಳಿಗೆ ವಂದಿಸಿದರು.

ಕೋಸಲ ಮಗಧ ಕೇಕಯ ದೇಶಗಳ ರಾಜಪುತ್ರಿಯರಾದ ಕೌಸಲ್ಯಾ ಸುಮಿತ್ರಾ ಕೈಕೇಯಿಯರೆಂಬ ಮೂವರು ಕನ್ಯೆಯರನ್ನು ರಾಜದಶರಥನು ವಿವಾಹವಾಡಿಕೊಂಡನು. ರಾಕ್ಷಸಸಂಹಾರದಲ್ಲಿ ದೇವೇಂದ್ರನಿಗೆ ಸಹಾಯಕನಾದ ರಾಜನು ಯಜ್ಞಯಾಗಗಳನ್ನು ಮಾಡಿ ದೇವದ್ವಿಜರನ್ನು ತೃಪ್ತಿಪಡಿಸಿ ದಾನಧರ್ಮಗಳಿಂದ ಇತರ ಜನರನ್ನು ಸಂತೋಷಪಡಿಸುತ್ತ ಕರ್ತವ್ಯ ಪ್ರಮತ್ತನಾಗದೆ ಸುಖದಿಂದ ಕಾಲಯಾಪನೆ ಮಾಡುತ್ತಿದ್ದನು.

ವಸಂತಕಾಲದಲ್ಲಿ ಗಿಡಬಳ್ಳಿಗಳು ಹೂ ಚಿಗುರುಗಳಿಂದ ತುಂಬಿದುವು. ಕೋಗಿಲೆಗಳ ಇಂಚರವು ಕರ್ಣಾನಂದಕರವಾಯಿತು. ಭ್ರಮರಗಳ ಝೇಂಕಾರವು ಹರ್ಷೋನ್ಮತ್ತತೆಗೆ ಕಾರಣವಾಯಿತು. ದಶರಥನು ಬೇಟೆಯಾಡಲು ಆಶೆಪಟ್ಟನು. ಬೇಟೆಯಲ್ಲಿ ವಿನೋದ ದೊರೆಯುವ

ದೆ ಹೊಸ ಅನುಭವಗಳು ಸಿಗುತ್ತವೆ. ಓಡುವ ಮತ್ತು ಹಾರುವ ಗಪಕ್ಷಿಗಳಿಗೆ ಗುರಿಯಿಟ್ಟು ಬಾಣ ಬಿಡುವುದು ಜಾಣ್ಮೆಯ ಕೆಲಸ. ು ಕ್ರೋಧಗಳಲ್ಲಿ ಮೃಗಗಳ ರೀತಿಗಳು ದರ್ಶನೀಯವಾದುವು. ಆದು ಂದ ರಾಜನು ಮಿತಪರಿವಾರದೊಂದಿಗೆ ಅತ್ಯುತ್ಸಾಹದಿಂದ ಕಾಡಿಗೆ ರಟನು.

ಬೇಟೆಗಾರರ ಬೊಬ್ಬೆ ಕೇಳಿ ಹರಿಣಗಳು ಹೆದರಿ ಓಡಿದುವು. ಮರಿ ು ತಾಯಂದಿರ ಬೆನ್ನು ಹಿಡಿದುವು. ರಾಜನು ಅವುಗಳನ್ನು ಹೊಡೆಯ ಕೆಂದು ಆಲೋಚಿಸಿದರೂ ಅವುಗಳ ಭೀರು ಸ್ವಭಾವವನ್ನೂ ದೈನ್ಯ ನ್ನೂ ನೋಡಿ ಹಿಂದೆಗೆದನು. ಮುಂದೆ ಹೋಗುತ್ತಾ ಪಳ್ಳಗಳಿಂದ ಟ್ಟು ಹೋಗುವ ಕಾಡು ಹಂದಿಗಳನ್ನೂ ಪೆರ್ಮರಗಳ ಎಡೆಗಳಲ್ಲಿ ತುವ ಕಾಡು ಕೋಣ ಖಡ್ಗ ಮೃಗಗಳನ್ನೂ ಬಾಣಗಳಿಗೆ ಗುರಿ ಮಾಡಿ ು. ಯುದ್ಧದಲ್ಲಿ ಸಹಾಯ ಮಾಡುವ ಆನೆಗಳ ವೈರಿಗಳಾದ ಸಿಂಹ ನ್ನು ಕೊಂದು ಕಾಡಾನೆಗಳಿಗೆ ಭಯವಿಲ್ಲದಂತೆ ಮಾಡಿದನು. ಸಾಯಂ ಲದ ವರೆಗೆ ಹೀಗೆ ಮೃಗಯಾ ವಿನೋದವಾಯಿತು.

ಚಿಗುರೆಲೆ ಮತ್ತು ಹೂಗಳನ್ನು ಶೇಖರಿಸಿ ಸಿದ್ಧಪಡಿಸಿದ ಹಾಸು ು ಮೇಲೆ ರಾಜನು ಪವಡಿಸಿ ಮುಂಜಾನೆ ಹಕ್ಕಿಗಳ ಕಲರವದೊಂದಿಗೆ ್ದನು. ಪ್ರಾತರ್ವಿಧಿಗಳನ್ನು ಮುಗಿಸಿ ಕುದುರೆಯನ್ನೇರಿ ಪುನಃ ಬೇಟೆಗೆ ರಟೊಡನೆ ಎದುರಿಗೆ ಒಂದು ಜಿಂಕೆ ಓಡಿತು. ಕುದುರೆಯನ್ನು ಅದರ ದೆ ಓಡಿಸಿದನು. ಅನುಚರರು ಹಿಂದುಳಿದರು. ಬಲುಹೊತ್ತು ಓಡಿದ ದುರೆ ದಣಿದು ಬಾಯಿಯಿಂದ ನೊರೆಕಾರುತ್ತ ತಮಸಾ ನದೀತೀರಕ್ಕೆ ಟ್ಟಿತು. ಅಲ್ಲಿ ನಿಂತೊಡನೆ ನೀರಿನಲ್ಲಿ ಕೊಡ ಮುಳುಗಿಸಿದಂತೆ ಗುಳು ಳು ಶಬ್ದ ಬಂದುದು ಕೇಳಿಸಿತು. ಆನೆ ಸೊಂಡಿಲಿನಿಂದ ನೀರು ಹೀರುವು ದು ಎಣಿಸಿದ ರಾಜನು ಆ ಶಬ್ದ ಬಂದೆಡೆಗೆ ಗುರಿಯಿಟ್ಟು ಬಾಣಹೊಡೆ ು. ಕಾಡಾನೆಗಳನ್ನು ಕೊಲ್ಲಬಾರದೆಂಬುದು ರಾಜನಿಗೆ ತಿಳಿದಿದ್ದರೂ ಚೋದನೆಯಿಂದ ಅಧರ್ಮದಲ್ಲಿ ಕಾಲಿಟ್ಟನು.

ಕಾಡಾನೆ ಬೀಳುವುದೆಂದು ನಿರೀಕ್ಷಿಸಿಕೊಂಡಿದ್ದ ದಶರಥನು 'ಹಾ, ಃ' ಎಂಬ ಆರ್ತಸ್ವರವನ್ನು ಕೇಳಿ ಕುದುರೆಯಿಂದಿಳಿದು ಓಡಿಹೋಗಿ ಸ್ವರ ಕೇಳಿದ ಸ್ಥಳದಲ್ಲಿ ಹುಡುಕಿದನು. ಮುನಿಕುಮಾರನೊಬ್ಬನು

ಪೊದರುಗಳ ಎಡೆಯಲ್ಲಿ ನೀರಿನ ಪಾತ್ರೆಯನ್ನು ಹಿಡಿದುಕೊಂಡು
ದ್ದನು. ಬಾಣವು ಎದೆಯಲ್ಲಿ ನಾಟಿಕೊಂಡಿತ್ತು. ಅದನ್ನು ನೋ
ರಾಜನ ಹೃದಯಕ್ಕೆ ಬಾಣ ನೆಟ್ಟಂತಾಯಿತು. ಅವನು ಮುನಿಕು
ರನನ್ನು ಸಮೀಪಿಸಿ ಬಹು ದೈನ್ಯದಿಂದ "ನೀನಾರು?" ಎಂದು ಕೇಳಿದ
"ನಾನು ಶಾಂತನನೆಂಬ ವೈಶ್ಯ ಬ್ರಹ್ಮಚಾರಿ. ಅಂಧರೂ ವೃದ್ಧರೂ
ರುವ ತಂದೆ ತಾಯಿಗಳು ಇಲ್ಲಿಯೇ ಅನತಿ ದೂರದಲ್ಲಿದ್ದಾರೆ. ಅವ
ನೀರನ್ನು ತಂದು ಕೊಡಲು ಗಿಂಡಿಗೆಯನ್ನು ಮುಳುಗಿಸುತ್ತಿರುವಷ್ಟ
ಬಾಣವು ಎದೆಗೆ ನಾಟಿತು...." ಮುಂದೆ ಮಾತು ಹೊರಡದಾಯಿ
ದಶರಥನು ಅವನನ್ನು ಹೆತ್ತವರ ಬಳಿಗೆ ಕೊಂಡೊಯ್ದನು. ಕಾಲ ಸಪ್ಪ
ಕೇಳಿದ ವೃದ್ಧರು ಮಗನೇ ಬಂದನೆಂದು ತಿಳಿದು, "ಸ್ವಲ್ಪ ನೀರು ಕೊ
ಮಗು. ಇಷ್ಟೇಕೆ ತಡವಾಯಿತು?" ಎಂದರು. ದಶರಥನ ಮನಸ್ಸಿ
ಆದ ಸಂಕಟ ಅಷ್ಟಿಷ್ಟಲ್ಲ. ಅವನು ತನ್ನ ತಪ್ಪು ತಿಳಿವಿನಿಂದ ನಡೆದ
ಅನರ್ಥವನ್ನು ವಿವರಿಸಿ ಹೇಳಿದನು.

ವೃದ್ಧ ದಂಪತಿಗಳಿಗೆ ಮಿತಿಮೀರಿದ ದುಃಖವಾಯಿತು. ಮುನಿ
ಮಗನ ಎದೆಯಿಂದ ಬಾಣವನ್ನು ಕಿತ್ತೊಗೆಯುವಂತೆ ರಾಜನಿಗೆ ಹೇಳಿದ
ಬಾಣವನ್ನು ಎಳೆದೊಡನೆ ರಕ್ತ ಸೋರಿ ಶಾಂತನನು ಮೃತನಾದ
ಮುದುಕರು ಕಣ್ಣೀರು ಕರೆಯುತ್ತ, "ಮಹಾರಾಜ, ಅಪರವಯಸ್ಸಿ
ನೀನು ನಮ್ಮಂತೆ ಪುತ್ರವಿರಹದಿಂದ ಮರಣಹೊಂದುವೆ." ಎಂದು ಹೇ
ದರು. ವಿವಾಹವಾಗಿ ಹಲವು ವರ್ಷಗಳು ಕಳೆದಿದ್ದರೂ ಈ ವರೆ
ಪುತ್ರೋತ್ಪನ್ನನಾಗದ ರಾಜನು ಈ ಶಾಪವನ್ನು ಅನುಗ್ರಹವೆಂದೇ ತಿಳಿ
ಕೊಂಡನು. ಏಕೆಂದರೆ ಪುತ್ರಶೋಕದಿಂದ ಅವರಂತೆ ಸಾಯಬೇಕಾದ
ಮೊದಲು ಪುತ್ರಜನನವಾಗಬೇಕು; ಅವನು ಅವರಷ್ಟು ಮುದುಕನಾಗು
ವರೆಗೆ ಮಗನ ವಿಲಾಸ ವಿನೋದಗಳನ್ನು ನೋಡಿ ನಲಿಯಬಹುದ
ಕೃಷಿಯೋಗ್ಯವಾದ ನೆಲವನ್ನು ಸುಡುವುದು ಕೆಡುಕೆಂದು ತಿಳಿಗೇಡಿಗ
ತಿಳಿದರೂ ಅದು ಉತ್ಕೃಷ್ಟವಾದ ಬೆಳೆ ಬರಲು ಕಾರಣವಾಗುವುದಲ್ಲ

ಪಶ್ಚಾತ್ತಾಪದಿಂದ ಬೆಂದ ದಶರಥನು, ತನ್ನಿಂದ ಅವರಿಗೆ ಯಾ
ದಾದರೂ ಕೆಲಸವಾಗಬೇಕಿದ್ದರೆ ಅದನ್ನು ಮಾಡುವುದಾಗಿ ಹೇಳಿದನ
"ನಮ್ಮ ಏಕಮಾತ್ರ ಪುತ್ರನು ಮೃತನಾದುದರಿಂದ ನಮಗೆ ಇನ್ನು ಯಾ

ತೆಯೂ ಇಲ್ಲ. ಇವನಿಗೋಸ್ಕರ ರಚಿಸಬೇಕಾದ ಚಿತೆಯನ್ನು ಸ್ವಲ್ಪ
ದೊಡ್ಡದಾಗಿ ಮಾಡಿ ನಾವಿಬ್ಬರೂ ಇವನೊಡನೆ ಶರೀರತ್ಯಾಗ ಮಾಡು
ವಂತೆ ಅನುಗ್ರಹಿಸು.”

೧೧

ಪುತ್ರಕಾಮೇಷ್ಟಿ

ಮೃಗಯಾವಿನೋದವು ದುರಂತವಾದಂದಿನಿಂದ ದಶರಥನು ರಾಜಕಾರ್ಯಗಳಲ್ಲೇ ಪ್ರವೃತ್ತನಾಗಿದ್ದು ಪ್ರಜಾಸೇವೆಯೇ ತನ್ನ ಧ್ಯೇಯವೆಂದು ಶಕ್ತಿಮೀರಿ ದುಡಿದನು. ಕಾರ್ಯತತ್ಪರತೆಯಿಂದ ಬರುವ ಸುಖಸಂತೋಷಗಳು ಅವನಿಗೆ ಸಂಪೂರ್ಣವಾಗಿ ದೊರೆತುವು. ಮಕ್ಕಳಾಗದ ಕೊರಗು ಮಾತ್ರ ಅವನನ್ನು ನಿರಂತರವಾಗಿ ಬಾಧಿಸುತ್ತಲೇ ಇತ್ತು. ಅವನು ವಸಿಷ್ಠನ ಸಲಹೆಯಂತೆ ಋಷ್ಯಶೃಂಗ ಋಷಿಯನ್ನು ಬರಮಾಡಿ ಅವನ ಅಧ್ವರ್ಯುತ್ವದಲ್ಲಿ ಪುತ್ರಕಾಮೇಷ್ಟಿಯನ್ನು ಮಾಡುವುದೆಂದು ಸಂಕಲ್ಪಿಸಿ ದೀಕ್ಷಿತನಾದನು.

ಯಜ್ಞ ನಡೆಯುತ್ತಿದ್ದಾಗ ದಿವ್ಯಪುರುಷನೊಬ್ಬನು ಹೋಮಾಗ್ನಿಯಿಂದ ಉದ್ಭವಿಸಿ ತನ್ನ ಕೈಯಲ್ಲಿದ್ದ ಪಾಯಸಪಾತ್ರೆಯನ್ನು ದಶರಥನಿಗೆ ಕೊಟ್ಟು, ‘ಈ ಪಾಯಸವನ್ನು ನಿನ್ನ ಪತ್ನಿಯರಿಗೆ ಉಣಿಸು. ಮಹಾಮಹಿಮರಾದ ಮಕ್ಕಳು ಅವರಲ್ಲಿ ಹುಟ್ಟುವರು,’ ಎಂದು ಅದೃಶ್ಯನಾದನು. ರಾಜನು ಹಾಗೆಯೇ ಮಾಡಿ ಯಜ್ಞವನ್ನು ಪೂರ್ಣಗೊಳಿಸಿ ಋತ್ವಿಜರಿಗೆ ಯಥೋಚಿತ ದಕ್ಷಿಣೆ ಕೊಟ್ಟು ಸಂತೋಷಪಡಿಸಿದನು.

ಪಾಯಸದ ಮಹತ್ವದಿಂದ ಮೂರು ಮಂದಿ ರಾಣಿಯರೂ ಗರ್ಭಧರಿಸಿದರು. ನವಮಾಸ ತುಂಬಿತು. ಗ್ರಹಗಳು ಉಚ್ಚಸ್ಥಾನದಲ್ಲಿರುವ ಶುಭಮುಹೂರ್ತದಲ್ಲಿ ಕೌಸಲ್ಯೆ ರಾಮನನ್ನು, ಕೈಕೇಯಿ ಭರತನನ್ನು ಮತ್ತು ಸುಮಿತ್ರೆ ಲಕ್ಷ್ಮಣ ಶತ್ರುಘ್ನರನ್ನು ಹಡೆದರು. ಅರಮನೆಯಲ್ಲಿ ಅಪೂರ್ವವಾದ ಆ ಉತ್ಸವದ ವಿಜೃಂಭಣೆ ವರ್ಣನೆಗೆ ಮೀರಿತ್ತು. ಜಾತಕರ್ಮಾದಿ ಸಂಸ್ಕಾರಗಳು ಯಥಾವಿಧಿಯಾಗಿ ನಡೆದುವು. ಬಾಲಕರು ದಿನದಿಂದ ದಿನಕ್ಕೆ ವೃದ್ಧಿಪಡೆಯುತ್ತ ದಣಿದ ತಂದೆಯನ್ನು ಬಾಲಲೀಲೆಗಳಿಂದ ತಣಿಸುತ್ತ ಎಲ್ಲರ ಪ್ರೀತಿಗೂ ಪಾತ್ರರಾದರು. ನಾಲ್ವರೂ ಅನ್ಯೋನ್ಯ ಪ್ರೀತಿ

ಯಿಂದಿದ್ದರೂ ರಾಮಲಕ್ಷ್ಮಣರು ಒಂದು ಜೊತೆಯಾಗಿಯೂ ಭರತ
ಘ್ನರು ಇನ್ನೊಂದು ಜೊತೆಯಾಗಿಯೂ ಚೆನ್ನಾಗಿ ಹೊಂದಿಕೊಂಡಿದ್ದ

ಸಕಾಲದಲ್ಲಿ ಅವರಿಗೆ ಉಪನಯನವಾಯಿತು. ರಾಜಕುಮಾ
ಒಪ್ಪುವ ವಿದ್ಯಾಭ್ಯಾಸವೂ ಏರ್ಪಟ್ಟಿತು. ಅವರ ವಿದ್ಯಾವಿನಯಸ
ತೆಯಿಂದ ರಾಜನು ಮತ್ತಷ್ಟು ತೃಪ್ತನಾದನು.

೧೨

ಯಜ್ಞರಕ್ಷಣೆ

ಒಂದು ದಿನ ವಿಶ್ವಾಮಿತ್ರನು ದಶರಥನ ಆಸ್ಥಾನಕ್ಕೆ ಬಂದ
ರಾಜನು ಮುನಿಯನ್ನು ಉಪಚರಿಸಿ ಸತ್ಕರಿಸಿದನು. ಕುಶಲ ಪ್ರಶ್ನೆಗ
ಮೇಲೆ ರಾಜನು ಅವನ ಆಗಮನದ ಕಾರಣವನ್ನು ಕೇಳಿದನು. "ನ
ಒಂದು ಸಿದ್ಧಿಗೋಸ್ಕರ ಮಹಾಯಜ್ಞವನ್ನು ಆರಂಭಿಸಬೇಕಾಗಿದೆ. ಅ
ದುಷ್ಟ ರಾಕ್ಷಸರು ವಿಘ್ನಕಾರಿಗಳು. ಅವರನ್ನು ಸಂಹರಿಸದೆ ಗತ್ಯ
ವಿಲ್ಲ. ನಿನ್ನ ಮಕ್ಕಳಿಂದಲೇ ಈ ಕೆಲಸವಾಗಬೇಕು. ರಾಮನ
ಲಕ್ಷ್ಮಣನನ್ನೂ ನನ್ನ ಜೊತೆಯಲ್ಲಿ ಕಳುಹಿಸಿಕೊಡು. ವಯಸ್ಸಿ
ಚಿಕ್ಕವರಾದರೂ ಅವರು ಮಹಾಪ್ರಭಾವಶಾಲಿಗಳು," ಎಂದನು ಮು

ಈ ಮಾತುಗಳನ್ನು ಕೇಳಿ ರಾಜನು ಕಳವಳಪಟ್ಟರೂ ವಸಿಷ್ಠ
ವಿಶ್ವಾಮಿತ್ರನ ಅಪೇಕ್ಷೆಗೆ ಬೆಂಬಲವಿತ್ತುದರಿಂದ ಅವನು ಒಪ್ಪಿದನು.
ಥಿಗಳ ಅಭೀಷ್ಟವನ್ನು ಸಲ್ಲಿಸದವರು ರಘುಕುಲದಲ್ಲಿಲ್ಲವೆಂಬ ಖ
ಯನ್ನು ದಶರಥನು ನಿರಾಕರಿಸುವನೆ?

ರಾಜನ ಅಪ್ಪಣೆಯಂತೆ ರಾಮಲಕ್ಷ್ಮಣರು ಧನುರ್ಧಾರಿಗಳ
ಹೊರಟು ಅವನ ಪಾದಗಳಿಗೆ ವಂದಿಸಿದರು. ಪುತ್ರವಿರಹದ ಕಲ್ಪನೆ
ದೊಡನೆ ಅವನ ಮನಸ್ಸು ಕದಡಿ ಕಣ್ಣೀರು ಹರಿಯಿತು; ಆದರೂ ಪ್ರಿ
ಯಿಂದ ಹರಸಿ ಕಳುಹಿಸಿದನು. ಮಹಾಮಹಿಮನಾದ ವಿಶ್ವಾಮಿತ್ರ
ರಕ್ಷಣೆಯಲ್ಲಿ ಅವರಿಗೆ ಯಾವ ಹಾನಿಯೂ ಒದಗದೆಂದು ಅವನ ಧೈರ್ಯ
ಬಹುಕಾಲ ಅಪುತ್ರನಾಗಿದ್ದು ವೃದ್ಧಾಪ್ಯದಲ್ಲಿ ಹುಟ್ಟಿದ ಮಕ್ಕಳನ್ನು ದೂ
ಕಳುಹಿಸಬೇಕಾಯಿತಲ್ಲ ಎಂಬ ವ್ಯಥೆ ಮಾತ್ರ ಬೆನ್ನು ಬಿಡಲಿಲ್ಲ.

ಮಹರ್ಷಿಯ ಹಿಂದೆ ಬ್ರಹ್ಮಚಾರಿಗಳು ಮುನ್ನಡೆದರು. ಪಟ್ಟ
ವನ್ನು ದಾಟಿ ಸರಯೂ ತೀರಕ್ಕೆ ತಲಪಿದರು. ರಾಮನಿಗೆ ಬಲ, ಅತಿಬ

ಎಂಬ ಮಂತ್ರಾಸ್ತ್ರಗಳ ಉಪದೇಶವಾಯಿತು. ಮುಂದೆ ಹೋಗುತ್ತ ವಿಶ್ರಮಿಸಿದಲ್ಲಿ ಇತರ ಬಾಣಪ್ರಯೋಗಗಳ ವಿವಿಧ ರೀತಿಗಳನ್ನು ಮುನಿ ರಾಮಲಕ್ಷ್ಮಣರಿಗೆ ತೋರಿಸಿಕೊಡುತ್ತಿದ್ದನು. ರಾಜಕುಮಾರರಿಗೆ ಶಸ್ತ್ರಾಭ್ಯಾಸದ ಉತ್ಸಾಹದಿಂದ ಆಯಾಸವೆಂದು ತೋರದೆ ಮಾರ್ಗಕ್ರಮಣವಾಯಿತು. ಗಂಗಾತೀರ ಬಂತು. ಭಗೀರಥನು ಗಂಗೆಯನ್ನು ಸ್ವರ್ಗಲೋಕದಿಂದ ಅವತರಿಸುವಂತೆ ಮಾಡಿದ ಕಥೆಯನ್ನೂ ಹಿರಿಯರಾದ ಇಕ್ಷ್ವಾಕು, ಕಕುತ್ಸ್ಥ, ಸಗರ ಮೊದಲಾದ ವೀರರ ಚರಿತ್ರೆಗಳನ್ನೂ ಋಷಿ ವಿವರಿಸಿ ಹೇಳಿದನು. ಇವುಗಳಿಂದ ಸಂತೋಷಗೊಂಡ ಕುಮಾರರು ವನಶೋಭೆಯನ್ನು ನೋಡುತ್ತ ಪಕ್ಷಿಗಳ ಮಧುರಗಾನವನ್ನು ಕೇಳುತ್ತ ಶುದ್ಧ ಗಾಳಿಯನ್ನು ಸೇವಿಸುತ್ತ, ಈಶ್ವರನ ತಪೋವನದಲ್ಲಿ ಮನ್ಮಥನು ಭಸ್ಮವಾದ ಸ್ಥಳವನ್ನು ಈಕ್ಷಿಸುತ್ತ ಅಲ್ಲಲ್ಲಿ ತಪೋವನಗಳಲ್ಲಿ ವಿಶ್ರಮಿಸುತ್ತ ಮುಂದೆ ಹೋದರು. ಅವರು ಹೋದಲ್ಲೆಲ್ಲ ಮುನಿಗಳ ಉಪಚಾರ ಸತ್ಕಾರಗಳನ್ನು ಸ್ವೀಕರಿಸಿ ಸುಖ ಪ್ರಯಾಣಗೈದು ಮುಂದೆ ಒಂದು ಮಹಾರಣ್ಯವನ್ನು ಹೊಕ್ಕರು. 'ಇಲ್ಲಿ ಸಾವಿರ ಆನೆಗಳ ಬಲವಿರುವ ತಾಟಕೆ ಎಂಬವಳಿದ್ದಾಳೆ. ಅವಳು ಸುಕೇತು ಎಂಬ ಯಕ್ಷನ ಮಗಳಾದರೂ ಅಗಸ್ತ್ಯನ ಶಾಪದಿಂದ ರಾಕ್ಷಸಿಯಾಗಿ ಜನರಿಗೆ ಬಹಳ ಪೀಡೆ ಕೊಡುತ್ತಿರುವಳು. ನೋಡು, ಅಲ್ಲೇ ಬರುತ್ತಿರುವ ಅವಳನ್ನು ಸಂಹರಿಸು. ಸ್ತ್ರೀವಧೆ ನಿಷಿದ್ಧವೆಂದು ಶಂಕಿಸಬೇಡ. ಮನೆಗೆ ಬೆಂಕಿ ಕೊಡುವವರು, ವಿಷವನ್ನುಣಿಸುವವರು, ನಿಃಶಸ್ತ್ರರನ್ನು ಶಸ್ತ್ರಪಾಣಿಗಳಾಗಿ ಕೊಲ್ಲಲೆಳಸುವವರು, ದ್ರವ್ಯಹರಣ ಮಾಡುವವರು, ಪರಸ್ತ್ರೀಯನ್ನು ಕದ್ದೊಯ್ಯುವವರು, ಇತರರ ಹೊಲಗದ್ದೆಗಳನ್ನು ಅಪಹರಿಸುವವರು ಈ ಆರು ಜನರಿಗೆ 'ಆತತಾಯಿ'ಗಳೆಂದು ಹೆಸರು. ಅವರ ಹನನದ ವಿಷಯದಲ್ಲಿ ವಿಚಾರ ಮಾಡಬೇಕಾಗಿಲ್ಲವೆಂಬುದು ಧರ್ಮ,' ಎಂದು ಹೇಳುತ್ತಿರುವಾಗಲೇ ಆಕೆ ಒಂದು ಮರವನ್ನು ಕಿತ್ತು ಕೈಯಲ್ಲೆತ್ತಿ ಇವರನ್ನು ಹೊಡೆಯಲು ಎದುರು ಬಂದಳು. ಕೂಡಲೇ ರಾಮನು ಬಿಲ್ಲಿಗೆ ಬಾಣ ಜೋಡಿಸಿ ಎಸೆದನು. ತಾಟಕೆ ಸತ್ತುಬಿದ್ದಳು. ಭೂಮಿ ಕಂಪಿಸಿತು.

ಮುಂದೆ ತುಸುದೂರ ನಡೆದು ವಿಶ್ವಾಮಿತ್ರನ ಆಶ್ರಮವನ್ನು ಸೇರಿದ್ದಾಯಿತು. ಮುನಿಗಳು ಸಂತುಷ್ಟರಾದರು. ಮರುದಿನ ವಿಶ್ವಾಮಿತ್ರನು

ಯಜ್ಞವನ್ನು ಆರಂಭಿಸಿದಾಗ ಸುಬಾಹು ಮಾರೀಚರೆಂಬ ರಾಕ್ಷಸರು ಯಜ್ಞಶಾಲೆಗೆ ರಕ್ತಮಾಂಸಗಳನ್ನು ಎಸೆಯತೊಡಗಿದರು. ರಾಮನು ಅವರನ್ನು ತನ್ನ ಬಾಣಗಳಿಂದ ಹೊಡೆದು ಕೆಡವಿದನು. ಯಜ್ಞವು ನಿರ್ವಿಘ್ನವಾಗಿ ಕೊನೆಗೊಂಡಿತು. ವಿಶ್ವಾಮಿತ್ರನು ರಾಮಲಕ್ಷ್ಮಣರ ಶಕ್ತಿಸಾಮರ್ಥ್ಯಗಳನ್ನು ಹೊಗಳುತ್ತ ವಿಘ್ನನಿವಾರಣೆಗಾಗಿ ಅವರನ್ನು ಅಭಿನಂದಿಸಿದನು.

೧೪

ಧನುರ್ಭಂಗ

ಮರುದಿನ ಪ್ರಾತರ್ವಿಧಿಗಳನ್ನು ಮುಗಿಸಿ ಕುಮಾರರು ಮುನಿಚರಣಗಳಿಗೆರಗಿ ಅಯೋಧ್ಯೆಗೆ ತೆರಳಲು ಅಪ್ಪಣೆ ಕೇಳಿದರು. ಋಷಿ ಅವರ ಬೆನ್ನು ಸವರುತ್ತ, "ಇಲ್ಲಿಂದ ಸ್ವಲ್ಪ ದೂರದಲ್ಲಿ ಮಿಥಿಲಾ ದೇಶವಿದೆ. ಜನಕರಾಜನು ಅದರ ಅಧಿಪತಿ. ಅವನು ಒಂದು ಯಜ್ಞವನ್ನು ಮಾಡುತ್ತಿದ್ದಾನೆ. ನಾವೆಲ್ಲ ಅಲ್ಲಿಗೆ ಹೋಗೋಣ. ಜನಕನಲ್ಲಿ ಈಶ್ವರದತ್ತವಾದ ಮಹಾಧನುಸ್ಸೊಂದಿದೆ. ಇದುವರೆಗೆ ಅದನ್ನೆತ್ತಿ ಬಗ್ಗಿಸಿದವರಿಲ್ಲ. ಅದು ಪ್ರೇಕ್ಷಣೀಯ ವಸ್ತು. ಅದಕ್ಕೆ ಶಿಂಜಿನಿಯನ್ನು ಬಿಗಿದು ಬಾಣ ಜೋಡಿಸಿದವನಿಗೆ ತನ್ನ ಮಗಳಾದ ಸೀತೆಯನ್ನು ಕೊಡುವುದೆಂದು ಜನಕನ ಪ್ರತಿಜ್ಞೆ. ಆದುದರಿಂದ ಅಲ್ಲಿಗೆ ನನ್ನೊಡನೆ ಬನ್ನಿರಿ." ಎಂದನು. ರಾಮಲಕ್ಷ್ಮಣರಿಗೆ ಆ ಧನುಸ್ಸಿನ ಕುರಿತು ಕೌತುಕ ಹುಟ್ಟಿತು. ಮುನಿಯ ಹಿಂದೆ ಅವರು ಹೊರಟರು.

ಮಾರ್ಗಮಧ್ಯದಲ್ಲಿ ಗೌತಮ ಮಹರ್ಷಿಯ ತಪೋವನ. ಅಲ್ಲಿ ಶಾಪಗ್ರಸ್ತೆಯಾದ ಅಹಲ್ಯೆ ಶ್ರೀ ರಾಮನ ದರ್ಶನದಿಂದ ಪುನೀತೆಯಾದಳು. ಅವರು ಗೌತಮನ ಆತಿಥ್ಯವನ್ನು ಸ್ವೀಕರಿಸಿ ಮುಂದೆ ಹೊರಟರು.

ಮಿಥಿಲಾ ನಗರದ ಬೀದಿಯಲ್ಲಿ ಹೋಗುತ್ತಿದ್ದ ರಾಮಲಕ್ಷ್ಮಣರನ್ನು ಪುರಜನರು ಕುತೂಹಲದಿಂದ ನೋಡುತ್ತಿದ್ದರು. ವಿಶ್ವಾಮಿತ್ರನು ಬಂದುದನ್ನು ತಿಳಿದು ಜನಕನು ಅತ್ಯಾನಂದಗೊಂಡು ಬಹು ಗೌರವದಿಂದ ಎದುರ್ಗೊಂಡು ಸತ್ಕಾರ ಮಾಡಿದನು. ಯಜ್ಞಕಾರ್ಯಗಳು ಸಾಂಗವಾಗಿ ಮುಗಿದುವು.

ರಾಮಲಕ್ಷ್ಮಣರನ್ನು ತೋರಿಸುತ್ತ ವಿಶ್ವಾಮಿತ್ರನು ಜನಕನೊಡನೆ ಹೀಗೆಂದನು: "ಇವರು ದಶರಥನ ಪುತ್ರರು. ನನ್ನ ಯಜ್ಞದ ರಕ್ಷಣೆಗಾಗಿ ಇವರನ್ನು ಕರೆತಂದಿದ್ದೆ. ಅಯೋಧ್ಯೆಯಿಂದ ಬರುವಾಗ ತಾಟಕೆಯನ್ನು ಸಂಹರಿಸಿದುದಲ್ಲದೆ ಯಜ್ಞವಿಘ್ನಕಾರಿಗಳಾದ ದುಷ್ಟರನ್ನು ಮುರಿದಿಕ್ಕಿದ ಯಶಸ್ಸು ಶ್ರೀ ರಾಮನದು. ನಿನ್ನ ಶೈವಧನುಸ್ಸನ್ನು ನೋಡಬೇಕೆಂಬ ಇಚ್ಛೆ ಅವನಿಗಿದೆ."

ಜನಕನು ಈ ಮಾತುಗಳನ್ನು ಕೇಳಿ ಸಂತುಷ್ಟನಾದನು. ಈ ವರೆಗೆ ಯಾರೂ ಕದಲಿಸದ ಬಿಲ್ಲನ್ನೂ ಅವರ ಸೌಕುಮಾರ್ಯವನ್ನೂ ನೆನೆದು ಅವನು ಮರುಗಿ ತನ್ನ ಪ್ರತಿಜ್ಞೆಗೆ ನಾಚಿಕೊಂಡನು. ಅವನ ಅಭಿಪ್ರಾಯವನ್ನು ಊಹಿಸಿದ ವಿಶ್ವಾಮಿತ್ರನು ಶ್ರೀ ರಾಮನ ಪರಾಕ್ರಮವನ್ನು ಕೊಂಡಾಡಿ ಅವನು ಆ ಧನುಸ್ಸನ್ನು ಎತ್ತಬಲ್ಲನೆಂದು ಭರವಸೆ ಕೊಟ್ಟನು.

ಧನುಸ್ಸನ್ನು ತರುವಂತೆ ಸೇವಕರಿಗೆ ಆಜ್ಞೆಯಾಯಿತು. ರಾಮನು ವಿಶ್ವಾಮಿತ್ರನಿಗೆ ನಮಿಸಿ, ನಿದ್ರಿಸಿದ ಮಹಾಸರ್ಪದಂತಿದ್ದ ಆ ಧನುಸ್ಸನ್ನು ಲೀಲಾಜಾಲವಾಗಿ ಎತ್ತಿದನು. ಒಂದು ತುದಿಯನ್ನು ನೆಲದ ಮೇಲಿರಿಸಿ, ನೆರೆದವರು ನಿಶ್ಚಲ ನೇತ್ರಗಳಿಂದ ನೋಡುತ್ತಿದ್ದಂತೆ ಇನ್ನೊಂದು ತುದಿಯನ್ನು ಬಾಗಿಸಿ ಶಿಂಜಿನಿಯನ್ನು ಬಿಗಿಯುವಷ್ಟರಲ್ಲಿ ಧನುಸ್ಸು ತುಂಡಾಯಿತು. ಆ ಶಬ್ದ ಮೂರು ಲೋಕಗಳನ್ನು ವ್ಯಾಪಿಸಿತು.

ಜನಕ ಮಹಾರಾಜನು ಆನಂದಾಶ್ರುಗಳನ್ನೊರಸುತ್ತ, ತನ್ನ ನಿರ್ಣಯದಂತೆ ಸೀತೆಯನ್ನು ಶ್ರೀ ರಾಮನಿಗೆ ಕೊಡುವುದಾಗಿ ವಾಗ್ದಾನ ಮಾಡಿದನು. ಅಯೋಧ್ಯೆಗೆ ದೂತರನ್ನಟ್ಟಿ, ಪರಿವಾರ ಸಮೇತ ಬರುವಂತೆ ದಶರಥನನ್ನು ಕೇಳಿಕೊಂಡನು.

ಸೀತಾರಾಮರ ವಿವಾಹ ಕಾಲದಲ್ಲಿಯೇ ಊರ್ಮಿಳೆಯನ್ನು ಲಕ್ಷ್ಮಣನಿಗೂ ಮಾಂಡವೀ ಶ್ರುತಕೀರ್ತಿಯರನ್ನು ಭರತ ಶತ್ರುಘ್ನರಿಗೂ ಕೊಟ್ಟು ಮದುವೆ ಮಾಡಿಸಿದನು. ಮಕ್ಕಳಿಗೆ ಅನುರೂಪಕನ್ಯಾವಿವಾಹವಾದುದನ್ನು ನೋಡಿ ದಶರಥನ ಸಂತೋಷಕ್ಕೆ ಪಾರವಿಲ್ಲದಾಯಿತು.

ವಿವಾಹ ವಿಧಿಗಳೆಲ್ಲ ಮುಗಿದುವು. ದಶರಥನು ಮಕ್ಕಳನ್ನೂ ಸೊಸೆಯರನ್ನೂ ಕರೆದುಕೊಂಡು ಅಯೋಧ್ಯೆಗೆ ಹೊರಟನು. ಜನಕನು

ಪುತ್ರಿಯರಿಗೆ ಬಳುವಳಿಯನ್ನೂ ಅಳಿಯಂದಿರಿಗೆ ಉಡುಗೊರೆಗಳನ್ನೂ ಕೊಟ್ಟು ಕಳುಹಿಸಿದನು.

೧೪

ಪರಶುರಾಮ ಪರಾಭವ

ಒಂದೆರಡು ದಿನಗಳ ಪ್ರಯಾಣ ಸುಖಕರವಾಗಿ ಕಳೆಯಿತು. ಮುಂದೆ ಹೋಗುತ್ತಿರುವಾಗ ಒಂದು ದಿನ ಬಿರುಗಾಳಿ ಎದ್ದಿತು. ನಾಲ್ಕು ದಿಕ್ಕುಗಳೂ ಧೂಳಿನಿಂದ ಮಲಿನವಾದುವು. ನರಿಗಳು ಸೂರ್ಯನ ದಿಕ್ಕನ್ನು ನೋಡುತ್ತ ಕೂಗಾಡಿದುವು. ಈ ದುರ್ನಿಮಿತ್ತಗಳನ್ನು ನೋಡಿ ದಶರಥನು ಅದರ ಕಾರಣವನ್ನು ಕೇಳಿದಾಗ ವಸಿಷ್ಠನು ಎಲ್ಲವೂ ಶುಭಾಂತವಾಗುವುದೆಂದು ಹೇಳಿದನು.

ಅಷ್ಟುಹೊತ್ತಿಗೆ ಬ್ರಹ್ಮತೇಜಸ್ಸಿನಿಂದ ಶೋಭಿಸುವ ಜಟಾಧಾರಿಯಾದ ಭಾರ್ಗವ ರಾಮನು ಸೈನ್ಯದ ಎದುರಾಗಿ ಬಂದನು. ಪಿತೃಸಂಬಂಧವಾದ ಯಜ್ಞೋಪವೀತವನ್ನೂ ಮಾತೃಸಂಬಂಧವಾದ ಧನುಸ್ಸನ್ನೂ ಧರಿಸಿದ್ದ ಅವನು ಚಂದ್ರನಿಂದೊಡಗೂಡಿದ ಸೂರ್ಯನಂತೆ, ಸರ್ಪಾವೃತವಾದ ಚಂದನದ್ರುಮದಂತೆ, ಕಾಣುತ್ತಿದ್ದನು.

ತಂದೆಯಾದ ಜಮದಗ್ನಿಯ ನಾಶಕ್ಕೆ ಒಬ್ಬ ದುಷ್ಟ ಕ್ಷತ್ರಿಯನು ಕಾರಣನಾದುದರಿಂದ ಭೂಲೋಕದಲ್ಲಿ ಕ್ಷತ್ರಿಯ ವಂಶವೇ ಇಲ್ಲದಂತೆ ಮಾಡುವುದಾಗಿ ಅವನು ಪ್ರತಿಜ್ಞೆ ತೊಟ್ಟಿದ್ದುದನ್ನು ತಿಳಿದ ದಶರಥನು, ತನ್ನ ಮತ್ತು ಮಕ್ಕಳ ಕ್ಷೇಮದ ಕುರಿತು ಚಿಂತೆಗೊಳಗಾದನು. ಆದರೂ ಪರಶುರಾಮನನ್ನು ಪ್ರಸನ್ನಪಡಿಸಲು ದಶರಥನು ಸಾಷ್ಟಾಂಗವೆರಗಿ ಅರ್ಘ್ಯಪಾದ್ಯಗಳಿಂದ ಸತ್ಕರಿಸಿ ಪೂಜಿಸುವ ಪ್ರಯತ್ನ ಮಾಡಿದನು. 'ನಿನ್ನ ಸತ್ಕಾರ ನನಗೆ ಅವಶ್ಯವಿಲ್ಲ. ಶಿವಧನುಸ್ಸನ್ನು ಮುರಿದ ಆ ಕ್ಷತ್ರಿಯ ಕುಮಾರನೆಲ್ಲಿ?' ಎಂದು ಗರ್ಜಿಸುತ್ತ ಅತ್ತಿತ್ತ ತಿರುಗಾಡಿ ಶ್ರೀರಾಮನ ಮುಂದೆ ಬಂದು ನಿಂತನು.

ದಾಶರಥಿ ರಾಮನು ಧೈರ್ಯಗೆಡದೆ ತನ್ನೆದುರಿನಲ್ಲಿ ಧೃಷ್ಟತನದಿಂದ ನಿಂತುದನ್ನು ನೋಡಿ ಪರಶುರಾಮನು ಕೆಂಡದಂಥ ತನ್ನ ಕಣ್ಣುಗಳಿಂದಲೇ ಅವನನ್ನು ಸುಟ್ಟು ಹಾಕುವಂತೆ ದಿಟ್ಟಿಸಿ ಹೇಳಿದನು: " ನನಗೆ ಕೇಡನ್ನೆಣಿ

ಸಿದ ಕ್ಷತ್ರಿಯ ಕುಲವೇ ನನ್ನ ಶತ್ರು. ಹಲವು ಕ್ಷತ್ರಿಯರನ್ನು ನಾಶ ಮಾಡಿ ಶಾಂತನಾಗಿದ್ದೆ. ಮಲಗಿದ್ದ ಸರ್ಪವನ್ನು ಬೆತ್ತದಿಂದ ಹೊಡೆದೆಬ್ಬಿಸಿದಂತೆ, ನಿನ್ನ ಧನುರ್ಭಂಗವು ನನ್ನನ್ನು ಕೆರಳಿಸಿದೆ. ಈ ವರೆಗೆ ಆ ಧನುಸ್ಸನ್ನು ಅಲುಗಾಡಿಸಿದವರಿರಲಿಲ್ಲ. ನೀನು ಅದನ್ನು ಮುರಿದಿಕ್ಕಿದೆಯೆಂದು ಕೇಳಿ ನನ್ನ ಶೌರ್ಯ ಶಿಖರವು ಕಳಚಿದಂತಾಗಿದೆ. ಇದುತನಕ 'ರಾಮ' ಎಂದು ಉಚ್ಚರಿಸಿದರೆ ಅದು ನನಗೆ ಸಂಬಂಧಿಸುತ್ತಿತ್ತು. ಈಗ ಆ ಹೆಸರಿಗೆ ನೀನು ಅಧಿಕಾರಿಯಾಗುವುದೆಂದರೆ ಅದಕ್ಕಿಂತ ದೊಡ್ಡ ಅಪಮಾನ ಯಾವುದಿದೆ? ಒಂದು ಕಾಲದಲ್ಲಿ ನನ್ನ ತಂದೆಯ ಧೇನುವನ್ನು ಕಾರ್ತವೀರ್ಯನು ಎಳೆದುಕೊಂಡು ಹೋಗಿದ್ದನು. ಅವನ ವಂಶವನ್ನೇ ನಿರ್ಮೂಲವಮಾಡಿ ಅವರ ರಕ್ತದಿಂದಲೇ ಪಿತೃಗಳಿಗೆ ತರ್ಪಣಕೊಟ್ಟು ಸಮಾಧಾನ ತಾಳಿದೆ. ಅದನ್ನು ಭಂಗಪಡಿಸಲು ನೀನು ಬಂದಿರುವೆ. ನಿನ್ನನ್ನು ಜಯಿಸದೆ ಕ್ಷತ್ರಿಯಕುಲಾಂತಕನೆಂಬ ಕೀರ್ತಿ ನನಗೆ ಹೇಗೆ ಉಳಿಯುವುದು? ಅಗ್ನಿಯು ಒಣಹುಲ್ಲಿನ ರಾಶಿಯಲ್ಲಿ ಜ್ವಲಿಸಿದಂತೆ ಸಮುದ್ರದಲ್ಲಿಯೂ ಜ್ವಲಿಸಿದರೆ ಮಾತ್ರ ಅದರ ಮಹಿಮೆ ಶಾಶ್ವತವಾಗಿ ಉಳಿಯುವುದು.

"ಬಲಿಷ್ಠವಾದ ಶಿವಧನುಸ್ಸನ್ನು ಮುರಿದುಹಾಕಿದ್ದೇನೆಂದು ಹೆಮ್ಮೆಪಡಬೇಡ. ಅದರ ಸರ್ವಸಾರವನ್ನು ವಿಷ್ಣು ಈ ಮೊದಲೇ ಹೀರಿದ್ದನು. ಪ್ರವಾಹದಿಂದ ಕೊಚ್ಚಿಹೋದ ನದಿಯ ದಡದಲ್ಲಿರುವ ಮರವನ್ನು ಬೀಳಿಸಲು ಝಂಝಾವಾತ ಬೇಕಾಗಿಲ್ಲ."

"ನನ್ನ ಈ ಬಿಲ್ಲಿಗೆ ನೀನು ಬಾಣ ಜೋಡಿಸಿದರೆ ನೀನು ನನಗೆ ಸಮಬಲನೆಂದು ಸಮ್ಮತಿಸುತ್ತೇನೆ, ಸೋಲನ್ನು ಒಪ್ಪುತ್ತೇನೆ. ನನ್ನ ಪರಶುಧಾರೆಗೆ ಹೆದರುವೆಯಾದರೆ ಅಂಜಲಿಬದ್ಧನಾಗು, ಅಭಯ ನೀಡುವೆ."

ಶ್ರೀರಾಮನು ಮಂದಸ್ಮಿತನಾಗಿ ಪರಶುರಾಮನ ಧನುಸ್ಸನ್ನೆಳೆದುಕೊಂಡು ಮೌರ್ವಿಯನ್ನು ಬಿಗಿದು ಬಾಣಜೋಡಿಸಿದನು. ಭಾರ್ಗವನು ತೇಜೋಹೀನನಾದನು. ಶ್ರೀರಾಮನಿಗೆ ಕಳೆಯೇರುತ್ತ ಬಂತು. ಅವರು ಪೂರ್ಣಿಮೆಯ ಸಾಯಂಕಾಲದ ಸೂರ್ಯಚಂದ್ರರಂತೆ ಕಂಡರು.

ಮುಖಭಂಗ ಹೊಂದಿದ ಪರಶುರಾಮನನ್ನು ನೋಡುತ್ತ ಕೌಸಲ್ಯಾಸುತ ರಾಮನು, "ಈ ಬಾಣವನ್ನು ನಿನಗೇ ಎಸೆಯಬಹುದು. ಆದರೆ

ನೀನು ಪೂಜಾರ್ಹ ಬ್ರಾಹ್ಮಣ. ನಾನು ಧರ್ಮಹೀನನಲ್ಲ, ನಿರ್ದಯನೂ ಅಲ್ಲ. ಆದುದರಿಂದ ಈ ಬಾಣಕ್ಕೆ ಗುರಿಯನ್ನು ತೋರಿಸು. ಧನುಸ್ಸಿಗೇರಿಸಿದ ರಾಮಬಾಣವು ಪುನಃ ಬತ್ತಳಿಕೆಗೆ ಹೋಗದು," ಎಂದನು.

"ಶ್ರೀರಾಮ, ನೀನು ಅಲೌಕಿಕಪುರುಷನೆಂದು ಈಗ ತಿಳಿಯಿತು. ಕ್ಷತ್ರಿಯನೆಂಬ ಹೆಸರನ್ನು ಕೇಳಿದೊಡನೆ ನನ್ನ ಕೋಪಾಗ್ನಿ ಪ್ರಜ್ವಲಿಸಿತು. ನಿನ್ನಿಂದ ನಾನು ಸೋತರೂ ನನಗದು ಸೋಲಲ್ಲ. ಅನೇಕ ಕ್ಷತ್ರಿಯರನ್ನು ನಾಶಮಾಡಿ ವಶಪಡಿಸಿದ ಭೂಭಾಗವಿತ್ತು; ಅದನ್ನು ಸತ್ಪಾತ್ರದಲ್ಲಿ ದಾನಮಾಡಿದ್ದೇನೆ. ಇಲ್ಲಿ ನನ್ನ ಕೆಲಸ ಮುಗಿಯಿತು. ಇನ್ನು ದೇವತಾಸಾನ್ನಿಧ್ಯವಿರುವ ಹಿಮಾಲಯಕ್ಕೆ ತಪಸ್ಸುಮಾಡಲು ಹೋಗುತ್ತೇನೆ. ನನಗೆ ಅಡ್ಡ ಬರಬೇಡ. ಈ ಮೊದಲು ನಾನು ರಚಿಸಿದ ಸ್ವರ್ಗಸೋಪಾನವು ಈ ಬಾಣದ ಲಕ್ಷ್ಯವಾಗಲಿ."

ರಾಮಚಂದ್ರನು ಪೂರ್ವಾಭಿಮುಖವಾಗಿ ಬಾಣಹೊಡೆದು ಆ ಮೇಲೆ ಪರಶುರಾಮನ ಪಾದಗಳಿಗೆ ನಮಿಸಿ ಕ್ಷಮಾಯಾಚನೆ ಮಾಡಿದನು. ಸ್ವಬಲದಿಂದ ಜಯಿಸಿದ ಶತ್ರುವನ್ನು ವಂದಿಸುವುದು ಸೌಜನ್ಯ ಲಕ್ಷಣ; ಕೀರ್ತಿಕಾರಣವೂ ಹೌದು.

'ಮಾತೃಕುಲದಿಂದ ಬಂದಿರುವ ರಾಜಸಗುಣವು ಭಸ್ಮವಾಗಿ ಪಿತೃಕುಲದ ಸತ್ತ್ವಗುಣವೇ ನನ್ನಲ್ಲಿ ಉಳಿದಂತಾಯಿತು. ನೀನು ನನ್ನನ್ನು ನಿಗ್ರಹಿಸಿದರೂ ಅದು ನನಗೆ ಅನುಗ್ರಹ. ತಪಸ್ಸಿಗೆ ಹೋಗಲು ಅನುಜ್ಞೆ ಕೊಡು. ದೇವಕಾರ್ಯವನ್ನು ಮಾಡಲಿರುವ ನಿನಗೆ ಮಂಗಳವಾಗಲಿ," ಎಂದು ಪರಶುರಾಮನು ಹೊರಟೇ ಹೋದನು.

ವಿಜಯಿಯಾದ ರಾಮನು ತಿರುಗಿ ಹುಟ್ಟಿ ಬಂದಂತೆ ತೋರಿತು ದಶರಥನಿಗೆ. ಹೆತ್ತಕರುಳಿನ ಚಿತ್ತ ಹೆತ್ತವರಿಗೇ ಗೊತ್ತು.

೧೫

ಪಟ್ಟಾಭಿಷೇಕ ಪ್ರಯತ್ನ

ಮುದುಕನಾಗುತ್ತ ಆಗುತ್ತ ದಶರಥನು ಬೆಳಗ್ಗಿನ ದೀಪದಂತೆ ಕಾಣತೊಡಗಿದನು. ರಾಜ್ಯದ ಹೊಣೆ ಹೊತ್ತು ಅವನ ಕತ್ತು ಬಗ್ಗಿತ್ತು. ಆ ಹೊರೆಯನ್ನು ಕಿರಿವರೆಯದ ಮಗನ ಹೆಗಲ ಮೇಲೆ ಜಾರಿಸಬೇಕೆಂದು

ಬಯಸಿವನು. ಒಲುವೆಯ ರಾಣಿ ಕೈಕೇಯಿ ಏನೆನ್ನುವಳೋ ಎಂಬ ಶಂಕೆ ಮಾತ್ರ ಬಾಧಿಸುತ್ತಿತ್ತು.

ಹೀಗಿರಲು ಒಂದು ದಿನ ಕೈಕೇಯಿಯ ಅಣ್ಣ ಯುಧಾಜಿತ್ ಬಂದು, 'ಭರತನನ್ನು ಕಳುಹಿಸಿಕೊಡಬೇಕೆಂದು ತಂದೆ ಕೇಕಯರಾಜನ ಅಪೇಕ್ಷೆ. ಕೆಲವು ದಿನ ಮೊಮ್ಮಗನು ತನ್ನೊಡನೆ ಇರಬೇಕೆಂದು ಆಶಿಸಿದ ತಂದೆಯ ಮನೋರಥವನ್ನು ಈಡೇರಿಸಲು ಅವನನ್ನು ಕರೆದೊಯ್ಯಲೇ?' ಎಂದು ದಶರಥನೊಡನೆ ಕೇಳಿದನು. ದಶರಥನು ಸಂತೋಷದಿಂದ ಒಪ್ಪಿದನು. ಭರತನೊಡನೆ ಶತ್ರುಘ್ನ ಹೊರಟನು. ಇಬ್ಬರೂ ಮಾವನ ಜೊತೆಯಲ್ಲಿ ಹೋದರು.

ಭರತನಿಗೇ ಪಟ್ಟಕಟ್ಟಬೇಕೆಂದು ಕೈಕೇಯಿ ಕೇಳಿಕೊಂಡಿದ್ದಳು. ಶ್ರೀರಾಮನಿಗೆ ಸಿಂಹಾಸನ ಕೊಡಬೇಕೆಂದು—ಅವನೇ ಅದಕ್ಕೆ ಅತ್ಯಂತ ಅರ್ಹನೆಂದು–ದಶರಥನ ಅಭಿಮತ. ಪ್ರಕೃತಿಗಳು ಮತ್ತು ಪ್ರಜೆಗಳು ಅಭಿಲಷಿಸುವುದೂ ಅದನ್ನೇ ಎಂದು ತೋರಿಸಿಕೊಟ್ಟರೆ ಕೈಕೇಯಿ ಸುಮ್ಮನಾಗಬಹುದೆಂದು ದಶರಥನು ಪ್ರಜಾಪ್ರತಿನಿಧಿಗಳನ್ನೂ ಪ್ರಕೃತಿಗಳನ್ನೂ ಆಸ್ಥಾನಕ್ಕೆ ಬರಮಾಡಿಕೊಂಡು ಹೀಗೆಂದನು. "ಪ್ರತಿನಿಧಿಗಳೆ, ಅಧಿಕಾರಿಗಳೆ, ನಾನು ವೃದ್ಧನಾದೆ. ಕುಲಪದ್ಧತಿಯಂತೆ ಮಕ್ಕಳಿಗೆ ರಾಜ್ಯವನ್ನೊಪ್ಪಿಸಿ ಮುನಿವೃತ್ತಿ ತಾಳಬೇಕೆಂದು ನನ್ನ ಬಯಕೆ. ನನ್ನ ನಾಲ್ವರು ಮಕ್ಕಳಲ್ಲಿ ನೀವು ಯಾರನ್ನು ಆರಿಸುತ್ತೀರೋ ಅವನಿಗೆ ಪಟ್ಟಾಭಿಷೇಕ ಮಾಡುವುದು ನನ್ನ ಕರ್ತವ್ಯ. ನನ್ನ ಹಿರಿಯರಿಗೆ ಒಬ್ಬೊಬ್ಬನೇ ಮಗನಿದ್ದುದರಿಂದ ಈ ಸಮಸ್ಯೆ ಎದುರಿಸಲಿಲ್ಲ. ನಿಮ್ಮೆಲ್ಲರ ಆಶಯವೇನು?"

"ಮಹಾರಾಜ, ನಿನ್ನ ಸುಗುಣಕ್ಕೆ ಸರಿಯಾದ ಮಾತಿದು. ರಾಮಚಂದ್ರನು ಪ್ರಾಯದಲ್ಲಿ ಹಿರಿಯವನು ಮಾತ್ರವಲ್ಲದೆ ಗುಣಶೀಲಗಳಲ್ಲಿ ಉತ್ತಮನು. ಹಿರಿಯವನು ಸಿಂಹಾಸನದ ಅಧಿಕಾರಿ ಎಂಬುದು ರಾಜಧರ್ಮ. ಶ್ರೀರಾಮನೇ ಸಿಂಹಾಸನಾರೋಹಣ ಮಾಡಬೇಕು." ಎಲ್ಲರೂ ಏಕಕಂಠದಿಂದ ಹೇಳಿದ ಈ ಮಾತುಗಳಿಂದ ದಶರಥನು ತುಷ್ಟನಾದನು.

ಪಟ್ಟಾಭಿಷೇಕಕ್ಕೆ ಸಿದ್ಧತೆಗಳಾದುವು. ವಸಿಷ್ಠ, ಸುಮಂತ್ರ ಮೊದಲಾಗಿ ಎಲ್ಲರೂ ಸಲಕರಣೆಗಳನ್ನು ಒದಗಿಸ ತೊಡಗಿದರು. ಸರ್ವತ್ರ ಸಂಭ್ರಮ. ಅಯೋಧ್ಯಾ ನಗರವೇ ಆನಂದ ಸಾಗರದಲ್ಲಿ ಮುಳುಗಿತು.

ಕೈಕೇಯಿಯ ಕಿವಿಗೆ ಈ ವಾರ್ತೆ ಬಿತ್ತು. ಅವಳು ಅಂತಃಪುರದಲ್ಲಿ ರಾಜನನ್ನು ನಿರೀಕ್ಷಿಸುತ್ತಿದ್ದಳು. ದಶರಥನು ಸಂತಸಿಸುತ್ತ ಬಂದನು. ಕೈಕೇಯಿಯ ರೀತಿ ವಿಚಿತ್ರವಾಗಿತ್ತು. ರಾಜನಿಗೆ ಆದರದ ಸ್ವಾಗತವಿಲ್ಲ. ಕೋಪಗೊಂಡ ಸಿಂಹಿಣಿಯಂತಿರುವ ಅವಳನ್ನು ನೋಡಿ ಅವನು ಹೆದರಿದನು. ಅವಳ ಮಾತು ಮತ್ತಷ್ಟು ಕಠಿಣವಾಗಿತ್ತು: "ನಾನು ಹೇಳಿದಂತೆ ಭರತನಿಗೆ ಪಟ್ಟ ಕೊಡದೆ ರಾಮನಿಗೆ ಕೊಡಲು ನಿಶ್ಚಯಮಾಡಿರುವೆಯಷ್ಟೆ! ಒಂದು ಸಲ ನನ್ನ ಚಾತುರ್ಯಕ್ಕೆ ಮೆಚ್ಚಿ ನೀನು ಎರಡು ವರಗಳನ್ನು ಕೊಟ್ಟಾಗ, "ಈಗ ಅವು ನಿನ್ನಲ್ಲಿಯೇ ಇರಲಿ; ಬೇಕಾದಾಗ ಕೇಳುವೆನು," ಎಂದುದು ನೆನಪಿದೆಯಲ್ಲವೆ? ಈಗ ಆ ಎರಡು ವರಗಳನ್ನು ಕೊಡು. ಭರತನು ಸಿಂಹಾಸನಾರೂಢನಾಗಬೇಕು. ರಾಮನು ಹದಿನಾಲ್ಕು ವರ್ಷ ಕಾಡಿನಲ್ಲಿ ವಾಸಮಾಡಬೇಕು."

ಸಿಡಿಲೆರಗಿ ಮರವು ಕೆಳಗುರುಳುವಂತೆ ದಶರಥನು ಬಿದ್ದನು. ಸ್ವಲ್ಪ ಹೊತ್ತು ಕಳೆದ ಬಳಿಕ ಚೇತರಿಸಿಕೊಂಡೊಡನೆ ಅವಳನ್ನು ಅಂಗಲಾಚಿ ಬೇಡಿಕೊಂಡನು. ಆದರೂ ಅವನ ಪ್ರಾರ್ಥನೆ ನಿಷ್ಫಲವಾಯಿತು. ಅವಳು ಹಿಡಿದ ಹಿಡಿತವನ್ನು ಬಿಡಲಿಲ್ಲ.

ಈ ವಾರ್ತೆ ಹರಡಿತು. ರಾಮನು ಕೈಕೇಯಿಯೆಡೆಗೆ ಬಂದು ತಂದೆಯನ್ನು ನೋಡಿ ವ್ಯಥೆಪಟ್ಟನು. "ಅಮ್ಮ, ಏನಾಯಿತು? ತಂದೆ ಹೀಗೆ ಕ್ಲೇಶಪಡಲು ಕಾರಣವೇನು? ನನ್ನಿಂದೇನಾಗಬೇಕು?"

"ರಾಮ, ತಂದೆಯ ವಾಗ್ದಾನವನ್ನು ಈಡೇರಿಸಲು ನೀನೇ ಸಮರ್ಥ. ನನಗೆ ಅವನು ಎರಡು ವರಗಳನ್ನು ಕೊಟ್ಟಿದ್ದನು. ಒಂದರಿಂದ ಭರತನ ಪಟ್ಟಾಭಿಷೇಕವನ್ನೂ ಇನ್ನೊಂದರಿಂದ ಹದಿನಾಲ್ಕು ವರ್ಷಗಳ ವರೆಗೆ ನಿನ್ನ ವನವಾಸವನ್ನೂ ಕೇಳಿರುವೆನು. ಅವನು ಅದನ್ನು ನಿನಗೆ ಹೇಳಲಾರದೆ ವ್ಯಥೆಪಡುತ್ತಿದ್ದಾನೆ."

ಇದನ್ನು ಕೇಳಿ ರಾಮನಿಗೆ ಸಂತೋಷವೇ ಆಯಿತು. ಕೋಪವಾಗಲಿ ದುಃಖವಾಗಲಿ ಅವನ ಮನಸ್ಸಿನಲ್ಲಿ ಸುಳಿಯಲಿಲ್ಲ.

"ತಾಯಿ, ಬಹಳ ಉಪಕಾರವಾಯಿತು. ರಾಜ್ಯಭಾರದ ಹೊಣೆಗಾರಿಕೆಗಿಂತ ಕಾಡಿನಲ್ಲಿ ಆತ್ಮರಕ್ಷಣೆ ಮಾತ್ರ ಮಾಡಿಕೊಂಡು ಜೀವಿಸುವುದು ನನಗೆ ಹಿತಕರ. ಇದೋ ಹೊರಟೆ."

ಕೈಕೇಯಿ ನಾರುಬಟ್ಟೆಯನ್ನು ತರಿಸಿಟ್ಟಿದ್ದಳು. ಅದನ್ನು ರಾಮನ ಕೈಗೆ ಕೊಟ್ಟಳು. ಅವನು ಅದನ್ನು ಸ್ವೀಕರಿಸಿ ತನ್ನ ವಸ್ತ್ರಾಭರಣಗಳನ್ನು ಅವಳ ವಶಕ್ಕೆ ಕೊಟ್ಟು ಅಲ್ಲಿಂದ ಕೌಸಲ್ಯೆಯ ಆವಾಸಕ್ಕೆ ಹೊರಟನು. ಮಗನ ಶ್ರೇಯೋಭಿವೃದ್ಧಿಗಾಗಿ ದೇವತಾರ್ಚನೆ ಮಾಡುತ್ತಿದ್ದ ಆಕೆ ಅವನ ಮುನಿವೇಷವನ್ನು ಕಂಡು ಕಂಪಿಸಿದಳು.

"ಅಮ್ಮ, ವ್ಯಥೆಪಡಬೇಡ. ತಂದೆಯ ಅಭಿಪ್ರಾಯಕ್ಕಾಗಲಿ ಮಾತಿಗಾಗಲಿ ವಿರೋಧವಾಗಿ ವರ್ತಿಸುವುದು ಮಗನ ಧರ್ಮವಲ್ಲ. ನಾವೆಲ್ಲ ರಾಜನ ಕೀರ್ತಿಗೆ ಕಳಂಕ ಬಾರದಂತೆ ಎಚ್ಚರದಿಂದಿರಬೇಕು. ಸುಖ ದುಃಖಗಳು ಮುಖ್ಯವಲ್ಲ. ನಾನು ಹದಿನಾಲ್ಕು ವರ್ಷ ಕಾಡಿನಲ್ಲಿ ಸುಖವಾಗಿ ಕಳೆದು ಬರುತ್ತೇನೆ. ವೃದ್ಧನಾದ ತಂದೆಯನ್ನು ಉಪಚರಿಸುತ್ತ ನೀನು ಹೇಗಾದರೂ ಸಮಯ ತಳ್ಳುತ್ತಿರಬೇಕು. ಭರತನು ರಾಜನಾದರೇನು? ಅವನು ಪರಕೀಯನಲ್ಲ. ಕೋಪತಾಪಗಳಿಗೆ ಒಳಪಡದೆ ತಂದೆಯ ಶುಶ್ರೂಷೆ ಮಾಡುತ್ತಿರು. ಎಲ್ಲವೂ ಮಂಗಳಕರವಾಗುವುದು."

ಹೀಗೆಂದು ತಾಯಿಗೆ ಸಾಷ್ಟಾಂಗವೆರಗಿದ ರಾಮನಿಗೆ ತಾಯಿಯ ಕಣ್ಣೀರೇ ಆಶೀರ್ವಾದವಾಯಿತು. ಆಕೆಯ ಮುಖದಿಂದ ಒಂದು ಮಾತೂ ಹೊರಡಲಿಲ್ಲ.

೧೬

ವನಗಮನ

ಲಕ್ಷ್ಮಣನು ರಾಮನ ಜೊತೆಯಲ್ಲಿ ಅರಣ್ಯಕ್ಕೆ ಹೋಗಲು ನಿರ್ಧರಿಸಿ ಬಂದನು. ರಾಮನು ಬಹು ವಿಧದಿಂದ ಹೇಳಿದರೂ ಅವನನ್ನು ಅನುಸರಿಸದೆ ನಿಲ್ಲುವುದು ಲಕ್ಷ್ಮಣನಿಗೆ ಒಪ್ಪಿಗೆಯಾಗಲಿಲ್ಲ.

ಸೀತೆಯನ್ನು ಸಮಾಧಾನ ಪಡಿಸಿ ಹೊರಡಬೇಕೆಂದು ರಾಮನು ಅಂತಃಪುರಕ್ಕೆ ಹೋದನು. ಅವನನ್ನು ನೋಡಿ ಆಕೆ ಆನಂದ ಪಟ್ಟಳು; ವಿಚಿತ್ರ ವೇಷ ಭೂಷಣಗಳನ್ನು ನೋಡಿ ಆಶ್ಚರ್ಯವೂ ಆಯಿತು.

"ಜಾನಕಿ, ಆಶ್ಚರ್ಯ ಪಡಬೇಡ. ತಂದೆಯ ಅನುಜ್ಞೆಯಂತೆ ಹದಿನಾಲ್ಕು ವರ್ಷ ವನವಾಸಿಯಾಗುತ್ತೇನೆ. ನೀನು ಗುರು ಹಿರಿಯರ ಸೇವೆ

ಮಾಡುತ್ತ ಇರು. ನನ್ನ ವೃದ್ಧ ಪಿತನ ಶುಶ್ರೂಷೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿಕೊ. ವನವಾಸಾವಧಿ ಮುಗಿದೊಡನೆ ಹಿಂದಿರುಗುತ್ತೇನೆ."

"ಕಾಂತ, ನೀನು ಹೇಳುವುದು ನಿನ್ನ ದೃಷ್ಟಿಯಿಂದ ನ್ಯಾಯವಾಗಿದ್ದರೂ ನಾನು ಸರಿಯೆನ್ನಲಾರೆ. ಚಂದ್ರನು ಹೋದಲ್ಲಿ ಚಂದ್ರಿಕೆ ಬರುವುದಲ್ಲದೆ ಹಿಂದುಳಿಯದು. ನೀನು ಹೋದೆಡೆಗೆ ನಾನೂ ಬರುತ್ತೇನೆ. ಸುಖ ದುಃಖಗಳಲ್ಲಿ ಸಮಭಾಗಿನಿಯಾಗುವುದರಿಂದಲೇ ಪತ್ನಿ ಅರ್ಧಾಂಗಿಯೆನಿಸುತ್ತಾಳೆ. ನಾನು ನಿನ್ನೊಡನೆ ಬರಲು ಒಪ್ಪಿಗೆ ಕೊಡು. ಅರಣ್ಯವು ಕ್ಲೇಶಕರವೆಂದು ನಾನು ಇಲ್ಲಿ ಉಳಿಯಲಾರೆ. ನಿನ್ನ ಸನ್ನಿಧಿಯಲ್ಲಿ ನನಗೆ ಕ್ಲೇಶವೆಂದರೇನು? ಸತಿಗೆ ಪತಿಯೇ ಪರದೈವವಲ್ಲವೆ? ಪತಿಯನ್ನು ಹಿಂಬಾಲಿಸುವ ಪತ್ನಿಯನ್ನು ಯಾರು ತಡೆಯುವರು?"

ಹೀಗೆಂದು ಸೀತೆ ತನ್ನ ವಸ್ತ್ರಾಭರಣಗಳನ್ನು ತೆಗೆದು ಸೇವಕರಿಗೆ ದಾನಮಾಡಿದಳು. ನಾರು ಬಟ್ಟೆಯನ್ನುಟ್ಟು ಹೊರಟು ನಿಂತಳು. ರಾಮನು ಮರುಮಾತಾಡದೆ, ಲಕ್ಷ್ಮಣನ ಮಾತೆಯಾದ ಸುಮಿತ್ರೆಯ ಅನುಜ್ಞೆ ಪಡೆಯಲು ಹೋದನು. ಸೀತೆಯೂ ಲಕ್ಷ್ಮಣನೂ ಹಿಂದೆಯೇ ಹೋದರು. ಎಲ್ಲ ಸುದ್ದಿಯನ್ನೂ ತಿಳಿದಿದ್ದ ಸತ್ತ್ವಶೀಲೆಯಾದ ಸುಮಿತ್ರೆ ದುಃಖೋದ್ಗಾರ ಮಾಡಲಿಲ್ಲ. ನಮಸ್ಕರಿಸಿದ ಮೂವರನ್ನೂ ಹಿಡಿದೆತ್ತಿದಳು.

"ಮಗ, ಲಕ್ಷ್ಮಣ, ಅಯೋಧ್ಯೆ ಕಾಡೆಂದೂ ಸೀತೆ ನಾನೆಂದೂ ತಿಳಿದು ಅಣ್ಣ ರಾಮನಲ್ಲಿ ಪಿತೃಭಾವವನ್ನಿಟ್ಟು ಅವನೊಡನೆ ಹೋಗು. ನಿಮ್ಮ ದಾರಿ ಶುಭವಾಗಲಿ."

ತಂದೆಯ ಅಪ್ಪಣೆಯನ್ನು ಪಡೆಯಬೇಕೆಂದು ಮೂವರೂ ದಶರಥನಲ್ಲಿಗೆ ಹೋದರು. ಬಾಗಿಲಿನಲ್ಲಿ ಸುಮಂತ್ರನು ಖಿನ್ನವದನನಾಗಿ ನಿಂತಿದ್ದನು. ಮೂವರೂ ಒಳಹೊಕ್ಕು ತಂದೆಯ ಪಾದಗಳಿಗೆ ವಂದಿಸಿದರು. ರಾಮನು, "ಅಪ್ಪ, ನಿನ್ನ ಅಪ್ಪಣೆಯಂತೆ ವನಕ್ಕೆ ಹೋಗಲು ಸಿದ್ಧನಾಗಿದ್ದೇನೆ. ಲಕ್ಷ್ಮಣನೂ ಜಾನಕಿಯೂ ಹಿಂಬಾಲಿಸುವುದಾಗಿ ಹಟಹಿಡಿದಿರುವರು; ಬೇಡವೆಂದು ಎಷ್ಟು ಹೇಳಿದರೂ ಕೇಳುವುದಿಲ್ಲ. ಅವರನ್ನು ಕರೆದು ಕೊಂಡು ಹೋಗಲು ಅನುಮತಿ ಬೇಡುತ್ತೇನೆ," ಎಂದನು.

"ಮಗು, ರಾಮಚಂದ್ರ ಕೈಕೇಯಿಗೆ ಮರುಳಾಗಿ ವಾಗ್ದಾನ

ಮಾಡಿದೆ. ಅವಳ ಕೇಳಿಕೆ ಹೀಗೆ ಘೋರ ರೂಪದ್ದೆಂದು ಎಣಿಸಿರಲಿಲ್ಲ. ನೀನು ಆ ಮಾತುಗಳನ್ನು ಗಣಿಸದೆ ರಾಜ್ಯಾಧಿಪತ್ಯ ಸ್ವೀಕರಿಸು."

"ಅಪ್ಪ, ಇದುವರೆಗೆ ನೀನು ಧರ್ಮಿಷ್ಠನೆಂದೂ ಕೊಟ್ಟ ಮಾತಿಗೆ ತಪ್ಪದವನೆಂದೂ ಕೀರ್ತಿ ಪಡೆದು, ನನ್ನ ಮೇಲಿನ ವ್ಯಾಮೋಹದಿಂದ ಈಗ ಆ ಕೀರ್ತಿಗೆ ಕಲಂಕ ಹಚ್ಚುವುದು ಸರಿಯಲ್ಲ. ಹದಿನಾಲ್ಕು ವರ್ಷ ಗಳನ್ನು ಹದಿನಾಲ್ಕು ದಿನಗಳಂತೆ ಸುಖದಿಂದ ಕಳೆದು ಆ ಮೇಲೆ ಅಯೋಧ್ಯೆಗೆ ಬಂದು ನಿನ್ನ ಪಾದಸೇವೆಯನ್ನು ಕೈಕೊಳ್ಳುವೆನು. ನಮ್ಮನ್ನು ಹರಸಿ ಕಳುಹು."

ಇದಕ್ಕೆ ಪ್ರತಿಯಾಗಿ ದಶರಥನು ಏನೂ ಹೇಳಲಾರದೆ ಕಣ್ಣೀರು ಸುರಿಸುತ್ತ ಕುಳಿತನು. ಹೆಚ್ಚು ಹೊತ್ತು ಅಲ್ಲಿ ನಿಲ್ಲುವುದು ಹಿತವಾಗದೆಂದು ರಾಮ ಸೀತಾ ಲಕ್ಷ್ಮಣರು ಹೊರಟರು. ಶ್ರೀ ರಾಮಚಂದ್ರನು ಪಟ್ಟಾಭಿಷೇಕಕ್ಕಾಗಿ ರಾಜವೈಭವದಿಂದ ಮೆರವಣಿಗೆಯಲ್ಲಿ ಹೋಗಬೇಕಾದ ಸಮಯದಲ್ಲಿ ಜಟಾಧಾರಿಯಾಗಿ ನಾರುಡೆಯುಟ್ಟು ಹೆಂಡತಿ ಮತ್ತು ತಮ್ಮನಿಂದ ಒಡಗೂಡಿ ಅರಣ್ಯ ಮಾರ್ಗವನ್ನು ಹಿಡಿದನು. ಮನುಷ್ಯ ಒಂದೆಣಿಸಿದರೆ ವಿಧಿ ಬೇರೆಯೇ ಎಣಿಸುವುದು!

೧೭

ಪಾದುಕಾಭಿಷೇಕ

ಈ ರೀತಿಯಿಂದ ಪಿತೃವಾಕ್ಯ ಪರಿಪಾಲನೆಗೋಸ್ಕರ ಸಿಂಹಾಸನ ತ್ಯಾಗಮಾಡಿ ಸಂತೋಷದಿಂದ ದಂಡಕಾರಣ್ಯ ಪ್ರವೇಶ ಮಾಡಿದ ರಾಮನ ವಿಯೋಗದಿಂದ ದಶರಥನು ವ್ಯಥೆಪಡುತ್ತಾ, 'ಹಾ! ರಾಮ, ಹಾ! ರಾಮ,' ಎಂದು ಪ್ರಲಪಿಸುತ್ತ ಅಂತ್ಯಕಾಲವನ್ನು ಎದುರುನೋಡುತ್ತಿದ್ದನು. ತನ್ನ ಯೌವನದಲ್ಲಿ ಬೇಟೆಗೆ ಹೋದಾಗ ಒದಗಿದ ಮುನಿಕುಮರನ ನಾಶವನ್ನೂ ವೃದ್ಧ ಮಾತಾಪಿತೃಗಳ ಶಾಪವನ್ನೂ ಗ್ರಹಿಸಿದಾಗ ತನ್ನ ಕೊನೆಗಾಲ ನಿಜವಾಗಿ ಬಂದುದು ಮನವರಿಕೆಯಾಯಿತು. 'ರಾಮ! ಹಾ ರಾಮ!' ಎನ್ನುತ್ತ ಅವನು ಪಂಚತ್ವವನ್ನು ಪಡೆದನು.

ಭರತನನ್ನು ಕರೆತರುವಂತೆ ಸುಮಂತ್ರನು ರಾಜದೂತರನ್ನಟ್ಟಿದನು. ಭರತನು ಒಡನೆ ಅಯೋಧ್ಯೆಗೆ ಬಂದು ನಡೆದ ಸಂಗತಿಗಳನ್ನು ತಿಳಿದು

ಮಾತೃವು ಬನ್ನಾಗಲಿ ರಾಜ್ಯವು ಬನ್ನಾಗಲಿ ನೋಡದೆ ತಂದೆಯ ಉತ್ತ ಕ್ರಿಯೆಗಳನ್ನು ಮುಗಿಸಿದನು. ವಸಿಷ್ಠಾದಿ ಗುರುಜನರನ್ನೂ ಸುಮಂತ್ರಾ ಮಂತ್ರಿವರ್ಗದವರನ್ನೂ ಕರೆದುಕೊಂಡು ಶ್ರೀ ರಾಮನ ದರ್ಶನಕ್ಕೋಸ್ಕ ದಂಡಕಾರಣ್ಯಕ್ಕೆ ಹೊರಟನು.

ಚಿತ್ರಕೂಟ ಪರ್ವತದಲ್ಲಿ ಅಣ್ಣ ರಾಮನನ್ನು ಕಂಡು ಸಾಷ್ಟಾಂಗವ ರಗಿ, ಕಣ್ಣೀರು ಹಾಕುತ್ತ ತಂದೆಯ ಮರಣವಾರ್ತೆಯನ್ನರುಹಿದನು. ಶ್ರೀ ರಾಮನು ದುಃಖಿಸುತ್ತ ವನ್ಯವಸ್ತುಗಳಿಂದ ಪಿತೃಕ್ರಿಯೆಯನ್ನು ಮಾಡಿದನು.

ಅನಂತರ ಭರತನು, "ಅಣ್ಣಾ, ನೀನು ಅಯೋಧ್ಯೆಗೆ ಹಿಂದಿರುಗಬೇಕು. ತಾಯಿ ಕೈಕೇಯಿಯು ಈಗ ಪಶ್ಚಾತ್ತಾಪಪಡುತ್ತಿದ್ದಾಳೆ. ನಾನು ಸರ್ವಥಾ ರಾಜ್ಯಭಾರವನ್ನು ವಹಿಸಲಾರೆ. ನೀನು ಸಿಂಹಾಸನ ಸ್ವೀಕಾರಮಾಡಬೇಕು," ಎಂದು ಪ್ರಾರ್ಥಿಸಿದನು.

"ತಮ್ಮ, ನೀನು ಭ್ರಾತೃಪ್ರೇಮಕ್ಕೂ ಕುಲಧರ್ಮಕ್ಕೂ ಸರಿಯಾದುದನ್ನೇ ಹೇಳಿದೆ. ಆದರೆ ನಮ್ಮ ತಂದೆಯ ಮಾತನ್ನು ನಡೆಸುವುದು ನಮ್ಮ ಕರ್ತವ್ಯ. ತಿಳಿದೋ ತಿಳಿಯದೆಯೋ ತಾಯಿಗೆ ಮಾತುಕೊಟ್ಟ ಮೇಲೆ ಅದನ್ನು ಹಿಂದೆಗೆದುಕೊಳ್ಳುವುದು ಸರಿಯಲ್ಲ. ಸ್ವರ್ಗವಾಸಿಯಾದ ತಂದೆಯ ಹೆಸರಿಗೆ ಕಳಂಕ ತಟ್ಟದಂತೆ ನಾವಿಬ್ಬರೂ ವರ್ತಿಸಬೇಕು. ನೀನು ಹಟಮಾಡಬೇಡ, ಅಯೋಧ್ಯೆಗೆ ಹೋಗಿ ಶತ್ರುಘ್ನನ ನೆರವಿನಿಂದ ಅರಸುತನ-ನಡೆಸು."

ಅಣ್ಣ, ನೀನು ಸರ್ವಥಾ ಹಿಂದೆ ಬರುವುದಿಲ್ಲವಾದರೆ ನಿನ್ನ ಪಾದುಕೆಗಳನ್ನಾದರೂ ದಯಪಾಲಿಸು. ಅವುಗಳನ್ನು ಸಿಂಹಾಸನದಲ್ಲಿಟ್ಟು ಅಭಿಷೇಕಮಾಡುವೆನು. ನಿನ್ನ ಪ್ರತಿನಿಧಿಯಾಗಿ ನೀನು ಬರುವ ವರೆಗೆ ರಾಜಕಾರ್ಯವನ್ನು ನಿರ್ವಹಿಸುವೆನು. ನೀನಿಲ್ಲದ ಅಯೋಧ್ಯೆಯನ್ನು ನಾನು ಪ್ರವೇಶಿಸಲಾರೆ. ರಾಜಧಾನಿಗೆ ಬಹುದೂರದಲ್ಲಿರುವ ನಂದಿಗ್ರಾಮದಲ್ಲಿದ್ದುಕೊಂಡು ನಿನ್ನ ದಾರಿ ಕಾಯುತ್ತಿರುವೆನು. ನಿನ್ನಂತೆ ಮುನಿವೃತ್ತಿಯಿಂದಿರುವೆನು. ಹದಿನಾಲ್ಕು ವರ್ಷ ಮುಗಿಯುತ್ತಲೇ ನೀನು ಬಾರದಿದ್ದರೆ ಅಗ್ನಿಪ್ರವೇಶಮಾಡುವೆನು."

ಭರತನ ಪ್ರತಿಜ್ಞೆಗೆ ರಾಮನ ಸಮ್ಮತಿ ದೊರೆಯಿತು. ಭರತನು ರಾಮ

ಪಾದುಕೆಗಳನ್ನು ತಲೆಯಲ್ಲಿ ಹೊತ್ತುತಂದು ಸಿಂಹಾಸನದಲ್ಲಿರಿಸಿ ಪಟ್ಟಾಭಿಷೇಕಮಾಡಿ, ನಂದಿಗ್ರಾಮದಲ್ಲಿ ಜಟಾವಲ್ಕಲಧಾರಿಯಾಗಿ ರಾಜ್ಯವನ್ನು ಶ್ರೀ ರಾಮನ ನ್ಯಾಸವೆಂದು ಗ್ರಹಿಸಿ ಕಾರ್ಯೋನ್ಮುಖನಾದನು.

೧೮

ಸೀತಾಪಹರಣ

ಇತ್ತ ಸೀತಾಲಕ್ಷ್ಮಣರಿಂದೊಡಗೂಡಿದ ರಾಮಚಂದ್ರನು ವನಗಳಲ್ಲಿ ಸಂಚರಿಸುತ್ತ ಮುನಿವೃತ್ತಿಯಿಂದ ದಿನಕಳೆದನು. ಚಿತ್ರಕೂಟವು ಅಯೋಧ್ಯೆಗೆ ಅನತಿದೂರದಲ್ಲಿರುವುದರಿಂದ ಭರತನು ಪುನಃ ಬಂದರೂ ಬರಬಹುದೆಂಬ ಆಶಂಕೆಯಿಂದ, ಇನ್ನೂ ದಕ್ಷಿಣಕ್ಕೆ ಹೋಗುವುದು ಶ್ರೇಯಸ್ಕರವೆಂದು ಆಲೋಚಿಸಿದನು.

ಅಲ್ಲಲ್ಲಿ ಋಷ್ಯಾಶ್ರಮಗಳಲ್ಲಿ ತಂಗುತ್ತ ಪ್ರಯಾಣ ಮುಂದೆಸಾಗಿತು. ಅತ್ರಿಮಹರ್ಷಿಯ ಆಶ್ರಮದಲ್ಲಿ ಒಂದು ರಾತ್ರಿಯನ್ನು ಕಳೆದಾಗ ಸತಿ ಅನಸೂಯೆ ಸೀತೆಗೆ ಪತಿವ್ರತಾಧರ್ಮವನ್ನು ಹೇಳಿಕೊಟ್ಟು ವಿಶೇಷವಾದ ಅಲಂಕಾರದ ವಸ್ತ್ರವಸ್ತುಗಳನ್ನು ತೊಡಿಸಿದಳು. ಸೂರ್ಯಕಿರಣಗಳು ಕೂಡ ಪ್ರವೇಶಿಸದಷ್ಟು ನಿಬಿಡವಾದ ಅರಣ್ಯದಲ್ಲಿ ಹೋಗುತ್ತಿದ್ದಾಗ ವಿರಾಧನೆಂಬ ರಾಕ್ಷಸನು ಅವರನ್ನು ಆಕ್ರಮಿಸಿ ರಾಮಲಕ್ಷ್ಮಣರ ಮಧ್ಯದಲ್ಲಿದ್ದ ಸೀತೆಯನ್ನು ಅಪಹರಿಸುವ ಪ್ರಯತ್ನ ಮಾಡಿದನು. ರಾಮಲಕ್ಷ್ಮಣರು ಒಂದೊಂದು ಹೊಡೆತದಿಂದ ವಿರಾಧನನ್ನು ವಧಿಸಿ ನೆಲದಲ್ಲಿ ಹೂಳಿಟ್ಟರು.

ಅಲ್ಲಿಂದ ಅಗಸ್ತ್ಯನ ಆಶ್ರಮಕ್ಕೆ ಹೋದರು. ಅವನ ಆತಿಥ್ಯದಲ್ಲಿ ಪಂಚವಟಿಯಲ್ಲಿ ಸ್ವಲ್ಪ ಕಾಲವನ್ನು ಕಳೆಯಬೇಕೆಂದು ಸೂಚನೆ ಬಂದುದರಿಂದ ಅದಕ್ಕೆ ಒಪ್ಪಿದರು. ಗೋದಾವರೀನದಿ ಶಾಂತವಾಗಿ ಹರಿಯುವ ಆ ಬಯಲು ಸೀಮೆಯಲ್ಲಿ ಹಣ್ಣುಹಂಪಲು ಮತ್ತು ಕಂದಮೂಲಗಳು ಸಮೃದ್ಧವಾದ ರಮ್ಯಪ್ರದೇಶದಲ್ಲಿ ಪರ್ಣಕುಟಿಯನ್ನು ಕಟ್ಟಿ ಸಂತೋಷದಿಂದ ವಾಸಮಾಡಿಕೊಂಡಿದ್ದರು. ಪಂಚವಟಿಯ ದಕ್ಷಿಣಕ್ಕೆ ಜನಸ್ಥಾನವೆಂಬ ಪ್ರದೇಶದಲ್ಲಿ ಲಂಕಾಪತಿ ರಾವಣನು ಉತ್ತರ ದಿಕ್ಕಿನ ಭದ್ರತೆಗಾಗಿ ಖರದೂಷಣರೆಂಬ ರಾಕ್ಷಸರನ್ನೂ ಬಲಿಷ್ಠ ಸೈನ್ಯವನ್ನೂ ಇಟ್ಟಿದ್ದನು. ತನ್ನ ತಂಗಿ ಶೂರ್ಪನಖಿಯನ್ನು ಅಲ್ಲಿಯೇ ಇರುವಂತೆ ಹೇಳಿದ್ದನು. ಅವಳ

ಸ್ವತಂತ್ರಳಾಗಿ ವಿಹರಿಸುತ್ತ ಪಂಚವಟಿಯ ವರೆಗೂ ಬರುತ್ತಿದ್ದಳು. ಒಂದು ದಿನ ರಾಮಾದಿಗಳನ್ನು ನೋಡಿ ಆಶ್ಚರ್ಯಪಟ್ಟಳು. ರಾಮನ ಸುಂದರಾಕಾರವನ್ನು ಕಂಡು ಮೋಹಗೊಂಡು ತನ್ನನ್ನು ಮದುವೆಯಾಗುವಂತೆ ಕೇಳಿಕೊಂಡಳು. ರಾಮನು ಅವಳನ್ನು ತೊಲಗಿಸುವ ಉದ್ದೇಶದಿಂದ ಲಕ್ಷ್ಮಣನೆಡೆಗೆ ಕಳುಹಿದನು. ಲಕ್ಷ್ಮಣನು ರಾಮನ ಒಪ್ಪಿಗೆಯನ್ನು ಪಡೆಯಲು ಪುನಃ ಅವನಲ್ಲಿಗೇ ಕಳುಹಿಸಿದನು. ಇದರಿಂದ ಬೇಸತ್ತ ಶೂರ್ಪನಖಿ ಸೀತೆಯನ್ನು ಕೊಂದೊಯ್ಯುವುದೆಂದು ನಿಶ್ಚಯಿಸಿದಳು. ಇದನ್ನರಿತ ರಾಮನು ಆಕೆಗೆ ತಕ್ಕ ಶಾಸ್ತಿ ಮಾಡುವಂತೆ ಲಕ್ಷ್ಮಣನಿಗೆ ಹೇಳಿದನು. ಲಕ್ಷ್ಮಣನು ಖಡ್ಗದಿಂದ ಆಕೆಯ ಕಿವಿಮೂಗುಗಳನ್ನು ಕತ್ತರಿಸಿದನು. ಆಕೆ ಆರ್ಭಟಿಸುತ್ತ ಜನಸ್ಥಾನಕ್ಕೆ ಧಾವಿಸಿ ತನಗೊದಗಿದ ಮುಖಭಂಗವನ್ನು ಖರದೂಷಣರಿಗೆ ತಿಳಿಸಿದಳು. ಅವರು ಸೈನ್ಯ ಸಮೇತ ರಾಮನಿದ್ದಲ್ಲಿಗೆ ಬಂದರು. ರಾಮನು ಸೀತೆಯ ರಕ್ಷಣೆಯನ್ನು ಲಕ್ಷ್ಮಣನಿಗೊಪ್ಪಿಸಿ ತಾನು ಧನುರ್ಧಾರಿಯಾಗಿ ರಾಕ್ಷಸರನ್ನು ಇದಿರಿಸಿದನು. ರಾಕ್ಷಸರೆಲ್ಲ ರಾಮನೊಬ್ಬನ ಕೈಯಿಂದಲೇ ಸಂಹೃತರಾದರು. ಶೂರ್ಪನಖಿ ಉಪಾಯಾಂತರ ಕಾಣದೆ ಲಂಕೆಗೆ ಓಡಿದಳು. ನಡೆದ ಸಂಗತಿಯನ್ನು ಬಣ್ಣ ಬೆರಸಿ ಅಣ್ಣನಿಗೆ ತಿಳಿಸಿದಳು. ದಶಕಂಠನು ಈ ವಾರ್ತೆಯನ್ನು ಕೇಳಿ ಇದಕ್ಕೆ ಪ್ರತೀಕಾರ ಸೀತಾಪಹಾರವೆಂದು ಆಲೋಚಿಸಿದನು. ತನ್ನ ಆಪ್ತನಾದ ಮಾರೀಚನಿಗೆ ಸುವರ್ಣಮೃಗರೂಪದಿಂದ ಸೀತೆಯ ಎದುರು ತಿರುಗಾಡುವಂತೆ ಹೇಳಿದನು. ಅದರಂತೆ ಶ್ರೀ ರಾಮನ ಪರ್ಣಶಾಲೆಯ ಮುಂದೆ ಮೃಗ ಬಂತು. ಸೀತೆ ಮೃಗವನ್ನು ನೋಡಿ ಹಿಡಿದುಕೊಡುವಂತೆ ರಾಮನನ್ನು ಕೇಳಿಕೊಂಡಳು. ರಾಮನು ಅದನ್ನು ಬೆನ್ನಟ್ಟುತ್ತ ಬಹುದೂರ ಹೋದನು. ಅದು ಸಜೀವವಾಗಿ ಸಿಗುವ ಆಸೆ ತೊರೆದು ಒಂದು ಬಾಣ ಬಿಟ್ಟನು. ಆಗ ಮೃಗರೂಪದ ಮಾರೀಚನು 'ಹಾ ಸೀತೆ, ಹಾ ಲಕ್ಷ್ಮಣ' ಎಂದು ಕೂಗಾಡುತ್ತ ಪ್ರಾಣಬಿಟ್ಟನು.

ಆ ಸ್ವರ ಸೀತೆಗೆ ಕೇಳಿಸಿತು. ರಾಮನಿಗೆ ಅಪಾಯ ಬಂದಿದೆಯೆಂದು ಆಕೆ ಬಗೆದಳು. ಲಕ್ಷ್ಮಣನನ್ನು ಒಡನೆಯೇ ಕಳುಹಿಸಿದಳು. ಅದೇ ಸಮಯವನ್ನು ಕಾಯುತ್ತಿದ್ದ ರಾವಣನು ಋಷಿವೇಷದಿಂದ ಸೀತೆಗೆ ಕಾಣಿಸಿಕೊಂಡನು. ಈ ಕಪಟವನ್ನರಿಯದ ಸೀತೆ ಅವನನ್ನು ಸತ್ಕರಿಸ

ತೊಡಗಿದಾಗ ಅವನು ಬಲಾತ್ಕಾರದಿಂದ ಅವಳನ್ನು ಎಳೆದುಕೊಂಡು ಹೋದನು.

ಜಟಾಯು ಎಂಬ ಪಕ್ಷಿರಾಜನು ಇದನ್ನು ನೋಡಿ ರಾವಣನನ್ನು ತಡೆದನು. ಅವನನ್ನು ಗಾಯಗೊಳಿಸಿ ರಾವಣನು ಮುಂದೆಹೋದನು.

ರಾಮನನ್ನು ಹುಡುಕುತ್ತ ಹೋದ ಲಕ್ಷ್ಮಣನು ಅವನನ್ನು ಸಂಧಿಸಿದೊಡನೆ ಅವರಿಬ್ಬರೂ ಪರ್ಣಕುಟೀರಕ್ಕೆ ಓಡಿಬಂದರು. ಪರ್ಣಶಾಲೆ ಶೂನ್ಯವಾಗಿರುವುದನ್ನು ನೋಡಿ ಸೀತೆಯನ್ನು ಹುಡುಕುತ್ತ ಹೋದರು. ಗಾಯಗೊಂಡ ಜಟಾಯು ಅವರಿಗೆ ಸೀತಾಪಹರಣದ ವೃತ್ತಾಂತವನ್ನು ತಿಳಿಸಿದನು. ರಾಮನ ದುಃಖ ಅರಣ್ಯರೋದನವಾಯಿತು.

ಜಟಾಯು ಮೃತಿಹೊಂದಿದನು. ಅವನ ಅಂತ್ಯಸಂಸ್ಕಾರವನ್ನು ರಾಮಲಕ್ಷ್ಮಣರು ಮಾಡಿದರು. ಮುಂದೆ ಹೋಗುತ್ತ ಕಬಂಧನೆಂಬವನು ಅವರನ್ನು ಹಿಡಿದನು. ಅವನ ಕೈಗಳನ್ನು ರಾಮನು ಕತ್ತರಿಸಿದೊಡನೆ ಅವನ ಶಾಪವು ಸಮಾಪ್ತವಾಗಿ ರಾಕ್ಷಸನು ದಿವ್ಯಪುರುಷನಾದನು. ಅವನು ರಾಮನಿಗೆ 'ನಿನ್ನಂತೆ ಪತ್ನೀವಿಯೋಗಹೊಂದಿದ ಕಪಿರಾಜನ ಸಹಾಯ ನಿನಗೆ ದೊರೆಯುವುದು' ಎಂದು ತನ್ನ ಲೋಕಕ್ಕೆ ತೆರಳಿದನು.

ರಾಮಲಕ್ಷ್ಮಣರು ಮುನ್ನಡೆದರು. ಪಂಪಾಸರೋವರದ ಸಮೀಪ ಋಷ್ಯಮೂಕ ಪರ್ವತದಲ್ಲಿ ಕಪಿನಾಯಕ ಸುಗ್ರೀವನು ಅವರನ್ನು ನೋಡಿ ಮಹಾಪುರುಷರೆಂದು ತಿಳಿದು ತನ್ನ ಸಂಕಟವನ್ನು ತೋಡಿಕೊಂಡನು. ಪರಸ್ಪರ ಸಹಾಯ ಮಾಡುವುದಾಗಿ ಪ್ರತಿಜ್ಞೆ ಮಾಡಿದ ಅವರು ಸ್ನೇಹಿತರಾದರು. ಸುಗ್ರೀವಾಗ್ರಜ ವಾಲಿಯನ್ನು ರಾಮನು ಸಂಹರಿಸಿ ಅವನ ರಾಜ್ಯವನ್ನು ಸುಗ್ರೀವನಿಗೆ ಕೊಟ್ಟನು.

ಜಾನಕಿಯನ್ನು ಹುಡುಕಲು ಸುಗ್ರೀವಸೇನೆ ಹೊರಟಿತು. ಮಾರುತಿ ಮತ್ತು ಇನ್ನು ಕೆಲವು ಕಪಿಶ್ರೇಷ್ಠರು ದಕ್ಷಿಣಕ್ಕೆ ಹೋದರು. ಸೀತೆ ಲಂಕೆಯಲ್ಲಿ ರಾವಣನ ಬಂಧನದಲ್ಲಿರುವ ಸಂಗತಿ ಸಂಪಾತಿಯಿಂದ ತಿಳಿದು ಬಂತು. ಸಾಹಸಿಯಾದ ಮಾರುತಿ ಸಮುದ್ರೋಲ್ಲಂಘನ ಮಾಡಿ ಲಂಕೆಗೆ ಹೋದನು.

ಲಂಕೆಯಲ್ಲಿ ಹುಡುಕಿ ಹುಡುಕಿ ಅಶೋಕ ವನದಲ್ಲಿ ಸೀತೆ ಕಾಣ ಸಿಕ್ಕಿದಳು. ಸಂಜೀವಿನೀ ಲತೆಯನ್ನು ವಿಷಲತೆಗಳು ಆವರಿಸಿರುವಂತೆ

ಸೀತೆಯನ್ನು ರಾಕ್ಷಸ ಸ್ತ್ರೀಯರು ಸುತ್ತುಗಟ್ಟಿದ್ದರು. ಶ್ರೀ ರಾಮನ ಉಂಗುರವನ್ನು ಅವಳಿಗೆ ಕೊಟ್ಟು 'ರಾಮನು ದುಷ್ಟಸಂಹಾರ ಮಾಡಿ ನಿನ್ನನ್ನು ರಕ್ಷಿಸುವನು' ಎಂಬ ಸಂದೇಶವನ್ನು ತಿಳಿಸಿದ ಮಾರುತಿ ಲಂಕಾಪತಿಯ ಮೇಲೆ ಸೇಡು ತೀರಿಸಿಕೊಳ್ಳಲು ಲಂಕಾದಹನ ಮಾಡಿದನು. ಸೀತೆ ಕೊಟ್ಟ ಚೂಡಾಮಣಿಯನ್ನು ರಾಮನಿಗೆ ತಂದೊಪ್ಪಿಸಿದನು. ರಾಮನ ಸಂತೋಷಕ್ಕೆ ಪಾರವಿಲ್ಲದಾಯಿತು.

ಅಮಿತ ಕಪಿಸೇನೆಯಿಂದ ಕೂಡಿಕೊಂಡು ರಾಮನು ಶತ್ರುನಾಶಕ್ಕೋಸ್ಕರ ಹೊರಟು ಸಮುದ್ರ ತಟಕ್ಕೆ ಬಂದು ಸೇರಿದನು. ರಾವಣಾನುಜ ವಿಭೀಷಣನು ರಾಮನನ್ನು ಆಶ್ರಯಿಸಿದನು. ರಾಮನು ಅವನಿಗೆ ಲಂಕೆಯನ್ನು ಗೆದ್ದು ಕೊಡುವುದಾಗಿ ವಾಗ್ದಾನ ಮಾಡಿದನು.

ಕಪಿಗಳೆಲ್ಲ ಸೇರಿ ಸಮುದ್ರಕ್ಕೆ ಸೇತುವೆ ಕಟ್ಟಿದರು. ಪಾತಾಳದಿಂದ ಮಹಾಶೇಷನು ಬಂದು ಮಲಗಿದಂತೆ ತೋರುವ ಆ ಸೇತುವೆಯಿಂದ ಸಮುದ್ರವನ್ನು ದಾಟಿ ಲಂಕೆಯನ್ನು ಮುತ್ತಿದರು. ರಾಕ್ಷಸರಿಗೂ ಕಪಿಗಳಿಗೂ ಭಯಂಕರ ಯುದ್ಧವಾಯಿತು. ರಾವಣ ಪುತ್ರನಾದ ಮೇಘನಾದನು ಶ್ರೀ ರಾಮನ ತಲೆಯ ಪ್ರತಿಮೆಯನ್ನು ತಯಾರಿಸಿ ಸೀತೆಯ ಮುಂದೆ ತಂದು ಹಾಕಿದನು. ಆದರೆ ಸೀತೆಯ ಹಿತಕಾಂಕ್ಷಿಯಾದ ತ್ರಿಜಟೆ ರಾಕ್ಷಸಿ ಯಥಾರ್ಥವನ್ನು ಹೇಳಿ ಸೀತೆಯನ್ನು ಸಮಾಧಾನಪಡಿಸಿದಳು. ತನ್ನ ಉಪಾಯ ನಿರರ್ಥಕವಾದುದನ್ನು ನೋಡಿ ಇಂದ್ರಜಿತು ಸರ್ಪಾಸ್ತ್ರದಿಂದ ರಾಮಲಕ್ಷ್ಮಣರನ್ನು ಕೆಡವಿದನು. ಗರುಡಬಂದೊಡನೆ ಅವರು ನಿದ್ರೆಯಿಂದೆದ್ದಂತೆ ಕಣ್ಣು ತಿಕ್ಕುತ್ತ ಎದ್ದು ನಿಂತರು.

ರಾವಣನು ಯುದ್ಧರಂಗಕ್ಕೆ ಬಂದು ಮಹಾಶಕ್ತಿಯಿಂದ ಲಕ್ಷ್ಮಣನ ಎದೆಗೆ ಹೊಡೆದನು. ಇದನ್ನು ನೋಡಿದ ರಾಮನಿಗೆ ಎದೆ ಸೀಳಿದಂತಾಯಿತು. ಹನುಮಂತನು ತಂದುಕೊಟ್ಟ ವನ್ಯೌಷಧಿಯಿಂದ ಲಕ್ಷ್ಮಣನು ಣನು ಸ್ವಲ್ಪ ಕಾಲದಲ್ಲಿ ಚೇತರಿಸಿದನು. ಆ ಮೇಲೆ ಇಂದ್ರಧನುಸ್ಸಿನಂಥ ಧನುಸ್ಸುಳ್ಳ ವರ್ಷಾಕಾಲದ ಮೇಘನಾದದಂತಿರುವ, ಇಂದ್ರಜಿತುವನ್ನು ಲಕ್ಷ್ಮಣನು ಕೊಂದಿಕ್ಕಿದನು.

ಅನಂತರ ಕುಂಭಕರ್ಣನು ಯುದ್ಧರಂಗದಲ್ಲಿ ಕಾಣಿಸಿಕೊಂಡನು. ಸುಗ್ರೀವನು ಅವನ ಕಿವಿ ಮೂಗುಗಳನ್ನು ಕತ್ತರಿಸಿ ಶೂರ್ಪನಖಿಯ ಅಣ್ಣ

ನೆಂಬುದನ್ನು ವಿಶದ ಪಡಿಸಿದನು. ಯಾವಾಗಲೂ ನಿದ್ರೆಯಲ್ಲಿರುವ ಅವನನ್ನು ಅಣ್ಣ ರಾವಣನು ಎಚ್ಚರಗೊಳಿಸಿದುದರಿಂದ ಅರೆನಿದ್ರೆಯಲ್ಲಿ ಎದ್ದು ಬಂದ ಅವನನ್ನು ಶ್ರೀ ರಾಮನು ಬಾಣದಿಂದ ಎಸೆದು ಅನಂತ ನಿದ್ರೆಯಲ್ಲಿ ಮಲಗುವಂತೆ ಮಾಡಿದನು.

ರಾವಣನು ಮತ್ತೊಮ್ಮೆ ಯುದ್ಧಕ್ಕೆ ಹೊರಟನು. "ಇಂದಿನ ಯುದ್ಧದಲ್ಲಿ ರಾಮ ರಾವಣರಲ್ಲಿ ಯಾರು ಉಳಿಯುವವರೆಂದು ತೋರಿಸಬೇಕು" ಎಂಬ ನಿರ್ಧಾರದಿಂದ ಯುದ್ಧಕ್ಕಿಳಿದ ರಥಾರೂಢನಾದ ಅವನು ಪದಾತಿಯಾದ ರಾಮನನ್ನು ಎದುರಿಸಿದನು. ಇದನ್ನು ನೋಡಿದ ಇಂದ್ರನು ರಾಮನಿಗೋಸ್ಕರ ದಿವ್ಯ ರಥವನ್ನು ಕಳುಹಿಸಿದನು. ಅದರಲ್ಲಿ ಅವನಿಗೋಸ್ಕರ ಒಂದು ಯುದ್ಧ ಕವಚವೂ ಇತ್ತು. ರಾಮನು ಕವಚಧಾರಿಯಾಗಿ ರಥದಲ್ಲಿ ಕುಳಿತನು. ರಾವಣ ಮತ್ತು ಇತರ ರಾಕ್ಷಸರು ಪ್ರಯೋಗಿಸಿದ ಅಸ್ತ್ರಶಸ್ತ್ರಗಳು ಈ ಕವಚದಿಂದ ಹಿಮ್ಮೆಟ್ಟಿದುವು. ರಾಮ ರಾವಣರು ಒಬ್ಬರನ್ನೊಬ್ಬರು ನೋಡಿದೊಡನೆ ಇಬ್ಬರ ಶೌರ್ಯವೂ ಮತ್ತಷ್ಟು ಹೆಚ್ಚಾಯಿತು. ಎಂಟು ಮಂದಿ ಲೋಕಪಾಲಕರನ್ನು ಜಯಿಸಿದ, ಶಿವಪೂಜೆ ಮಾಡಿಕೊಂಡಿರುವ, ಕೈಲಾಸ ಪರ್ವತವನ್ನು ಕೂಡಾ ಅಲುಗಾಡಿಸಿದ, ರಾವಣನು ಸಾಮಾನ್ಯನಲ್ಲವೆಂದು ರಾಮನಿಗೆ ಗೊತ್ತು. ಇಬ್ಬರೂ ಬಾಣಗಳಿಂದಲೇ ಮಾತಾಡಿಕೊಂಡರು. ರಾಮ ರಾವಣರ ಪರಾಕ್ರಮಾತಿಶಯವನ್ನು ನೋಡಿ ಜಯಶ್ರೀ ಒಮ್ಮೆ ಒಬ್ಬನನ್ನು ಇನ್ನೊಮ್ಮೆ ಇನ್ನೊಬ್ಬನನ್ನು ಅವಲೋಕಿಸುತ್ತಿದ್ದಳು. ಶ್ರೀ ರಾಮನು ಪ್ರಯೋಗಿಸಿದ ಬ್ರಹ್ಮಾಸ್ತ್ರವು ರಾವಣನ ತಲೆಯನ್ನು ನೆಲಕ್ಕುರುಳಿಸಿತು. ದೇವತೆಗಳು ಇದನ್ನು ನೋಡಿದರೂ ಮೊದಲು ನಂಬಲಿಲ್ಲ. ರಾಮನ ಮೇಲೆ ಪುಷ್ಪವೃಷ್ಟಿ ಬಿದ್ದುದನ್ನು ನೋಡಿದ ಬಳಿಕ ನಂಬದೆ ನಿರ್ವಾಹವಿಲ್ಲದಾಯಿತು.

ರಾವಣನ ಸರ್ವಸಂಸ್ಕಾರಗಳನ್ನು ವಿಭೀಷಣನು ಮಾಡಿದನು. ರಾಮನು ಮಾತು ಕೊಟ್ಟಿದ್ದಂತೆ ಲಂಕಾಧಿಪತ್ಯವನ್ನು ಅವನಿಗೊಪ್ಪಿಸಿದನು.

೧೯

ಅಯೋಧ್ಯಾಗಮನ

ಸೀತೆಯು ಅಗ್ನಿಪ್ರವೇಶ ಮಾಡಿ ಪರಿಶುದ್ಧಳಾದುದನ್ನು ನೋಡಿ ಅತ್ಯಾನಂದಗೊಂಡ ರಾಮನು ರಾಜಧಾನಿಗೆ ಹೋಗುವುದಾಗಿ ನಿಶ್ಚಯಿಸಿ

ದನು. ತಾನು ಬರುವುದನ್ನು ಭರತನಿಗೆ ತಿಳಿಸುವಂತೆ ಹನುಮಂತನನ್ನು ಮುಂದೆ ಕಳುಹಿಸಿ ಸೀತಾ ಲಕ್ಷ್ಮಣರೊಡಗೂಡಿ ಸುಗ್ರೀವ ವಿಭೀಷಣಾದಿ ಗಣ್ಯಮಿತ್ರರೊಡನೆ ವಿಮಾನವೇರಿ ಹೊರಟನು.

ವಿಮಾನವು ಸಂಚರಿಸುತ್ತಿದ್ದಾಗ ರಾಮನ ಮಾತಿಗೆ ಸೇತುಬಂಧದ ವೈಚಿತ್ರ್ಯ, ಸಾಗರ ನಿರ್ಮಾಣದ ಐತಿಹ್ಯ, ಸಮುದ್ರಾಂತರಾಳದ ರತ್ನರಾಶಿ ಪ್ರಾಣಿವರ್ಗಗಳ ವೈವಿಧ್ಯ, ಇವುಗಳನ್ನು ವರ್ಣಿಸುವಷ್ಟರಲ್ಲಿ ಸಮುದ್ರೋಲ್ಲಂಘನವಾಯಿತು. ಅನಂತರ ಜನಸ್ಥಾನ ಪಂಚವಟಿಗಳಲ್ಲಿ ಅವರಿಗೆ ಪರಿಚಿತ ಸ್ಥಾನಗಳನ್ನು ನೋಡುತ್ತಿದ್ದಂತೆ, ಸೀತೆ ಕಣ್ಮರೆಯಾದ ಮೇಲೆ ರಾಮ ಲಕ್ಷ್ಮಣರು ಅನುಭವಿಸಿದ ಕ್ಲೇಶ ಕಾರ್ಪಣ್ಯಗಳ ವರ್ಣನೆಯಾಯಿತು. ಪ್ರಯಾಗ ಸಮೀಪಿಸುವಾಗ ರಾಮನ ಸಂತೋಷ ಇನ್ನಷ್ಟು ಹೆಚ್ಚಿ ಮಾತುಗಳು ಹೊರಸೂಸಿದುವು. "ಗಂಗಾ ಯಮುನಾ ನದಿಗಳ ಪುಣ್ಯ ಜಲಗಳ ಸಂಗಮವು ಎಷ್ಟು ಮನೋಹರವಾಗಿದೆ ನೋಡು. ಮುಕ್ತಾಹಾರಕ್ಕೆ ಇಂದ್ರ ನೀಲಮಣಿಗಳ ಕಾಂತಿ ಬಂದಂತೆ, ಶ್ವೇತಕಮಲಗಳನ್ನೂ ನೀಲೋತ್ಪಲಗಳನ್ನೂ ಒಟ್ಟುಗೂಡಿಸಿ ಕಟ್ಟಿದ ಮಾಲೆಯಂತೆ, ಇದೆಯಲ್ಲವೆ? ಭಸ್ಮಲೇಪಿತವಾದ ಈಶ್ವರ ಶರೀರದಲ್ಲಿ ಕೃಷ್ಣ ಸರ್ಪ ಸುತ್ತಿಕೊಂಡಿದೆಯೋ ಎಂಬಂತೆ ತೋರುತ್ತಿದೆ. ಇಂತಹ ಪವಿತ್ರ ಸ್ಥಳದಲ್ಲಿ ಸ್ನಾನಮಾಡಿದರೆ ಯಾರಿಗೆ ತಾನೆ ದಿನನಿತ್ಯದ ಬವಣೆ ಮರೆತುಹೋಗದು? ಮೋಕ್ಷಪ್ರಾಪ್ತಿಗೆ ಇನ್ನೇನು ಬೇಕು? ನಾನು ಮೊದಲು ಜಡೆಬಿಟ್ಟ ಸ್ಥಳ, ಗುಹನ ಮನೆ, ಎಲ್ಲ ಕರತಳಾಮಲಕಗಳಂತೆ ಕಾಣುತ್ತಿವೆ. ಹಿರಿಯರ ಅಶ್ವಮೇಧಯೂಪಗಳು ಇನ್ನೂ ಅಲ್ಲೇ ಇವೆ. ನೋಡು, ಅದೋ ಸರಯೂ ನದಿ ಮತ್ತು ಅಯೋಧ್ಯೆ ಬಂತು.

ಅಷ್ಟರಲ್ಲಿ ಎದುರಿಗೆ ಧೂಳಿಯೆದ್ದುದು ಕಾಣಿಸಿತು. ಭರತನು ಪರಿವಾರದೊಡನೆ ಎದುರುಗೊಳ್ಳಲು ಬರುವ ಸಂಭ್ರಮವೇ ಅದು ಎಂದು ತಿಳಿದು ಬಂತು. "ಭರತನು ಇಷ್ಟು ಕಾಲ ನನ್ನ ಪರವಾಗಿ ಇಟ್ಟುಕೊಂಡಿದ್ದ ರಾಜ್ಯಶ್ರೀಯನ್ನು ಈಗ ನನಗೆ ಅರ್ಪಿಸಲು ತವಕದಿಂದಿದ್ದಾನೆ. ಗುರು ಹಿರಿಯರ ಹಿಂದೆ ವೃದ್ಧ ಮಂತ್ರಿಗಳೊಡನೆ ಪಾದಚಾರಿಯಾಗಿ ಬರುತ್ತಿರುವನು. ಬಂಧು ಪ್ರೇಮದಿಂದ ಸಿಂಹಾಸನವನ್ನು ತಿರಸ್ಕರಿಸಿದ ಅವನು ನನ್ನಂತೆ ಜಟಾಧಾರಿಯಾಗಿ ವ್ರತಪಾಲನೆ ಮಾಡಿ ಕೃಶಕಾಯನಾಗಿ

ದ್ದಾನೆ," ಎಂದು ಹೇಳುತ್ತಿರುವಾಗಲೇ ವಿಮಾನವು ಅವತರಿಸಿತು. ರಾಮನನ್ನು ನೋಡಿ ಎಲ್ಲರೂ ಹರ್ಷ ಪುಲಕಿತರಾದರು. ಭರತನು ಸಾಷ್ಟಾಂಗ ಪ್ರಣಾಮ ಮಾಡಿದನು. ಅವನನ್ನು ಹಿಡಿದೆತ್ತಿದ ರಾಮನು ಒಂದು ಮಾತನ್ನೂ ಹೇಳಲಾರದೆ ಕಣ್ಣೀರಿಟ್ಟನು. ಭರತನಿಗೂ ಮಾತುಗಳು ಕತ್ತಿನಲ್ಲಿಯೇ ಸಿಕ್ಕಿಕೊಂಡುವು.

ಮಂತ್ರಿಗಳು ರಾಮನನ್ನು ನಮಸ್ಕರಿಸಿದರು. ಅವರನ್ನು ಅತ್ಯಾದರದಿಂದ ಮಾತಾಡಿಸಿ ಗೌರವಿಸಿದ ರಾಮನು ಸುಗ್ರೀವನನ್ನು ತೋರಿಸಿ, "ಇವನು ನನ್ನ ಆಪದ್ಬಂಧು," ಎಂದು ಪ್ರಶಂಸಿಸಿದನು. ಸಾತ್ತ್ವಿಕನಾದ ವಿಭೀಷಣನ ಪರಿಚಯವನ್ನೂ ಮಾಡಿಸಿದ್ದಾಯಿತು. ಅನಂತರ ಭರತನು ಲಕ್ಷ್ಮಣನಿಗೂ ಸೀತೆಗೂ ನಮಿಸಿದನು.

ಕಪಿನಾಯಕರನ್ನೆಲ್ಲ ಆನೆಯ ಮೇಲೆ ಸವಾರಿ ಮಾಡಿಸಿ ಭರತಾದಿಗಳನ್ನು ವಿಮಾನದಲ್ಲಿ ಕೂರಿಸಿಕೊಂಡು, ತಳಿರು ತೋರಣಗಳಿಂದ ಅಲಂಕೃತವಾದ ಅಯೋಧ್ಯಾಪುರಿಯನ್ನು ರಾಮನು ವೈಭವದಿಂದ ಪ್ರವೇಶಿಸಿದನು.

೨೦

ಪಟ್ಟಾಭಿಷೇಕ

ಶ್ರೀ ರಾಮನು ಅರಮನೆಗೆ ಕಾಲಿರಿಸುವ ಮೊದಲು ಅರಸನಾಗಬೇಕೆಂದು ಭರತನ ಬಯಕೆ. ಅದಕ್ಕೋಸ್ಕರ ಉದ್ಯಾನದಲ್ಲಿ ಮಾಡಿಸಿದ ತಾತ್ಕಾಲಿಕ ವಸತಿಯಲ್ಲಿ ಎಲ್ಲರೂ ಸುಖಾಸೀನರಾದರು.

ಲತೆಯ ಆಶ್ರಯವಾಗಿರುವ ವೃಕ್ಷವು ಮುರಿದು ಬಿದ್ದರೆ ಲತೆಯ ಪಾಡು ಎಂತೋ ಅಂತಿರುವ ಕೌಸಲ್ಯೆ ಸುಮಿತ್ರೆಯರು ವನದಿಂದ ಮರಳಿ ಬಂದ ಮಕ್ಕಳನ್ನು ನೋಡಲು ಅತ್ಯಾತುರದಿಂದಿದ್ದರು. ಪ್ರೀತಿ ಗೌರವಗಳಿಂದ ನಮಸ್ಕರಿಸಿದ ಮಕ್ಕಳ ಮುಂದಲೆಯನ್ನೆತ್ತಿ ಆಘ್ರಾಣಿಸಿ ಕಂಬನಿಗಳಿಂದ ಆಶೀರ್ವದಿಸಿದ ಮೇಲೆ ಅವರ ಅಂಗಸ್ಪರ್ಶ ಮಾಡುತ್ತ ಅವರು ಮಾಡಿದ ರಾಕ್ಷಸ ಸಂಹಾರವನ್ನು ನೆನೆಯುತ್ತ ತಾವು ವೀರ ಪ್ರಸವಿನಿಯರಾದುದಕ್ಕೆ ಕ್ಷಣಕಾಲ ಪಶ್ಚಾತ್ತಾಪ ಪಟ್ಟು ಒಡನೆಯೇ ಆ ಹೇಡಿತನಕ್ಕೆ ನಾಚಿಕೆಪಟ್ಟರು. ಅಷ್ಟರಲ್ಲಿ ಸೀತೆ ಮುಂದೆ ಬಂದು ಅವರನ್ನು ವಂದಿಸಿ

"ಪತಿ ಕ್ಲೇಶಕಾರಿಣಿಯಾದ ಸೀತೆ ನಮಸ್ಕರಿಸುತ್ತಾಳೆ!" ಎಂದಳು. "ಏಳು, ಮಗಳೆ, ಹಾಗೆನ್ನಬೇಡ. ನಿನ್ನಂಥ ಸಾಧ್ವಿಯನ್ನು ಪಡೆದ ನನ್ನ ಮಗ ಧನ್ಯ" ಎಂದು ಹಿಡಿದೆತ್ತಿದರು ಅತ್ತೆಯರು.

ಶ್ರೀ ರಾಮನ ಪಟ್ಟಾಭಿಷೇಕಕ್ಕೆ ಮೊದಲು ತಾಯಂದಿರ ಸಂತೋಷಾಶ್ರುಗಳಿಂದ ಪ್ರಥಮಾಭಿಷೇಕವಾಯಿತು. ಕಪಿನಾಯಕರು ಎಲ್ಲ ನದಿ ಸಮುದ್ರಗಳ ನೀರನ್ನು ಒದಗಿಸಿದರು. ಬುದ್ಧಿವೃದ್ಧ ವಯೋವೃದ್ಧ ಮಂತ್ರಿಗಳು ಮತ್ತು ವಸಿಷ್ಠಾದಿ ಮುನಿಪುಂಗವರು ಅಭಿಷೇಕ ಮಹೋತ್ಸವವನ್ನು ನೆರವೇರಿಸಿದರು. ಮುನಿವೇಷದಲ್ಲಿಯೂ ವಿಶೇಷ ಶೋಭಿಸಿದ ಶ್ರೀ ರಾಮನು ರಾಜಯೋಗ್ಯವಾದ ವೇಷಭೂಷಣಗಳಿಂದ ಮತ್ತಷ್ಟು ಶೋಭಿಸಿದನು. ಮಂತ್ರಿಮಂಡಲಿ, ಸುಗ್ರೀವ, ವಿಭೀಷಣ, ಇವರಿಂದ ಕೂಡಿದ ಅವನು ವಾದ್ಯಘೋಷ ಮೊದಲಾದ ವಿಜೃಂಭಣೆಯಿಂದ ರಾಜಾವಾಸಕ್ಕೆ ಹೊರಟನು. ಲಕ್ಷ್ಮಣ ಶತ್ರುಘ್ನರು ಚಾಮರ ಬೀಸಿದರು. ಭರತನು ಶ್ವೇತಚ್ಛತ್ರವನ್ನು ಹಿಡಿದನು. ನಾಲ್ವರು ಸೋದರರೂ ಹೀಗೆ ಒಟ್ಟುಕೂಡಿದರು. ಅತ್ತೆಯರು ಸೀತೆಯನ್ನು ಸಿಂಗರಿಸಿದರು. ಪಟ್ಟಣದ ಸ್ತ್ರೀಯರು ಅವಳನ್ನು ನೋಡಿ ಸಂತುಷ್ಟರಾದರು.

ತನ್ನ ಜೊತೆಯಲ್ಲಿ ಬಂದ ಸುಗ್ರೀವಾದಿಗಳನ್ನು ರಾಮನು ಯೋಗ್ಯ ವಸತಿಗಳಲ್ಲಿ ವಿಶ್ರಮಿಸುವಂತೆ ಕೇಳಿಕೊಂಡನು. ಮಹಾದ್ವಾರದಲ್ಲಿ ದಶರಥನ ಚಿತ್ರವನ್ನು ನೋಡಿದ ರಾಮನಿಗೆ ಕಣ್ಣೀರು ತುಂಬಿ ಬಂತು.

ಸಿಂಹಾಸನಾರೋಹಣವು ಸಾಂಗವಾಗಿ ನಡೆಯಿತು. ಅವರವರ ಯೋಗ್ಯತೆಗೆ ಒಪ್ಪುವ ಉಡುಗೊರೆಗಳು ಆಗಂತುಕ ಅತಿಥಿಗಳಿಗೆ ಸಂದುವು. ಮುನಿವೃಂದವನ್ನು ಯೋಗ್ಯ ಉಪಚಾರಗಳಿಂದ ಸತ್ಕರಿಸಿದ್ದಾಯಿತು. ಮಹೋತ್ಸವ ಮುಗಿಯಲು ಅವರು ಹಿಂತೆರಳಿದರು. ರಾಮನು ಸುಗ್ರೀವ ವಿಭೀಷಣರನ್ನು ಇನ್ನಷ್ಟು ದಿನ ಕುಳ್ಳಿರಿಸಿ ಆದರಿಸಿದನು. ರಾವಣನ ವಶದಲ್ಲಿದ್ದ ಪುಷ್ಪಕವಿಮಾನವನ್ನು ಅದರ ಸ್ವಾಮಿಯಾದ ಕುಬೇರನೆಡೆಗೆ ಕಳುಹಿಸಿಕೊಟ್ಟನು. ಅದು ತನಗೆ ಬೇಕಾದಾಗ ದೊರೆಯಬೇಕೆಂಬ ಅವನ ಅಭಿಲಾಷೆ ಕುಬೇರನ ಪಾಲಿಗೆ ಅನುಜ್ಞೆಯಾಯಿತು.

ತಂದೆಯ ಅಪ್ಪಣೆಯಂತೆ ವನವಾಸ ತೀರಿಸಿ ಈಗ ರಾಜನಾದ ರಾಮನು ಧರ್ಮಾರ್ಥಕಾಮಗಳಲ್ಲಿ, ಮೂವರು ತಮ್ಮಂದಿರಲ್ಲಿ ನಡೆದು

ಕೊಂಡಂತೆ ವರ್ತಿಸಿದನು. ಲೋಭಿಯಾಗದೆ ಧನಿಕನಾದನು; ವಿಘ್ನಗಳಿಲ್ಲದೆ ಕಾರ್ಯತತ್ಪರನಾದನು. ಪ್ರಜೆಗಳನ್ನು ಯುಕ್ತ ಕಾರ್ಯಗಳಲ್ಲಿ ನಿಯಮಿಸಿ ತಂದೆಯಂತೆ ಆದನು. ಕರ್ತವ್ಯಪ್ರಮತ್ತನಾಗದೆ ಸೀತೆಯೊಡನೆ ಸುಖವಾಗಿ ಕಾಲಕಳೆದನು.

೨೧

ಸೀತಾವನವಾಸ

ಶ್ರೀ ರಾಮನ ವನವಾಸದ ಚರಿತ್ರೆಯನ್ನು ಚಿತ್ರಗಾರರು ಅರಮನೆಯ ಗೋಡೆಗಳಲ್ಲಿ ಬರೆದರು. ಸೀತಾರಾಮರು ಆ ದುಃಖದ ಸನ್ನಿವೇಶಗಳನ್ನು ನೋಡಿ ಈಗ ಸಂತೋಷವನ್ನು ಪಡೆದರು.

ಕೆಲವು ತಿಂಗಳುಗಳು ಕಳೆದುವು. ಸೀತೆ ಗರ್ಭಿಣಿಯಾದಳು. ರಾಮನು ಅವಳ ಆಶೆಗಳನ್ನು ಆಗಾಗ ತಿಳಿದುಕೊಂಡು ಈಡೇರಿಸಿದನು. 'ನಾನು ಇನ್ನೊಮ್ಮೆ ಭಾಗೀರಥಿಯಲ್ಲಿ ವಿಹರಿಸಬೇಕೆಂದು ಇಚ್ಛೆಯಾಗುತ್ತದೆ. ಮುನಿಕನ್ಯೆಯರೊಡನೆ ಕೂಡಿ ಹಿಂದಿನ ದಿನಗಳನ್ನು ನೆನಸಿಕೊಳ್ಳುವಂತಾಗುತ್ತದೆ,' ಎಂದ ಸೀತೆಯನ್ನು ಅಲ್ಲಿಗೆ ಕಳುಹಿಸುವುದಾಗಿ ಮಾತು ಕೊಟ್ಟನು.

ಒಂದು ದಿನ ರಾಮಚಂದ್ರನು ಎತ್ತರವಾದ ಸೌಧದಲ್ಲಿ ಕುಳಿತುಕೊಂಡು ವಿಶಾಲವಾದ ಬೀದಿಯನ್ನೂ ಶಾಂತವಾಗಿ ಹರಿಯುವ ಸರಯೂ ನದಿಯನ್ನೂ ಅಲ್ಲಲ್ಲಿ ಕಾಣುವ ಉದ್ಯಾನಗಳನ್ನೂ ನೋಡುತ್ತಿದ್ದನು. ಗುಪ್ತಚರನಾದ ಭದ್ರನನ್ನು ಬರಮಾಡಿ, ತನ್ನ ವಿಷಯದಲ್ಲಿ ಪೌರರು ಏನು ಹೇಳುತ್ತಿದ್ದಾರೆಂದು ಕೇಳಿದನು.

ಚಾರನು ಸತ್ಯಸ್ಥಿತಿಯನ್ನು ಹೇಳಲು ಹೆದರಿದನು. ಅದನ್ನು ಊಹಿಸಿ ತಿಳಿದ ರಾಮನು, ಇದ್ದ ಸಂಗತಿಯನ್ನು ಅಂಜಿಕೆ ಇಲ್ಲದೆ ಹೇಳುವಂತೆ ನಿರ್ಬಂಧಪಡಿಸಲಾಗಿ ಅವನು, 'ನಾನು ಭದ್ರನಾಗಿ ಅಭದ್ರವನ್ನು ನುಡಿಯಬೇಕಾದುದಕ್ಕೆ ವ್ಯಥೆಪಡುತ್ತೇನೆ. ಮಹಾರಾಜ, ಜನರೆಲ್ಲ, ನಿನ್ನನ್ನು ಬಹಳ ಕೊಂಡಾಡುವರಾದರೂ ರಾವಣನು ಕೊಂಡುಹೋದ ಮಡದಿಯನ್ನು ಪುನಃ ಸ್ವೀಕರಿಸಿದ ವಿಷಯದಲ್ಲಿ ಆಕ್ಷೇಪವೆತ್ತುವವರುಂಟು' ಎಂದನು. ಇದನ್ನು ಕೇಳಿದೊಡನೆ, ಉಷ್ಣಾಧಿಕ್ಯದಿಂದ ಕಬ್ಬಿ

ಣವು ದ್ರವಿಸುವಂತೆ ರಾಮನ ಹೃದಯ ದ್ರವಿಸಿದಂತಾಯಿತು. ತನ್ನ ಮೇಲಿನ ಈ ಅಪವಾದವನ್ನು ಲಕ್ಷಿಸದೆ ಬಿಡುವುದೋ, ಪರಿಶುದ್ಧಳಾದ ಸಾಧ್ವೀ ಸೀತೆಯನ್ನು ಬಿಡುವುದೋ ಎಂದು ಅವನ ಮನಸ್ಸು ತೂಗುಯ್ಯಾಲೆಯಾಯಿತು. ಕೊನೆಗೆ ಪತ್ನಿಯನ್ನು ತ್ಯಜಿಸುವುದೆಂದೇ ಸಿದ್ಧಾಂತವಾಯಿತು. ಕೀರ್ತಿಯೇ ಶರೀರವೆಂದೆಣಿಸುವವನಿಗೆ ತನ್ನ ದೇಹದಲ್ಲಿ ಆಶೆಯಿಲ್ಲದ ಮೇಲೆ ಪತ್ನಿಯಲ್ಲೇಕೆ ವ್ಯಾಮೋಹ?

ನಿಂದಾಕಲುಷಿತನಾಗಿ ತೇಜೋಹೀನನಾದ ರಾಮನು ಅನುಜರನ್ನು ಸಮೀಪದಲ್ಲಿ ಕುಳ್ಳಿರಿಸಿ ಹೀಗೆಂದನು: "ನಮ್ಮ ಈ ಸೂರ್ಯವಂಶಕ್ಕೆ ನನ್ನಿಂದ ಎಷ್ಟು ಕಳಂಕವಾಯಿತು! ಒಂದು ಬಿಂದು ಎಣ್ಣೆ ಬಿದ್ದರೂ ಜಲತಲವನ್ನೆಲ್ಲ ಆವರಿಸುವಂತೆ ಈ ಅಪವಾದ ಎಲ್ಲೆಲ್ಲೂ ಹರಡುವುದನ್ನು ನಾನು ಸಹಿಸಲಾರೆ. ತಂದೆಯ ಮಾತನ್ನು ನಡೆಸಲು ರಾಜ್ಯಲಕ್ಷ್ಮಿಯನ್ನು ಬಿಟ್ಟೆ. ಈಗ ಕೀರ್ತಿಪಾಲನೆಗಾಗಿ ಲಕ್ಷ್ಮಿಯಂತಿರುವ ಗರ್ಭಿಣಿ ಸೀತೆಯನ್ನು ತ್ಯಜಿಸುವ ಸಿದ್ಧಾಂತ ಮಾಡಿದ್ದೇನೆ. ಸೀತೆ ಪರಿಪೂತೆಯೆಂದು ತಿಳಿದಿದ್ದರೂ ಲೋಕಾಪವಾದ ನಿವಾರಣೀಯವಲ್ಲವೆ? ನಿರ್ದೋಷವಾದ ಭೂಮಿಯ ನೆರಳೇ ಚಂದ್ರನ ಮೇಲೆ ಬಿದ್ದರೂ ಜನರು ಅದನ್ನು ದೋಷಯುಕ್ತವಾದ ಗ್ರಹಣವೆನ್ನುವರು. ನಾನು ಮಾಡಿರುವ ರಾಕ್ಷಸ ನಾಶವು ವ್ಯರ್ಥವಲ್ಲ; ಅದು ನನ್ನ ಶತ್ರುನಿಗ್ರಹಸಾಮರ್ಥ್ಯವನ್ನು ಲೋಕಕ್ಕೆ ಸಾರುವುದು. ಸರ್ಪವನ್ನು ತುಳಿದರೆ ಅದು ಕಚ್ಚುವುದು ರಕ್ತದ ಆಶೆಯಿಂದಲ್ಲ; ವೈರನಾಶ ಅದಕ್ಕೆ ಮುಖ್ಯ. ಈ ಅಪವಾದಕ್ಕೆ ತಕ್ಕ ಪರಿಹಾರ ಮಾಡಿ ನಾನು ಬಾಳಿಕೊಂಡಿರಬೇಕಾದರೆ ನೀವು ಈ ನಿಶ್ಚಯವನ್ನು ವಿರೋಧಿಸಬಾರದು."

ಈ ರೀತಿ ಜಾನಕಿಯ ವಿಷಯದಲ್ಲಿ ಕಠಿನ ಮನಸ್ಸು ಮಾಡಿದ ಸ್ವಾಮಿಯಾದ ಅಣ್ಣ ರಾಮಚಂದ್ರನ ಮಾತುಗಳನ್ನು ವಿರೋಧಿಸಲಿಕ್ಕೂ ಸಮರ್ಥಿಸಲಿಕ್ಕೂ ತಮ್ಮಂದಿರಿಂದ ಸಾಧ್ಯವಾಗಲಿಲ್ಲ.

ಅನಂತರ ರಾಮನು ಲಕ್ಷ್ಮಣನನ್ನು ಪ್ರತ್ಯೇಕವಾಗಿ ಕರೆದು ಹೇಳಿದನು. "ಗರ್ಭಿಣಿ ಸೀತೆ ಇನ್ನೊಮ್ಮೆ ತಪೋವನಕ್ಕೆ ಹೋಗಬೇಕೆಂದು ಬಯಸಿದ್ದಾಳೆ. ನಾನು ಕಳುಹಿಸುತ್ತೇನೆಂದು ಮಾತು ಕೊಟ್ಟೂ ಆಗಿದೆ.

ಆದುದರಿಂದ ಅವಳನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹೋಗಿ ವಾಲ್ಮೀಕಿಯ ತಪೋವನದಲ್ಲಿ ಬಿಟ್ಟು ಬಾ."

ಪರಶುರಾಮನು ತಂದೆಯ ಆಜ್ಞೆಯಂತೆ ತಾಯಿಯ ತಲೆಯನ್ನು ಕಡಿದು ಹಾಕಿದ್ದನಂತೆ. ಅದರಂತೆ ಲಕ್ಷ್ಮಣನು ತಂದೆಗೆ ಸಮಾನನಾದ ಅಣ್ಣನ ಮಾತಿಗೆ ಸಮ್ಮತಿಸಿದನು. ತನ್ನ ಇಷ್ಟವು ಸಿದ್ಧಿಸಿತೆಂದು ಸೀತೆ ರಥದಲ್ಲಿ ಕುಳಿತು ಲಕ್ಷ್ಮಣನೊಡನೆ ಹೊರಟಳು. ಪ್ರಿಯನು ಎಷ್ಟೊಂದು ಪ್ರಿಯಕರನೆಂದು ಮನಸ್ಸಿನಲ್ಲಿಯೇ ರಾಮನನ್ನು ವಂದಿಸಿ ಅಭಿಮಾನಪಟ್ಟಳು.

ರಥ ಮುಂದೆ ಮುಂದೆ ಉರುಳಿತು. ಲಕ್ಷ್ಮಣನು ನಿಜಸ್ಥಿತಿಯನ್ನು ಇನ್ನೂ ಹೇಳಿರಲಿಲ್ಲ. ಸೀತೆಯ ಎಡಗಣ್ಣು ಹಾರಿತು. ಅವಳು ಆ ಅಶುಭ ಸೂಚನೆಗೆ ಹೆದರಿ "ಶ್ರೀ ರಾಮನಿಗೂ ಅನುಜರಿಗೂ ಯಾವ ಸಂಕಟಗಳೂ ಬರದಿರಲಿ" ಎಂದು ಪ್ರಾರ್ಥಿಸಿದಳು. ರಥವು ಗಂಗಾ ತಟಕ್ಕೆ ಬಂತು. ಸೀತೆಯನ್ನಿಳಿಸಿದ ಲಕ್ಷ್ಮಣನಿಗೆ ಹೊಳೆಯ ತೆರೆಗಳು "ಇಂತಹ ಕ್ರೂರ ಕೃತ್ಯ ಮಾಡಬೇಡ" ಎಂದು ಆಕ್ಷೇಪಿಸುವಂತೆ ತೋರಿತು. ಇಬ್ಬರೂ ದೋಣಿಯಲ್ಲಿ ಕುಳಿತು ನದಿ ದಾಟಿದರು. ಲಕ್ಷ್ಮಣನಿಗೆ ಕಣ್ಣೀರು ತುಂಬಿ ಕೊರಳು ಉಮ್ಮಳಿಸಿತು. ಬಹು ಕಷ್ಟದಿಂದ ಸೀತೆಗೆ ರಾಮನ ಆಜ್ಞೆಯನ್ನು ತಿಳಿಸಿದನು.

ಲಕ್ಷ್ಮಣನ ಮಾತು ಮುಗಿಯುವುದರೊಳಗೆ, ಬಿರುಗಾಳಿಗೆ ಬಾಳೆ ಮರ ಉರುಳುವಂತೆ, ಸೀತೆ ಭೂಮಿಗೆ ಬಿದ್ದಳು. ಕುಲೀನನೂ ಸಾಧು ಚರಿತನೂ ಆದ ರಾಮಚಂದ್ರನು ಅವಳನ್ನು ಬಿಡಲಾರನೆಂಬ ಭರವಸೆಯಿಂದಲೋ ಎಂಬಂತೆ ಭೂಮಿ, ಮಗಳು ಸೀತೆಯನ್ನು ಒಳಗೆ ಸೆಳೆದುಕೊಳ್ಳಲಿಲ್ಲ. ಆಕೆ ಅಚೇತನಳಾಗಿ ದುಃಖಾನುಭವ ಶೂನ್ಯಳಾಗಿದ್ದಳು. ಮೈದುನನು ಉಪಚರಿಸಿ ಎಚ್ಚರ ಬರುವಂತೆ ಮಾಡಿದನು. ಅವಳು ರಾಮನ ಕುರಿತು ಒಂದು ಕಠಿಣ ವಚನವನ್ನೂ ನುಡಿಯಲಿಲ್ಲ. ತನ್ನ ಪ್ರಾಕೃತ ಕರ್ಮ ಫಲವನ್ನೇ ನಿಂದಿಸಿಕೊಂಡಳು. ಲಕ್ಷ್ಮಣನು ಸಮಾಧಾನಪಡಿಸುತ್ತ, "ಇಲ್ಲಿ ಹತ್ತಿರದಲ್ಲಿ ವಾಲ್ಮೀಕಿಯ ಆಶ್ರಮವಿದೆ; ಅಂಜಬೇಡ. ಅಣ್ಣನ ಆಣತಿಯಂತೆ ಹೀಗೆ ಮಾಡಬೇಕಾಯಿತು," ಎಂದು ಸಾಷ್ಟಾಂಗವೆರಗಿದನು.

ಸೀತೆಯು ಅವನನ್ನು ಹಿಡಿದೆತ್ತಿ, "ತಮ್ಮ, ಚಿರಂಜೀವಿಯಾಗು. ನೀನು ಅಗ್ರಜನ ಆದೇಶದಂತೆ ವರ್ತಿಸಬೇಕಾದುದೇ ನ್ಯಾಯ. ಅತ್ತೆಯವರಿಗೆ ನನ್ನ ಬಿನ್ನಹ ಹೇಳು. ಹೊಟ್ಟೆಯಲ್ಲಿರುವ ಸಂತಾನಾಂಕುರವು ವರ್ಧಿಸುವಂತೆ ಹರಸಲಿ. ಸ್ವಾಮಿ ರಾಮಚಂದ್ರನಿಗೂ ನನ್ನ ಮಾತೆಂದು ಹೇಳು. 'ನಿನ್ನ ಸಮಕ್ಷದಲ್ಲಿಯೇ ನಾನು ಅಗ್ನಿಶುದ್ಧಳಾಗಿದ್ದೆ. ಈಗ ಕೀಳು ಜನರ ಮಾತು ಕೇಳಿ ನನ್ನನ್ನು ಬಿಡುವುದು ನಿನ್ನ ಕುಲಕ್ಕಾಗಲಿ ಕೀರ್ತಿಗಾಗಲಿ ಒಪ್ಪುವುದೆ? ನಿನ್ನನ್ನು ಚಪಲಚಿತ್ತನೆಂದು ನಿಂದಿಸುವುದಿಲ್ಲ. ನನ್ನ ಜನ್ಮಾಂತರ ಕರ್ಮವೇ ಈ ರೀತಿಯಾಗಿ ಪರಿಣಮಿಸಿರಬೇಕು. ಒಂದು ಕಾಲದಲ್ಲಿ ಪಾದಮೂಲಕ್ಕೆ ಬಂದ ರಾಜ್ಯಲಕ್ಷ್ಮಿಯನ್ನು ನಿರ್ಲಕ್ಷಿಸಿ ವನವಾಸ ಮಾಡಬೇಕಾಗಿ ಬಂದಾಗಲೂ ನೀನು ನನ್ನನ್ನು ಬಿಟ್ಟವನಲ್ಲ. ಈಗ ರಾಜಭವನದಲ್ಲಿ ಸುಖಭೋಗದಲ್ಲಿರುವಾಗ ತ್ಯಜಿಸುವುದು ನನ್ನ ದೈವದ ದುರ್ವಿಪಾಕವಲ್ಲದೆ ಮತ್ತೇನು? ರಾಕ್ಷಸರು ತೊಂದರೆ ಕೊಡುತ್ತಿದ್ದಾಗ ಋಷಿಪತ್ನಿಯರಿಗೆ ನಾನು ಧೈರ್ಯಕೊಡುತ್ತಿದ್ದೆ. ಈಗ ಕಾಡಿನಲ್ಲಿ ಅವರಿಂದ ರಕ್ಷಣೆಯನ್ನು ಕೇಳಬೇಕಾಯಿತು. ಸಹಿಸಲಾರದ ದುಃಖದಿಂದ ಶರೀರ ತ್ಯಾಗ ಮಾಡುವ ಆಲೋಚನೆ ಮಾಡುವುದಿಲ್ಲ. ನಿನ್ನ ವಂಶವರ್ಧಕ ಗರ್ಭ ನನ್ನಲ್ಲಿದೆ. ಶರೀರ ರಕ್ಷಣೆ ಮಾಡುತ್ತೇನೆ. ಇನ್ನು ಮೇಲೆ ನಾನು ಜನಿಸಿ ಬರುವುದಾದರೆ ಆಗಲೂ ನೀನೇ ನನಗೆ ಪತಿಯಾಗಬೇಕೆಂದು ಸೂರ್ಯನಲ್ಲಿ ದೃಷ್ಟಿಯಿಟ್ಟು ತಪಸ್ಸನ್ನಾಚರಿಸುತ್ತೇನೆ. ರಾಜನು ವರ್ಣಾಶ್ರಮ ಧರ್ಮಗಳನ್ನು ಕಾಪಾಡಬೇಕೆಂದು ಮನುವಚನವಿದೆ. ಮೂರನೆಯ ಆಶ್ರಮದಲ್ಲಿರುವ ನನ್ನ ರಕ್ಷಣೆ ನಿನ್ನನ್ನೇ ಸೇರಿದೆ.'"

ಲಕ್ಷ್ಮಣನು ಸೀತೆಯ ಮಾತುಗಳನ್ನು ಒಪ್ಪಿಕೊಂಡು ಹೋದನು. ಅವನು ದೃಗ್ಗೋಚರನಾಗಿರುವಷ್ಟು ಕಾಲವೂ ಆ ದಿಕ್ಕನ್ನೇ ನೋಡುತ್ತಿದ್ದ ಸೀತೆ ಮೇರೆ ಮೀರಿದ ದುಃಖದಿಂದ ಗಟ್ಟಿಯಾಗಿ ಅತ್ತಳು. ಅವಳ ಅಳುವನ್ನು ಕೇಳಿ ನವಿಲುಗಳು ಕುಣಿತವನ್ನು ನಿಲ್ಲಿಸಿದುವು. ಹುಲ್ಲೆಗಳು ಹುಲ್ಲು ಮೇಯುವುದನ್ನು ಬಿಟ್ಟು ಆ ಕಡೆ ನೋಡುತ್ತ ನಿಂತುವು. ವನವೆಲ್ಲ ಸಹಾನುಭೂತಿಯ ಉದ್ಗಾರ ತೆಗೆದಂತೆ ತೋರಿತು.

ಕುಶಸಮಿತ್ತುಗಳನ್ನು ಸಂಗ್ರಹಿಸಲೋಸುಗ ಆ ಕಡೆ ಬಂದಿದ್ದ ವಾಲ್ಮೀಕಿಮುನಿ ಸೀತೆಯ ರೋದನಧ್ವನಿಯನ್ನು ಕೇಳಿ ಸಮೀಪಕ್ಕೆ

ಬಂದನು. ಅವಳು ಅಳು ನಿಲ್ಲಿಸಿ ಕಣ್ಣೀರನ್ನೊರಸಿ ಅವನಿಗೆ ವಂದಿಸಿದಳು. "ಲೋಕಾಪವಾದಕ್ಕೆ ಹೆದರಿ ಪತಿ ನಿನ್ನನ್ನು ಪರಿತ್ಯಜಿಸಿದುದು ನನಗೆ ದಿವ್ಯ ದೃಷ್ಟಿಯಿಂದ ತಿಳಿಯಿತು. ಹೆದರಬೇಡ. ಹೆಣ್ಣಿಗೆ ಗಂಡನ ಆಸರೆ ತಪ್ಪಿದರೆ ತಂದೆಯ ಮನೆಯೇ ಗತಿ. ನನ್ನ ಆಶ್ರಮ ತಂದೆಯ ಮನೆಯೆಂದು ತಿಳಿ. ಪಿತೃವಾಕ್ಯವನ್ನು ಪಾಲಿಸಲು ವನವಾಸ ಕೈಕೊಂಡು ರಾಕ್ಷಸಸಂಹಾರ ಮಾಡಿ ಲೋಕೋಪಕಾರ ಗೈದ ರಾಮನು ಈಗ ವಿಚಾರಮೂಢನಾಗಿ ನಿನ್ನನ್ನು ಗತಿಗೆಡಿಸಿದುದಕ್ಕೆ ನನಗೆ ಅವನ ಕುರಿತು ಎಲ್ಲಿಲ್ಲದ ಸಿಟ್ಟು ಬರುತ್ತದೆ. ದಶರಥನು ನನ್ನ ಮಿತ್ರ. ಜನಕನು ಲೋಕಕ್ಕೇ ಸನ್ಮಾರ್ಗ ತೋರಿಸಿದ ಜೀವನ್ಮುಕ್ತ. ನೀನು ಪತಿವ್ರತೆಯರ ಸಾಲಿನಲ್ಲಿ ನಿಲ್ಲುವಾಗ ಮೊದಲಿಗಳಾಗುವ ಯೋಗ್ಯತೆಯುವಳು. ನನ್ನ ಮಗಳಂತೆ ತಮಸಾ ತೀರದಲ್ಲಿ ಮುನಿಕನ್ಯೆಯರೊಡನೆ ವಿಹರಿಸಿಕೊಂಡು ಫಲಪುಷ್ಪಗಳನ್ನು ಕೊಯ್ಯುತ್ತಿರು. ತಪಸ್ವಿಗಳ ಸಂಸರ್ಗದಿಂದ ಇಲ್ಲಿನ ಪ್ರಾಣಿಗಳು ಹಿಂಸೆಯನ್ನೇ ಮರೆತಿವೆ", ಎಂದು ಹೇಳಿ ವಾಲ್ಮೀಕಿ ಸಾಯಂಕಾಲದ ವೇಳೆಗೆ ಅವಳನ್ನು ಆಶ್ರಮಕ್ಕೆ ಕರೆದುಕೊಂಡು ಹೋದನು. ದೀನೆಯಾದ ಸೀತೆಯ ಆಗಮನದಿಂದ ಅಲ್ಲಿರುವ ತಪಸ್ವಿನಿಯರು ಸಂತೋಷಪಟ್ಟು ಆಶ್ರಮದೊಳಕ್ಕೆ ಕರೆದೊಯ್ದರು. ಇಂಗುದೀ ತೈಲದಿಂದ ದೀಪ ಹಚ್ಚಿ ಮೃಗ ಚರ್ಮವನ್ನು ಹಾಸಿ ಅವಳನ್ನು ಕುಳ್ಳಿರಿಸಿ ಉಪಚರಿಸಿದರು.

ಸೀತೆ ತಪೋವನದಲ್ಲಿ ನಿಯಮದಂತೆ ಸ್ನಾನಾದಿ ವಿಧಿಗಳನ್ನು ಮಾಡುತ್ತ ವಲ್ಕಲಧಾರಿಣಿಯಾಗಿ ಮುನಿಗಳಿಗೆ ಪೂಜಾಸಾಮಾಗ್ರಿಗಳನ್ನು ಒದಗಿಸುತ್ತ ಆಗಿಂದಾಗ ಬಂದ ಅತಿಥಿಗಳ ಸೇವೆ ಗೈಯುತ್ತಲಿದ್ದು ತನ್ನ ಗರ್ಭದ ರಕ್ಷಣೆಯಲ್ಲಿ ಆಸಕ್ತಿ ವಹಿಸುತ್ತಿದ್ದಳು. ಏಕಾಕಿನಿಯಾಗಿದ್ದಾಗ, ರಾಮಚಂದ್ರನು ತನ್ನನ್ನು ನೆನಸುತ್ತಿರುವನೋ ಎಂದು ಶಂಕಿಸುತ್ತ ಕಾಲ ಯಾಪನೆ ಮಾಡಿದಳು.

೨೨

ಕುಶಲವರ ಜನನ—ಲವಣಾಸುರ ವಧೆ

ಲಕ್ಷ್ಮಣನು ರಾಜಧಾನಿಗೆ ತಲಪಿ ಅಣ್ಣನಿಗೆ ಸೀತೆಯ ಸಂದೇಶವನ್ನು ಹೇಳಿದನು. ರಾಮನು ಬಾಷ್ಪಲೋಚನನಾಗಿ ಸೀತೆಯನ್ನು ಮನಸ್ಸಿನಲ್ಲಿ

ಧ್ಯಾನಿಸಿದನು. ಆದರೂ ಶೋಕವನ್ನು ಧೈರ್ಯದಿಂದ ನಿವಾರಿಸಿಕೊಂಡು ರಾಜಕಾರ್ಯದಲ್ಲಿ ತತ್ಪರನಾದನು. ಸವತಿ ತೊಲಗಿದುದರಿಂದ ರಾಜ್ಯಲಕ್ಷ್ಮಿ ಅವನ ಮನೋರಾಜ್ಯದಲ್ಲಿ ಸರ್ವಾಧಿಕಾರ ನಡೆಸಿದಳು.

ಆ ಕಾಲದ ಶಿಷ್ಟಾಚಾರದಂತೆ ರಾಜನಾದವನು ಅಶ್ವಮೇಧವನ್ನು ಮಾಡುವುದು ಅನಿವಾರ್ಯ. ಅದರಂತೆ ರಾಮನೂ ಮಾಡಬೇಕೆಂಬ ವಸಿಷ್ಠನ ಸಲಹೆಯಂತೆ ಅದಕ್ಕೆ ಬೇಕಾದ ಏರ್ಪಾಡುಗಳು ನಡೆದುವು. ಆದರೆ ಯಾವ ವೈದಿಕ ಕರ್ಮ ಮಾಡಬೇಕಾದರೂ ಯಜಮಾನನಿಗೆ ಪತ್ನಿ ಅವಶ್ಯ. ಏಕೆಂದರೆ ಯಜ್ಞಕರ್ಮಗಳಲ್ಲಿ ಸಹಭಾಗಿನಿಯಾಗುವುದರಿಂದಲೇ ಕೈಹಿಡಿದಾಕೆಗೆ 'ಪತ್ನಿ' ಎಂಬ ಹೆಸರು ಬರುವುದು. ರಾಮಪತ್ನಿ ಈಗ ಸನ್ನಿಹಿತೆಯಾಗಿಲ್ಲದುದರಿಂದ ಪುನರ್ವಿವಾಹದ ಸೂಚನೆ ಬಂತು. ಆದರೆ ರಾಮನ ಮನಸ್ಸಿನಿಂದ ಸೀತೆ ಅಗಲಿ ಹೋಗದಷ್ಟು ಸ್ಥಿರವಾಗಿದ್ದಳು. ಆಕೆಯ ಸುವರ್ಣಪ್ರಕೃತಿಯನ್ನು ನಿರ್ಮಿಸಿ ಜೀವಂತ ಪತ್ನಿಗೆ ಬದಲಾಗಿ ಇರಿಸುವುದು ಶಾಸ್ತ್ರಸಮ್ಮತವೆಂದು ವಸಿಷ್ಠನು ತಿಳಿಸಿದುದರಿಂದ ಹಾಗೆಯೇ ಮಾಡಲಾಯಿತು. ಅಶ್ವಮೇಧವು ಸಾಂಗವಾಗಿ ಕೊನೆಗೊಂಡಿತು. ಈ ಸುದ್ದಿ ಸೀತೆಗೆ ತಲಪಿದಾಗ ಆಕೆಯ ದುಃಖ ಸ್ವಲ್ಪಮಟ್ಟಿಗೆ ಸಹ್ಯವಾಯಿತು.

ಒಂದು ದಿನ ಯಮುನಾ ನದಿಯ ದಡದ ಮುನಿಗಳು ಬಂದು ರಾಮನಿಗೆ ಲವಣಾಸುರನ ಬಾಧೆಯ ಕುರಿತು ದೂರಿಟ್ಟರು. ರಕ್ಷಕರಿಲ್ಲದ ವೇಳೆಯಲ್ಲಿ ಮಾತ್ರ ತಾವು ಶಾಪಾಸ್ತ್ರದಿಂದ ಆತ್ಮರಕ್ಷಣೆ ಮಾಡಿಕೊಂಡರೂ ಅಂತಹ ಶಾಪದಿಂದ ತಮ್ಮ ತಪೋಜೀವನಕ್ಕೆ ಹಾನಿಯಾಗುವುದೆಂದೂ ಅರುಹಿದರು. ರಾಮನು ಲವಣಾಸುರನನ್ನು ಕೊಲ್ಲಿಸಿ ಅವರನ್ನು ತೊಂದರೆಯಿಂದ ಪಾರುಮಾಡುವುದಾಗಿ ಮಾತುಕೊಟ್ಟೊಡನೆ ಅವರು ಸಮಾಧಾನ ತಾಳಿದರು. ಲವಣನನ್ನು ಸಂಹರಿಸಲು ಸಮರ್ಥನಾದ ಶತ್ರುಘ್ನನನ್ನು ಸೇನೆಯೊಡನೆ ಕಳುಹಿಸಲಾಯಿತು.

ರಾವಣನ ತಂಗಿ ಕುಂಭೀನಸಿಯ ಮಗನೇ ಲವಣ. ಅವನ ಪಟ್ಟಣ ಮಧೂಪಘ್ನ. ಶೂಲಾಯುಧವನ್ನು ಧರಿಸಿದ ಅವನನ್ನು ಜಯಿಸುವುದು ದುಷ್ಕರವೆಂದು ಮುನಿಗಳು ಶತ್ರುಘ್ನನಿಗೆ ತಿಳಿಸಿದರು; ಅವನು ಪ್ರಾತರ್ವಿಹಾರಕ್ಕೋಸ್ಕರ ಹೋದವನು ಹಿಂದಿರುಗುವ ಮೊದಲೇ ಅವನನ್ನು ಸಂಧಿಸಿ ಸಂಹರಿಸುವುದು ಸೂಕ್ತವೆಂದು ನಿರ್ಣಯಿಸಿದರು.

ಶತ್ರುಘ್ನನನ್ನು ನೋಡಿದ ಲವಣಾಸುರನು, 'ನನಗೆ ಇಂದಿನ ಆಹಾರಕ್ಕೆ ಸಾಕಷ್ಟು ಮೃಗಗಳು ಸಿಕ್ಕದಿದ್ದುದರಿಂದ ಬ್ರಹ್ಮನು ಹೆದರಿ ನಿನ್ನನ್ನು ಕಳುಹಿಸಿರಬೇಕು,' ಎಂದು ಗರ್ಜಿಸುತ್ತ ದೊಡ್ಡದೊಂದು ಮರವನ್ನು ಕಿತ್ತು ಶತ್ರುಘ್ನನ ಮೇಲೆ ಎಸೆದನು. ಹರಿತವಾದ ಬಾಣಗಳಿಂದ ಶತ್ರುಘ್ನನು ಆ ಮರವನ್ನು ಚೂರುಚೂರು ಮಾಡಿದನು. ರಾಕ್ಷಸನು ದೊಡ್ಡದೊಂದು ಬಂಡೆಯನ್ನು ಎತ್ತಿ ಅವನ ಮೇಲೆ ರಭಸದಿಂದ ಬಿಸುಟನು. ರಾಮಾನುಜನು ಅದನ್ನು ಇಂದ್ರಾಯುಧದಿಂದ ನುಚ್ಚುನೂರು ಮಾಡಿದನು. ಅಸುರನು ಇನ್ನೊಂದು ಆಯುಧವನ್ನು ಪ್ರಯೋಗಿಸುವ ಮೊದಲು ಶತ್ರುಹಂತಾರನು ಬಲವಾದ ಬಾಣದಿಂದ ಅವನನ್ನು ಬೀಳಿಸಿದನು. ಭೂಮಿ ನಡುಗಿತು. ಮುನಿಹೃದಯದಲ್ಲಿದ್ದ ನಡುಕ ನಿಂತಿತು. ಮಿತ್ರಪಕ್ಷದ ಮುನಿವರ್ಗ ಶತ್ರುಘ್ನನನ್ನು ಶತ್ರುಹನನಕ್ಕೋಸ್ಕರ ಶ್ಲಾಘಿಸಿ ಹರಸಿತು. 'ಇಂದ್ರಜಿತುವನ್ನು ಅಣ್ಣ ಲಕ್ಷ್ಮಣ ಕೊಂದಂತೆ ಲವಣನನ್ನು ನೀನು ಲಯಗೊಳಿಸುವುದು ಸಹಜ. ನಿನಗೆ ಶುಭವಾಗಲಿ.'

ಲವಣಾಸುರನ ಸಂಪತ್ತಿನಿಂದ ಯಮುನಾ ತೀರದಲ್ಲಿ ಮಧುರಾ ನಗರಿ ನಿರ್ಮಿತವಾಯಿತು. ಆ ಪ್ರದೇಶದ ಜನರು ಶತ್ರುಘ್ನನ ಈ ಔದಾರ್ಯದ ಫಲವನ್ನು ಚೆನ್ನಾಗಿ ಉಪಯೋಗಿಸಿಕೊಂಡರು.

ಶತ್ರುಘ್ನನು ಲವಣಾಸುರನ ಸಂಹಾರಕ್ಕೆ ಹೋಗುವಾಗ ಅರ್ಧ ದಾರಿಯಲ್ಲಿ ವಾಲ್ಮೀಕಿಯ ಆಶ್ರಮದಲ್ಲಿ ತಂಗಿದ್ದನು. ಅಂದೇ ಸೀತೆ ಅವಳಿ ಮಕ್ಕಳನ್ನು ಪಡೆದಳು. ರಾಜಕುಲದಲ್ಲಿ ಅಂಥ ಸಂದರ್ಭಗಳಲ್ಲಿ ಕಾಣಬಹುದಾದ ವೈಭವಾಡಂಬರಗಳು ಮುನಿವಸತಿಯಲ್ಲಿ ಅಸಾಧ್ಯವಾದರೂ ಸೀತಾಮಾತೆಯ ಯೋಗ್ಯತೆಗೆ ತಕ್ಕಂಥ ಹೆಚ್ಚಿನ ಸಡಗರ ಕಂಡುಬಂತು.

ವಾಲ್ಮೀಕಿಯು ಶಿಶುಗಳಿಗೆ ಜಾತಕರ್ಮಸಂಸ್ಕಾರವನ್ನು ಮಾಡಿದ್ದಲ್ಲದೆ ಅವುಗಳ ಆರೈಕೆಗೆ ಬೇಕಾದ ಎಲ್ಲ ಏರ್ಪಾಡುಗಳನ್ನು ಬಲು ಜಾಗರೂಕತೆಯಿಂದ ಮಾಡಿಸಿದನು. ಪ್ರಸವಕಾಲದಲ್ಲಿ ಕುಶವೆಂಬ ಒಂದು ತೃಣ ವಿಶೇಷದ ಮತ್ತು ಗೋಪುಚ್ಛದಲ್ಲಿರುವ ಕೂದಲಿನ (ಅದರ ಹೆಸರು ಲವ) ಸಹಾಯದಿಂದ ಗರ್ಭಭಾರವು ಕಡಿಮೆಯಾಗಿ ಸುಖಪ್ರಸೂತಿಯಾದುದರಿಂದ ಮಕ್ಕಳಿಗೆ 'ಕುಶ' ಮತ್ತು 'ಲವ' ಎಂಬ ನಾಮಕರಣವಾಯಿತು.

ಮಕ್ಕಳು ಬೆಳೆಯುತ್ತ ದೇಹಬುದ್ಧಿಗಳಲ್ಲಿ ಬಹಳ ಚುರುಕಾದರು. ವಾಲ್ಮೀಕಿ ಅವರಿಗೆ ಉಪನಯನ ಮಾಡಿ ಸಾಂಗವಾದ ವೇದಗಳನ್ನು ಕಲಿಸಿ ತಾನು ರಚಿಸಿದ ರಾಮಾಯಣ ಮಹಾಕಾವ್ಯವನ್ನು ರಾಗಬದ್ಧವಾಗಿ ಹಾಡಲು ಹೇಳಿಕೊಟ್ಟನು. ರಾಮಚರಿತ್ರೆಯನ್ನು ಮಾತೃಸನ್ನಿಧಿಯಲ್ಲಿ ಮಧುರವಾಗಿ ಗಾನ ಮಾಡುವಾಗ ಸೀತೆಯ ದುಃಖ ಕಡಮೆಯಾಗುತ್ತಿತ್ತು.

ಲವಣಸಂಹಾರಕ್ಕೆ ಹೋದ ಶತ್ರುಘ್ನನು ಮಧುರೆಯಲ್ಲಿ ಲವಣಪುತ್ರರಾದ ಸುಬಾಹು ಬಹುಶ್ರುತರನ್ನು ಸ್ಥಾಪಿಸಿ ಅಯೋಧ್ಯೆಗೆ ಮರಳಿ ರಾಮಚಂದ್ರನಿಗೆ ತನ್ನ ಪಯಣ ಹೋರಾಟಗಳ ವಿವರಗಳನ್ನು ತಿಳಿಸಿದನು. ಆದರೆ ವಾಲ್ಮೀಕಿಯ ಆಶ್ರಮಕ್ಕೆ ಹೋದ ಮತ್ತು ಸೀತೆ ಪ್ರಸೂತಳಾದ ಸುದ್ದಿಯನ್ನು ಮಾತ್ರ ಹೇಳಲಿಲ್ಲ. ಏಕೆಂದರೆ ಆ ಸುದ್ದಿ ಅವನ ಮನೋವೇದನೆಗೆ ಕಾರಣವಾಗಬಹುದೆಂದೂ, ಸಮಯ ಬಂದಾಗ ವಾಲ್ಮೀಕಿಯೇ ಸೀತೆಯನ್ನೂ ಮಕ್ಕಳನ್ನೂ ರಾಮನಿಗೆ ಒಪ್ಪಿಸಬಹುದೆಂದೂ ಅವನ ಊಹೆ.

೨೩

ರಾಮಾಶ್ವಮೇಧ

ಒಂದು ದಿನ ರಾಜದ್ವಾರದಲ್ಲಿ ಬ್ರಾಹ್ಮಣನೊಬ್ಬನು ಅಕಾಲದಲ್ಲಿ ಮೃತನಾದ ತನ್ನ ಮಗನನ್ನು ಮಡಿಲಲ್ಲಿಟ್ಟುಕೊಂಡು ದುಃಖದಿಂದ ಹೇಳುತ್ತಿದ್ದನು. 'ಭೂದೇವಿ, ನೀನು ದಶರಥನಿಂದ ರಾಮನ ಅಧೀನಕ್ಕೆ ಬಂದ ಮೇಲೆ ರಾಜ್ಯದಲ್ಲಿ ಹೀಗೆ ಕ್ಲೇಶವುಂಟಾಯಿತು!' ಇದನ್ನು ಕೇಳಿ ದ್ವಾರರಕ್ಷಕರು ರಾಮನಿಗೆ ನಿವೇದಿಸಿದರು. ರಾಮನು ಬಂದು ಬ್ರಾಹ್ಮಣನ ಕ್ಷಮೆ ಬೇಡಿದನು. ಯಮನ ಬಳಿಗಾದರೂ ಹೋಗಿ ಕುವರನನ್ನು ಬದುಕಿಸಬೇಕೆಂದು ಪುಷ್ಪಕವಿಮಾನವನ್ನು ಜ್ಞಾಪಿಸಿಕೊಂಡನು. ಅದು ಬಂದು ನಿಂತಿತು.

ಅವನು ಆಯುಧಪಾಣಿಯಾಗಿ ಹೊರಡುವಷ್ಟರಲ್ಲಿ 'ರಾಜನೆ, ನಿನ್ನ ಪ್ರಜೆಗಳಲ್ಲಿ ವರ್ಣಾಶ್ರಮಧರ್ಮಕ್ಕೆ ವಿರೋಧವಾದ ಕರ್ಮವು ನಡೆಯುತ್ತಿದೆ. ಅದನ್ನು ತಡೆದು ಕೃತಕೃತ್ಯನಾಗು' ಎಂಬ ಅಶರೀರವಾಣಿ ಕೇಳಿಸಿತು. ರಾಮನು ದೇಶವನ್ನೆಲ್ಲ ಸುತ್ತಿದನು. ಒಂದು ಕಾಡನ್ನು ಹಾದು ಹೋಗುವಾಗ ತಲೆಕೆಳಗಾಗಿ ನೇತಾಡಿಕೊಂಡು ತಪಸ್ಸನ್ನಾಚರಿಸುತ್ತಿದ್ದವ

ನೊಬ್ಬನು ಕಾಣಸಿಕ್ಕಿದನು. ಅವನ ಕಣ್ಣುಗಳು ಬೆಂಕಿಯನ್ನೇ ಕಾರು ವಂತಿದ್ದುವು. 'ನೀನು ಯಾರು? ಈ ಘೋರ ತಪಸ್ಸಿನ ಉದ್ದೇಶವೇನು?' ಎಂದು ಕೇಳಲಾಗಿ 'ಅವನು ನಾನು ಶಂಬೂಕ; ದೇವಲೋಕ ಪ್ರಾಪ್ತಿಗಾಗಿ ತಪಸ್ಸನ್ನಾಚರಿಸುತ್ತಿದ್ದೇನೆ,' ಎಂದನು.

ಹೀಗೆ ತಪಸ್ಸಿಗೆ ಅರ್ಹತೆಯಿಲ್ಲದ ಅವನು ತಪಸ್ಸು ಮಾಡುವುದ ರಿಂದಲೇ ಅರಮನೆಯ ಬಾಗಿಲಿನಲ್ಲಿ ಕಂಡ ಅನಾಹುತಕ್ಕೆ ಕಾರಣವಾಯಿ ತೆಂದು ಬಗೆದು ರಾಮನು, ಖಡ್ಗದಿಂದ ಅವನ ತಲೆಯನ್ನು ಕತ್ತರಿಸಿದನು. ಶಂಬೂಕನು ತಪಸ್ಸಿನಿಂದ ಬಯಸಿದ ಸ್ವರ್ಗವು ರಾಮಶಸ್ತ್ರದಿಂದ ದೊರೆ ಯಿತು.

ರಾಮನು ಮುಂದೆ ಹೋಗುವಾಗ ಅಗಸ್ತ್ಯಾಶ್ರಮ ಸಿಕ್ಕಿತು. ಅಗ ಸ್ತ್ಯನು ಸಮುದ್ರರಾಜನಿಂದ ತನಗೆ ಲಭಿಸಿದ ದಿವ್ಯ ಹಸ್ತಾಭರಣವನ್ನು ರಾಮನಿಗೆ ಸಮರ್ಪಿಸಿ ಆದರಿಸಿ ಸತ್ಕರಿಸಿದನು. ರಾಮನು ಅಯೋಧ್ಯೆಗೆ ಬರುವಷ್ಟರಲ್ಲಿ ಕುಮಾರನು ಜೀವಿಸಿದುದನ್ನು ನೋಡಿ ಬ್ರಾಹ್ಮಣನು ಸಂತಸಗೊಂಡು ರಾಮನನ್ನು ಸ್ತುತಿಸುತ್ತಿದನು.

ಅಶ್ವಮೇಧ ಮಾಡಲು ಸಂಕಲ್ಪಿಸಿದ ರಾಮಚಂದ್ರನ ಯಜ್ಞಾಶ್ವವು ಇಷ್ಟಬಂದಂತೆ ಸಂಚರಿಸತೊಡಗಿತು. ಅದು ಹೋದೆಡೆಯಲ್ಲೆಲ್ಲ ಸಾ ಮಂತ ರಾಜರು ಕಾಣಿಕೆಗಳ ಮಳೆಯನ್ನೇ ಕರೆದರು. ಅನೇಕ ಮುನಿಗಳು ಯಜ್ಞಕ್ಕಾಗಿ ಅಯೋಧ್ಯೆಗೆ ಬಂದರು. ನಾಲ್ಕು ದಿಕ್ಕಿನ ದ್ವಾರಗಳಲ್ಲಿ ನೆರೆ ದಿರುವ ಋಷಿಸಮೂಹವನ್ನು ನೋಡುವಾಗ ಚತುರ್ಮುಖ ಬ್ರಹ್ಮನು ಪ್ರತ್ಯಕ್ಷ ಬಂದಂತೆ ಕಾಣುತ್ತಿತ್ತು. ಯಜ್ಞಕ್ಕೆ ಸಕಲ ಸಂಭಾರಗಳೂ ಸಿದ್ಧವಾದುವು. ಮೊದಲು ವಿಘ್ನಗಳನ್ನು ತಂದೊಡ್ಡುತ್ತಿದ್ದ ರಾಕ್ಷಸರೇ ಈಗ ಯಜ್ಞರಕ್ಷಕರಾಗಿದ್ದರು.

ವಾಲ್ಮೀಕಿ ಮಹರ್ಷಿ ಕುಶಲವರನ್ನು ಕರೆದುಕೊಂಡು ಅಯೋಧ್ಯೆಗೆ ಬಂದು ಬಾಲಕರನ್ನು ಯಜ್ಞಶಾಲೆಗೆ ಕಳುಹಿಸಿ ರಾಮಾಯಣವನ್ನು ಹಾಡುವಂತೆ ಹೇಳಿದನು. ಸಮಾನ ವೇಷಭೂಷಣ ವಯೋಮಾನ ಗಳಿಂದೊಪ್ಪುವ ಕುಮಾರರು ರಸವತ್ತಾದ ಆ ಮಹಾಕೃತಿಯನ್ನು ಕೋಕಿಲ ಸ್ವರದಿಂದ ಗಾನಮಾಡುತ್ತಿರುವಾಗ ಕೇಳುವವರೆಲ್ಲ ತನ್ಮಯರಾಗಿ ಪ್ರತಿಮೆ ಗಳಂತೆ ಕಂಡರು. ಆ ಕಥಾಸನ್ನಿವೇಶಗಳ ಕರುಣರಸ ಅವರನ್ನು ಅಶ್ರು

ಪೂರ್ಣರನ್ನಾಗಿಸಿತು. ರಾಮನೂ ಅವನ ತಮ್ಮಂದಿರೂ ಕುತೂಹಲದಿಂದ ಕೇಳುತ್ತಿದ್ದರು. ಕುವರರಿಗೂ ರಾಮನಿಗೂ ಹೆಚ್ಚಿನ ಹೋಲಿಕೆಯಿದ್ದುದನ್ನು ಜನರು ಎವೆಯಿಕ್ಕದೆ ನೋಡಿದರು.

ರಾಮನು ಹುಡುಗರನ್ನು ಹತ್ತಿರ ಕರೆದು, 'ಇದು ಯಾರ ಕೃತಿ? ನಿಮಗೆ ಇದನ್ನು ಕಲಿಸಿದವರಾರು?' ಎಂದು ಕೇಳಿದನು. ಅವರು ವಾಲ್ಮೀಕಿಯನ್ನು ತೋರಿಸಿದರು. ರಾಮನು ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. 'ನಿನ್ನ ಮಕ್ಕಳೇ ಇವರು. ಈಗ ನನ್ನ ರಕ್ಷಣೆಯಲ್ಲಿರುವ ಸೀತೆಯನ್ನೂ ಅವಳ ಈ ಮಕ್ಕಳನ್ನೂ ಸ್ವೀಕರಿಸು,' ಎಂದನು ಮುನಿ. 'ಪೂಜ್ಯರೆ, ನಿಮ್ಮ ಸೊಸೆಯಂತಿರುವ ಸೀತೆ ಸಾಧ್ವಿ ಎಂಬುದನ್ನು ಅಂದೇ ಅಗ್ನಿದೇವನು ನನಗೆ ತೋರಿಸಿಕೊಟ್ಟಿದ್ದಾನೆ. ಆದರೆ ನನ್ನ ಪ್ರಜೆಗಳು ಅದನ್ನು ನೋಡದೆ ಅಪವಾದ ಹೊರಡಿಸಿದರು. ಅವರಿಗೆ ಅವಳು ಪವಿತ್ರಳೆಂದು ಸಿದ್ಧವಾಗಬೇಕು. ಅನಂತರ ನಾನು ಅವಳನ್ನು ಸಂತೋಷದಿಂದ ಸ್ವೀಕರಿಸುತ್ತೇನೆ.' ಈ ಮಾತನ್ನು ಕೇಳಿ ವಾಲ್ಮೀಕಿ ತನ್ನ ಶಿಷ್ಯರ ಮೂಲಕ ಸೀತೆಯನ್ನು ಬರಮಾಡಿಕೊಂಡನು.

ಮರುದಿನ ರಾಮಚಂದ್ರನು ಆಸ್ಥಾನದಲ್ಲಿ ಆಸೀನನಾಗಿದ್ದನು. ಮಂತ್ರಿ ಪುರೋಹಿತರೂ ಪೌರರೂ ನೆರೆದಿದ್ದರು. ವಾಲ್ಮೀಕಿ ಸೀತೆಯನ್ನು ಸಭೆಗೆ ಬರುವಂತೆ ಹೇಳಿದನು. ಸ್ವರಸಹಿತವಾದ ವೇದಮಂತ್ರೋಚ್ಚಾರಣೆಯಿಂದ ಸೂರ್ಯದೇವನು ಉಪಸ್ಥಿತನಾಗುವಂತೆ ಪುತ್ರಾನ್ವಿತೆಯಾದ ಸೀತೆ ಆಸ್ಥಾನಕ್ಕೆ ಬಂದಳು. ನಾರುಡೆಯುಟ್ಟ ಸೊರಗಿದ ದೇಹದ ಅವಳು ತನ್ನ ಪಾದದಲ್ಲಿ ದೃಷ್ಟಿಯನ್ನಿಟ್ಟು ನಿಂತುದನ್ನು ನೋಡಿ, ಅವಳು ಪರಿಶುದ್ಧಳೆಂದು ಎಲ್ಲರೂ ತಿಳಿದುಕೊಂಡರು; ಅವಳ ಮುಖದೆಡೆ ನೋಡುವುದನ್ನು ಬಿಟ್ಟು ಅಧೋವದನರಾದರು.

'ಮಗಳೆ, ಪತಿಸಮಕ್ಷದಲ್ಲಿ ಜನರಿಗೆಲ್ಲ ತಿಳಿಯುವಂತೆ ನಿನ್ನ ನಡತೆಯ ಪರಿಶುದ್ಧತೆಯನ್ನು ತೋರಿಸು,' ಎಂದನು ವಾಲ್ಮೀಕಿ. ಶಿಷ್ಯನು ತಂದ ನೀರಿನಿಂದ ಮುಖಶುದ್ಧಿಮಾಡಿಕೊಂಡು ಸೀತೆ ಹೇಳಿದಳು: 'ಮನೋವಾಕ್ ಕರ್ಮಗಳಿಂದ ಶ್ರೀ ರಾಮಚಂದ್ರನ ಹೊರತು ಬೇರೆಯವರನ್ನು ನಾನು ಬಯಸದಿದ್ದುದು ನಿಜವಾದರೆ, ತಾಯಿ ವಿಶ್ವಂಭರೆ, ನನ್ನನ್ನು ಒಳಗೆ ತೆಗೆದುಕೊ.' ಕೂಡಲೇ ಭೂಮಿಯಿಂದ ಮಿಂಚಿನಂಥ ದಿವ್ಯ

ತೇಜಸ್ಸೊಂದು ಮೇಲೆದ್ದು ಸೀತೆಯನ್ನು ಎತ್ತಿಕೊಂಡು ಆಕಾಶಕ್ಕೆ ಸೆಗೆಯಿತು. ಆ ಜ್ಯೋತಿಯಲ್ಲಿ ಸಮುದ್ರ ಹೊಸೆಯಾದ ಭೂಮಿಯೇ ಕಾಣುತ್ತಿತ್ತು. ಭೂದೇವಿ ಸೀತೆಯನ್ನು ಮಡಿಲಿನಲ್ಲಿ ಕುಳ್ಳಿರಿಸಿಕೊಂಡಿರುವುದನ್ನು ರಾಮನೂ ಇತರರೂ ನೋಡುತ್ತಿದ್ದಂತೆ ಆಕೆ ಪಾತಾಳಪ್ರವೇಶ ಮಾಡಿದಳು. ಸೀತೆಯನ್ನು ಪುನಃ ಸ್ವೀಕರಿಸುವುದನ್ನು ವಿಧಿಯೇ ವಿರೋಧಿಸಿದಂತೆ ತೋರಿತು. ವಿಧಿವಿಲಾಸವನ್ನು ಮೀರುವವರಾರು?

ರಾಮಚಂದ್ರನು ಯಜ್ಞಸಮಾಪ್ತಿ ಮಾಡಿದನು. ಋಷಿಗಳನ್ನೂ ಇತರ ಅಭ್ಯಾಗತರನ್ನೂ ಸತ್ಕರಿಸಿ ಕಳುಹಿಸಿದನು. ಸೀತೆಯ ಮೇಲಿನ ಪ್ರೀತಿಯನ್ನು ಮಕ್ಕಳಲ್ಲಿರಿಸಿದನು.

ರಾಮನು ಯುಧಾಜಿತನ ಸಂದೇಶದಂತೆ ಸಿಂಧೂದೇಶವನ್ನು ಜಯಿಸಲು ಕಳುಹಿದ ಭರತನು ಗಂಧರ್ವರನ್ನು ಸೋಲಿಸಿ ಆ ದೇಶದ ರಾಜಕುಮಾರರಾದ ತಕ್ಷ ಮತ್ತು ಪುಷ್ಕಲರನ್ನು ರಾಜ್ಯಾಧಿಕಾರಿಗಳನ್ನಾಗಿ ಮಾಡಿ ರಾಮನ ಬಳಿಗೆ ಬಂದನು.

ಲಕ್ಷ್ಮಣನು ರಾಮನ ಆಜ್ಞೆಯಂತೆ ತನ್ನ ಪುತ್ರರಾದ ಅಂಗದ, ಚಂದ್ರಕೇತು, ಇವರನ್ನು ಕಾರಾಪಥದೇಶದ ಅಧಿಪತಿಗಳನ್ನಾಗಿ ನೇಮಿಸಿದನು.

ಒಂದು ದಿನ ಕಾಲನು ಮುನಿವೇಷದಿಂದ ಬಂದು ಶ್ರೀ ರಾಮನಿಗೆ ಹೇಳಿದನು: 'ನಾವಿಬ್ಬರೂ ಏಕಾಂತದಲ್ಲಿ ಮಾತಾಡಬೇಕಾಗಿದೆ. ಏಕಾಂತಭಂಗಮಾಡುವವನು ದೇಹಾಂತಶಿಕ್ಷೆಗೆ ಸಿದ್ಧನಾಗಿರಬೇಕು.' ದ್ವಾರದಲ್ಲಿ ಲಕ್ಷ್ಮಣನನ್ನು ನಿಲ್ಲಿಸಿ ಯಾರೂ ಒಳಗೆ ಬರಬಾರದೆಂದು ಅಪ್ಪಣೆ ಕೊಟ್ಟು ರಾಮನು ಕಾಲನನ್ನು ಒಳಗೆ ಕರೆದೊಯ್ದನು. ಸ್ವಲ್ಪ ಹೊತ್ತಿನಲ್ಲಿ ದೂರ್ವಾಸ ಮಹಾಮುನಿ ಬಂದು ರಾಮನನ್ನು ತೋರಿಸುವಂತೆ ಲಕ್ಷ್ಮಣನಿಗೆ ಹೇಳಿದನು. ಶಾಪದ ಭಯದಿಂದ ದೂರ್ವಾಸನನ್ನು ಒಳಗೆ ಬಿಟ್ಟದ್ದಾಯಿತು. ಏಕಾಂತಭಂಗಕ್ಕೆ ತಾನೇ ಕಾರಣನಾದುದರಿಂದ ಲಕ್ಷ್ಮಣನು ಸರಯೂ ತೀರಕ್ಕೆ ಹೋಗಿ ಯೋಗದಿಂದ ದೇಹವನ್ನು ಬಿಟ್ಟನು.

ಕಾಲನ ಪ್ರೇರಣೆಯಂತೆ ರಾಮನು ನಿರ್ವಾಣ ಹೊಂದಿದುದರಿಂದ ಹಿರಿಯ ಮಗ ಕುಶನು ರಾಜನಾದನು. ಕುಶಾವತಿ ಅವನ ರಾಜಧಾನಿ. ಉಳಿದ ರಾಜಕುಮಾರರು ಅವನ ಹೇಳಿಕೆಯಂತೆ ಬೇರೆ ಬೇರೆ ಪ್ರಾಂತ್ಯಗಳ ಅಧಿಕಾರ ವಹಿಸಿದರು. ರಘುವಂಶದ ಅಧೀನದಲ್ಲಿದ್ದ ದೇಶಗಳು

ಸ್ವಾಭಾವಿಕವಾಗಿ ಸಂಪತ್ಸಮೃದ್ಧಗಳಾದರೂ ಕುಶನು ಕೃಷಿ, ಸಂಚಾರ ಸೌಕರ್ಯ, ಕೋಟೆ, ಸೇತುವೆ, ಗಜಸಂಗ್ರಹ, ಖನಿಜ, ಕಂದಾಯ, ಜನವಸತಿ, ಇವುಗಳ ಕಡೆಗೆ ಹೆಚ್ಚು ಗಮನ ಕೊಟ್ಟು ಪ್ರಜಾಸುಖವನ್ನು ಮತ್ತಷ್ಟು ಹೆಚ್ಚಿಸಿ ರಾಜಶಕ್ತಿಯನ್ನು ಬೆಳೆಸಿದನು.

೨೪

ರಾಜಧಾನಿಯ ಬದಲಾವಣೆ—ಕುಮುದ್ವತಿಯ ಮದುವೆ

ಒಂದು ದಿನ ಮಧ್ಯರಾತ್ರಿಯ ಹೊತ್ತಿಗೆ ಕುಶನ ರಾಜಧಾನಿಯಲ್ಲಿ ಎಲ್ಲರೂ ಗಾಢನಿದ್ರೆಯಲ್ಲಿರುವ ವೇಳೆಯಲ್ಲಿ, ಅವನು ಅಂದಿನ ಕೆಲಸಗಳನ್ನೆಲ್ಲ ಮುಗಿಸಿ ಆಗ ತಾನೆ ಶಯನಾಗಾರವನ್ನು ಪ್ರವೇಶಿಸಿ ಮಲಗಿದ್ದನು. ಆದರೆ ಇನ್ನೂ ನಿದ್ರೆ ಹತ್ತಿರಲಿಲ್ಲ. ಅಷ್ಟರಲ್ಲಿ ಹೆಂಗುಸೊಬ್ಬಳು ಬಂದು ನಿಂತಂತೆ ಕಾಣಿಸಿತು. ದೇಶಾಂತರದಲ್ಲಿರುವವನ ಪತ್ನಿಯಂತೆ ಆಕೆ ವಿರಹ ಸೂಚಕ ವೇಷಭೂಷಣಗಳನ್ನು ತೊಟ್ಟಿದ್ದಳು. ಇದುವರೆಗೆ ನೋಡದಿರುವ ರೂಪಲಾವಣ್ಯದ ಆ ಯುವತಿ ಕುಶನ ಹತ್ತಿರ ಬಂದು 'ರಾಜನಿಗೆ ಜಯವಾಗಲಿ' ಎಂದು ಹೇಳಿ ಕೈ ಜೋಡಿಸಿದಳು. ಕುಶನು ವಿಸ್ಮಯ ಪಟ್ಟು ಮುಮ್ಮೈಯನ್ನು ಹಾಸಿಗೆಯಿಂದ ಮೇಲೆತ್ತಿ ಕೈಯೂರಿ ನಿಂತು ಹೇಳಿದನು: "ಗಟ್ಟಿಯಾದ ಚೌಕಟ್ಟುಳ್ಳ ಕನ್ನಡಿಯೊಳಗೆ ಪ್ರೇಕ್ಷಕರ ಪ್ರತಿಬಿಂಬವು ಪ್ರವೇಶಿಸುವಂತೆ ಭದ್ರವಾಗಿ ಬಾಗಿಲುಬಿಗಿದ ಈ ಶಯನ ಗೃಹಕ್ಕೆ ನೀನು ಬಂದುದು ಹೇಗೆ? ಯೋಗಶಕ್ತಿಯಿಂದ ಇಂತಹ ಪ್ರವೇಶ ಸಾಧ್ಯ. ಆದರೆ ನಿನ್ನಲ್ಲಿ ಅಂಥ ಶಕ್ತಿಯಿರುವಂತೆ ಕಾಣುವುದಿಲ್ಲ. ಕಮಲಕ್ಕೆ ಹಿಮ ಬಿದ್ದರೆ ವಿರೂಪವಾಗಿ ಕಾಣುವಂತೆ ನಿನ್ನ ಮುಖಕಮಲವು ದುಃಖದಿಂದ ತುಂಬಿದೆ. ಮಂಗಳಾಂಗಿ, ನೀನು ಯಾರು? ಯಾರ ಪತ್ನಿ? ನನ್ನಲ್ಲಿಗೆ ಬಂದ ಉದ್ದೇಶವೇನು? ನಿರ್ವಂಚನೆಯಿಂದ ಹೇಳು. ಜಿತೇಂದ್ರಿಯರಾದ ರಘುಗಳು ಪರಸ್ತ್ರೀಯನ್ನು ತಾಯಿಯಂತೆ ಕಾಣುವರು.

"ನಿನ್ನ ತಂದೆ ಶ್ರೀ ರಾಮಚಂದ್ರನು ಅಯೋಧ್ಯೆಯನ್ನು ಚೆನ್ನಾಗಿ ಆಳುತ್ತಿದ್ದನೆಂದು ನೀನು ಬಲ್ಲೆ. ಅದರ ಅಧಿದೇವತೆ ನಾನು. ಈಗ ಮಾತ್ರ ಅನಾಥೆಯಾಗಿದ್ದೇನೆ. ಒಂದು ಕಾಲದಲ್ಲಿ ಸರ್ವಸಂಪತ್ಸಮೃದ್ಧಿಯಿಂದ ಶೋಭಿಸುತ್ತಿದ್ದ ನನ್ನನ್ನು ನೋಡಿ ಅಮರಾವತಿ, ಅಲಕಾಪುರಿಗಳು

ನಾಚುತ್ತಿದ್ದುವು. ಈಗ ನಾನೇ ಅವರೆದುರು ನಾಚಿಕೆಪಡಬೇಕಾಗಿದೆ. ವಿಶಾಲವಾದ ರಾಜಬೀದಿಗಳು, ಗಗನಚುಂಬಿತ ಸೌಧಗಳು, ಅಲ್ಲಲ್ಲಿ ಕಾಣುವ ಉದ್ಯಾನಗಳು, ಸಾಕಷ್ಟು ಜನವಸತಿ, ಇವುಗಳಿಂದ ಮೆರೆಯುತ್ತಿದ್ದೆ. ಸಾಯಂಕಾಲದ ಹೊತ್ತಿನಲ್ಲಿ ಮೋಡ ಮುಚ್ಚಿದ ಸೂರ್ಯನಂತಾಗಿದೆ ನನ್ನ ಸ್ಥಿತಿ. ಯುವತಿಯರು ಜಲಕ್ರೀಡೆಯಾಡುತ್ತಿದ್ದ ಸರೋವರಗಳಲ್ಲಿ ಕಾಡುಕೋಣಗಳು ಮುಳುಗಿ ಎದ್ದು ವಪ್ರಕ್ರೀಡೆಯನ್ನು ಅನುಭವಿಸುತ್ತಿವೆ. ವಿಲಾಸಿಗಳ ಮನೆಗಳಲ್ಲಿ ಮೃದಂಗವಾದನ ಮಾಡುವಾಗ ನರ್ತಿಸುತ್ತಿದ್ದ ಮಯೂರಗಳು ಈಗ ಕಾಡನವಿಲುಗಳಾಗಿವೆ. ಉದ್ಯಾನ ಸರೋವರಗಳ ಸೋಪಾನಗಳಲ್ಲಿ ವನಿತೆಯರು ಸಾಯಂಕಾಲ ಕುಳಿತುಕೊಳ್ಳುತ್ತಿದ್ದರು. ಈಗ ಅಲ್ಲಿ ವನಮೃಗಗಳು ಸಂಚರಿಸುತ್ತಿವೆ. ಗಜ ವಿಹಾರಕ್ಕಾಗಿ ಏರ್ಪಟ್ಟಿದ್ದ ಪದ್ಮವನದಲ್ಲಿ ಈಗ ಸಿಂಹಗರ್ಜನೆಗೆ ಹೆದರಿಕೊಂಡು ಓಡಾಡಬೇಕಾಗಿದೆ. ಮುತ್ತಿನ ಗೊಂಚಲುಗಳು ನೇತಾಡುತ್ತಿದ್ದ ಚಂದ್ರಶಾಲೆಗಳಲ್ಲಿ ಹುಲ್ಲು ಬೆಳೆದಿದೆ. ಕ್ರೀಡಾ ವನಗಳಲ್ಲಿ ಮರಗಳ ಕೊಂಬೆಗಳನ್ನೂ ಬಳ್ಳಿಗಳನ್ನೂ ಬಗ್ಗಿಸದೆ ಯುವತಿಯರು ಹೂ ಕೊಯ್ಯುತ್ತಿದ್ದರು. ಈಗ ಅಲ್ಲಿ ಕೋತಿಗಳು ಗೆಲ್ಲುಗಳನ್ನು ಮುರಿದಿಕ್ಕುತ್ತಿವೆ. ಪೂಜಾ ದ್ರವ್ಯಗಳೂ ಸ್ನಾನ ಚೂರ್ಣಗಳೂ ತುಂಬಿರುತ್ತಿದ್ದ ಸರಯೂನದಿಯ ಮಳಲ ದಿಣ್ಣೆಯು ಈಗ ಶೂನ್ಯವಾಗಿ ಕಾಣುತ್ತಿದೆ. ಈ ಬದಲಾವಣೆಗಳಿಂದ ನನಗೆ ಕಳವಳವಾಗಿದೆ. ನೀನು ಈ ವಸತಿಯನ್ನು ಬಿಟ್ಟು ಕುಲರಾಜಧಾನಿಯಾದ ಅಯೋಧ್ಯೆಗೆ ಬಂದು ನೆಲಸಬೇಕು.

ಪುರದೇವತೆಯ ಈ ಮಾತಿಗೆ ಕುಶನ ಒಪ್ಪಿಗೆ ದೊರೆಯಿತು. ಸ್ತ್ರೀರೂಪ ಅದೃಶ್ಯವಾಯಿತು. ಈ ವಿಷಯವನ್ನು ಕುಶನು ಮರುದಿನ ಬೆಳಗ್ಗೆ ಮಂತ್ರಿಗಳೊಡನೆ ಚರ್ಚಿಸಿದನು. ಅಯೋಧ್ಯೆ ರಾಜಧಾನಿಯಾಗುವುದೆಂದರೆ ಅವರಿಗೆಲ್ಲ ಸಂತೋಷವೇ.

ಈ ಮೊದಲು ಕುಶನ ರಾಜಧಾನಿಯಾಗಿದ್ದ ಕುಶಾವತಿ ಶ್ರೋತ್ರಿಯರ ವಶಕ್ಕೆ ಹೋಯಿತು. ಕುಶನು ಅಂತಃಪುರದ ಜನರಿಂದಲೂ ಸೈನ್ಯದಿಂದಲೂ ಕೂಡಿಕೊಂಡು ಅಯೋಧ್ಯೆಗೆ ಹೊರಟನು. ಸೈನ್ಯದ ಆನೆಗಳ ಮದಧಾರೆಯಿಂದ ದಾರಿಯೆಲ್ಲ ಕೆಸರಿನಂತಾಯಿತು. ಕುದುರೆಗಳ ತುಳಿತದಿಂದ ಆ ಕೆಸರು ಗಟ್ಟಿಯಾಯಿತು.

ಕೆಲವೇ ದಿನಗಳ ಪ್ರಯಾಣದಿಂದ ಅಯೋಧ್ಯೆಗೆ ತಲುಪಿತು. ಹಿರಿಯರ ಯಜ್ಞ ಸ್ತಂಭಗಳನ್ನು ನೋಡಿ ಕುಶನಿಗೆ ಆನಂದವಾಯಿತು. ತಂಗಾಳಿ ಸ್ವಾಗತಿಸಿತು. ಪಟ್ಟಣದ ಹೊರಗಡೆ ಸೇನೆಯನ್ನು ನಿಲ್ಲಿಸಿ ಅವನು ತನ್ನ ಧ್ವಜವನ್ನು ಏರಿಸಿದನು.

ಒಣ ನೆಲವನ್ನು ಮೋಡಗಳು ನೆನೆಸುವಂತೆ ಹಾಳುಬಿದ್ದ ಊರನ್ನು ಕುಶನ ಅಪ್ಪಣೆಯಂತೆ ಶಿಲ್ಪಿಗಳು ಸರಿಪಡಿಸಿದರು. ರಕ್ಷಣೆಯಿಲ್ಲದೆ ಅಲಕ್ಷಿಸಲ್ಪಟ್ಟಿದ್ದ ಅನೇಕ ದೇವಮಂದಿರಗಳನ್ನೂ ಪ್ರತಿಮಾಗೃಹಗಳನ್ನೂ ಸ್ವಚ್ಛಗೊಳಿಸಿ ಪೂಜೆ ಮಾಡಿಸುವ ವ್ಯವಸ್ಥೆಯಾಯಿತು. ಅನಂತರ ಕುಶನು ರಾಜಭವನವನ್ನು ಪ್ರವೇಶಿಸಿ ಅಂತಃಪುರದ ಸ್ತ್ರೀಯರಿಗೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟನು. ಸ್ವಲ್ಪ ಕಾಲದಲ್ಲಿಯೇ ನಗರವು ಜನಸಂದಣಿಯು ಉತ್ಸಾಹದಿಂದ ಕಂಗೊಳಿಸಿತು. ಮೊದಲೇ ಸುಂದರವಾದ ಅಯೋಧ್ಯೆ ಹೊಸತಾಗಿ ಸಿಂಗರಿಸಲ್ಪಟ್ಟಾಗ ಪುನಃ ಅಲಕಾಪುರಿಗಿಂತ ಮಿಗಿಲಾಗಿರುವಂತೆ ಕಂಡಿತು.

ಸೆಕೆಗಾಲ ಬಂತು. ಹಿಮಾಲಯದ ಹಿಮ ಕರಗಿ ಗಂಗಾಪ್ರವಾಹ ತುಂಬಿತು. ಇತರ ನದಿಗಳಲ್ಲಿ ನೀರು ಕಡಮೆಯಾಗಿ ದಡದ ಹಾವಸೆ ಒಣಗಿತು. ಸಂಜೆ ಅರಳುವ ಮಲ್ಲಿಗೆಗಳ ಮೇಲೆ ಕುಳಿತು ಮಧುಪಾನ ಮಾಡಲು ಭ್ರಮರಗಳು ಝೇಂಕರಿಸುತ್ತ ಓಡಾಡಿದುವು. ನೀರು ತುಂತುರು ಹನಿಗಳಾಗಿ ಬೀಳುವಂತೆ ಯಂತ್ರೋಪಕರಣಗಳು ಏರ್ಪಟ್ಟ ಹೂದೋಟಗಳಲ್ಲಿ ಸಂಚರಿಸುವ ಯುವಕ ಯುವತಿಯರ ಮನಸ್ಸಿನಲ್ಲಿಯೂ ದೇಹದಲ್ಲಿಯೂ ತಾಪ ಹೆಚ್ಚಾಯಿತು. ಮನಸ್ಸಿನ ಸಂತಾಪವನ್ನು ನಿವಾರಿಸುವುದಕ್ಕೆ ಶಕ್ತನಾದ ವೃದ್ಧಿ ಮುಖನಾದ ಕುಶನೂ ದೇಹತಾಪವನ್ನು ಕಡಮೆಮಾಡಲು ಸಾಮರ್ಥ್ಯವುಳ್ಳ ಉದಯಚಂದ್ರಮನೂ ಪುರನಿವಾಸಿಗಳಿಗೆ ಬಹಳ ಹಿತಕರರೆನಿಸಿದರು.

ಕುಶನು ತಂಪಾದ ಸರಯೂ ನದಿಯಲ್ಲಿ ಜಲಕೇಳಿಯಾಡಲು ಮಿತ್ರಪರಿವಾರದೊಂದಿಗೆ ಹೊರಟನು. ಮೊಸಳೆಗಳಿಲ್ಲದ ಆಳವಾದ ಸ್ಥಳದಲ್ಲಿ ಧುಮುಕಿದನು. ಈಜಾಡುತ್ತ ನೀರು ಹಾರಿಸುತ್ತ ಮುಳುಗುತ್ತ ಏಳುತ್ತ ಬಹುಕಾಲ ವಿಹರಿಸಿ ದಡಕ್ಕೆ ಬಂದನು. ಅಷ್ಟರಲ್ಲಿ ಒಂದು ಪ್ರಮಾದವಾಯಿತು. ಶ್ರೀರಾಮನಿಗೆ ಅಗಸ್ತ್ಯನು ಕೊಟ್ಟಿದ್ದ ಒಂದು ಹಸ್ತಾಭರಣವು

ರಾಜ್ಯದೊಂದಿಗೆ ಕುಶನ ಕೈಸೇರಿತ್ತು. ಅದು ಈಗ ನೀರಿನ ಪಾಲಾದುದು ಅವನಿಗೆ ತಿಳಿಯದೆ ಹೋಯಿತು. ಜಯಶ್ರೀಯನ್ನು ಎಳೆದು ತರುವಂಥ ಅದನ್ನು ತಂದೆ ಪ್ರೀತಿಯಿಂದ ತನಗೆ ಕೊಟ್ಟಿದ್ದನು. ಅದನ್ನು ಜ್ಞಾಪಿಸಿಕೊಂಡು ಕುಶನಿಗೆ ಆದ ವ್ಯಥೆ ಅಷ್ಟಿಷ್ಟಲ್ಲ. ಅದನ್ನು ಹುಡುಕಿ ತೆಗೆಯಲು ದೋಣಿಗಾರರಿಗೂ ಬೆಸ್ತರಿಗೂ ಅಪ್ಪಣೆಯಾಯಿತು. ಅವರು ನೀರಿನಲ್ಲಿ ಬಹು ಸಮಯ ಹುಡುಕಿದರೂ ವ್ಯರ್ಥವಾಯಿತು. 'ದೇವ, ನಮ್ಮ ಶಕ್ತಿಮೀರಿ ಹುಡುಕಿದೆವು. ಆಭರಣ ಸಿಕ್ಕಲಿಲ್ಲ. ಅಲ್ಲಿ ಕುಮುದನೆಂಬ ಸರ್ಪರಾಜನಿದ್ದಾನೆ. ಅವನು ಲೋಭಗೊಂಡು ಅದನ್ನು ಅಪಹರಿಸಿರಬಹುದು,' ಎಂದರು.

ಕುಶನು ಕೋಪಾವಿಷ್ಟನಾಗಿ ಚಾಪಕ್ಕೆ ಗಾರುತ್ಮತಾಸ್ತ್ರವನ್ನು ಜೋಡಿಸಿದನು. ಕುಮುದನು ಮಗಳು ಕುಮುದ್ವತಿಯೊಡನೆ ಹೊರಬಂದು ಕುಶನಿಗೆ ವಂದಿಸಿ ಹೇಳಿದನು. 'ದೇವ, ಮಹಾವಿಷ್ಣುವಿನ ಅಂಶಸಂಭೂತನಾದ ರಾಮಚಂದ್ರನ ಮಗನಾದ ನಿನಗೆ ನಾನು ಕೇಡೆಣಿಸುವೆನೆ? ಈ ಕುಮುದ್ವತಿ ಚೆಂಡಾಡುತ್ತಿದ್ದಾಗ ಬಳೆ ಮೇಲಿನಿಂದ ಬಿದ್ದುದನ್ನು ನೋಡಿ ಆಶೆಯಿಂದ ತೆಗೆದುಕೊಂಡಳು. ಅವಳ ಅಪರಾಧವನ್ನು ಕ್ಷಮಿಸಿ ಬಳೆಯನ್ನು ತೆಗೆದುಕೊ. ಕ್ಷಮಿಸಿದ ನೆನಪಿಗಾಗಿ ಈಕೆಯನ್ನು ಪರಿಗ್ರಹಿಸುವ ಕೃಪೆಮಾಡು.'

ಕುಶನು ಕುಮುದನ ಮಾತಿನಿಂದ ಸಂತೋಷಪಟ್ಟನು. ಆ ಬಳೆಯನ್ನೇ ಕಂಕಣಸೂತ್ರವಾಗಿಸಿ ಕುಮುದ್ವತಿಯನ್ನು ಸಂಭ್ರಮದಿಂದ ವಿವಾಹವಾದನು. ಹೀಗೆ ನಾಗಕುಲವು ಕುಶನ ಬಂಧುವರ್ಗವಾದುದರಿಂದ ವೈನತೇಯನು ಕುಮುದಕುಲದ ವೈರವನ್ನು ಬಿಟ್ಟನು. ರಾಜದಂಪತಿಗಳು ಅಯೋಧ್ಯೆಯಲ್ಲಿ ಸುಖದಿಂದಿದ್ದರು.

೨೫

ಅತಿಥಿಯ ರಾಜ್ಯಸ್ಥಿತಿ

ಕಾಲಕ್ರಮದಲ್ಲಿ ಕುಶನಿಗೆ ಅತಿಥಿಯೆಂಬ ಮಗನು ಜನಿಸಿದನು. ಅವನಿಗೆ ರಾಜಯೋಗ್ಯವಾದ ವಿದ್ಯಾಭ್ಯಾಸವಾದ ಮೇಲೆ ಉತ್ತಮಕುಲದ ರಾಜಪುತ್ರಿಯೊಡನೆ ವಿವಾಹವಾಯಿತು. ಅವನು ಒಬ್ಬನೇ ಮಗನಾದರೂ ಶೌರ್ಯ, ಇಂದ್ರಿಯನಿಗ್ರಹ, ಮೊದಲಾದ ಗುಣಗಳಿದ್ದುದರಿಂದ ತಂದೆಗೆ ಹಲವು ಮಕ್ಕಳಿರುವುದಕ್ಕಿಂತ ಹೆಚ್ಚಿನ ಹರ್ಷವಾಯಿತು.

ಇಂದ್ರಲೋಕವನ್ನು ದುರ್ಜಯನೆಂಬ ರಾಕ್ಷಸನು ಆಗಾಗ ಕಾಡುತ್ತಿದ್ದನು. ಅವನು ನಿಜವಾಗಿ ದುರ್ಜಯನೇ ಆಗಿದ್ದನು. ಇಂದ್ರನ ಪ್ರಾರ್ಥನೆಯಂತೆ ಸೂರ್ಯವಂಶದ ಕುಲಪದ್ಧತಿಯನ್ನನುಸರಿಸಿ ಕುಶನು ದುರ್ಜಯನೊಡನೆ ಯುದ್ಧಮಾಡಿ ಅವನನ್ನು ಸಂಹರಿಸಿದನು. ಅವನ ಆಯುಧಗಳಿಂದ ಗಾಯಗೊಂಡ ಕುಶನೂ ಮೃತನಾದನು. ಕುಮುದ್ವತಿಯು ವಿಯೋಗದುಃಖವನ್ನು ಸಹಿಸಲಾರದೆ ಪತಿಯನ್ನು ಅನುಸರಿಸಿದಳು.

ಕುಶನು ಯುದ್ಧರಂಗಕ್ಕೆ ತೆರಳುವಾಗಲೇ ತಾನು ತಿರುಗಿ ಬರುವ ವಿಷಯದಲ್ಲಿ ಸಂಶಯ ತಾಳಿದ್ದುದರಿಂದ ಮಗನನ್ನು ರಾಜನನ್ನಾಗಿ ಮಾಡಬೇಕೆಂದು ಮಂತ್ರಿಗಳಿಗೆ ಹೇಳಿದ್ದನು. ಅತಿಥಿಯ ಪಟ್ಟಾಭಿಷೇಕದ ಕಾರ್ಯಗಳು ಆರಂಭವಾದುವು. ಶಿಲ್ಪಿಗಳು ನಾಲ್ಕು ಕಂಬಗಳ ಮಂಟಪ ಕಟ್ಟಿದರು. ಸ್ವರ್ಣಸಿಂಹಾಸನದ ಮೇಲೆ ಅತಿಥಿ ಕುಳಿತನು. ಒಂದು ಕಡೆಯಿಂದ ವೇದಘೋಷ ಇನ್ನೊಂದು ಕಡೆಯಿಂದ ವಾದ್ಯಘೋಷ ಕೇಳಿ ಬರುತ್ತಿದ್ದುವು. ದೂರ್ವಾಂಕುರ ಮತ್ತು ಕುಶಗಳಿಂದ ಕೂಡಿದ ತೀರ್ಥೋದಕ, ರತ್ನಮಿಶ್ರವಾದ ಸಮುದ್ರೋದಕ, ಇವುಗಳಿಂದ ವಸಿಷ್ಠಾದಿ ಋಷಿಶ್ರೇಷ್ಠರು ಮತ್ತು ಜ್ಞಾತಿವೃದ್ಧರು ಅಭಿಷೇಕ ಮಾಡಿದರು. ನೀರಾಜನವಿಧಿಗಳೂ ಆದುವು. ವಂದಿಮಾಗಧರು ರಾಜನನ್ನು ಸ್ತುತಿಸಿದರು.

ಅಭಿಷೇಕಾವಸಾನದಲ್ಲಿ ಅರ್ಥಿಗಳ ಮನಸ್ಸು ತೃಪ್ತಿಗೊಳ್ಳುವಷ್ಟು ಧನಕನಕಾದಿ ದಾನಗಳಾದುವು. ಪಟ್ಟಾಭಿಷೇಕದ ಸ್ಮರಣಾರ್ಥವಾಗಿ ಬಂಧನದಲ್ಲಿದ್ದವರನ್ನೆಲ್ಲ ಬಿಡಬೇಕೆಂದೂ ವಧೆಗೆ ಅರ್ಹರಾದವರನ್ನು ವಧಿಸಬಾರದೆಂದೂ ಅತಿಥಿ ಅಪ್ಪಣೆಯಿತ್ತನು. ವಿಲಾಸಕ್ಕಾಗಿ ಬಂಧಿಸಿದ್ದ ಶುಕ ಸಾರಿಕೆಗಳನ್ನು ಕೂಡ ಪಂಜರದಿಂದ ಮುಕ್ತಗೊಳಿಸಿ ಇಷ್ಟಬಂದಲ್ಲಿಗೆ ಹಾರಿ ಹೋಗಲು ಬಿಟ್ಟರು.

ಅಭಿಷೇಕಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳೂ ಮುಗಿದ ಮೇಲೆ ರಾಜನು ವಜ್ರದ ಕಿರೀಟ. ಮುತ್ತಿನ ಹಾರ, ಪದ್ಮರಾಗದ ಕೇಯೂರ, ಇತ್ಯಾದಿಗಳನ್ನು ಧರಿಸಿ ಶುಭ್ರವಾದ ಚೀನವಸನವನ್ನುಟ್ಟು ಬಿಳಿಬಟ್ಟೆ ಹಾಸಿದ ಗಜದಂತ ನಿರ್ಮಿತವಾದ ಆಸನದಲ್ಲಿ ಕುಳಿತನು. ಅವನ ಪ್ರಸನ್ನ ಮುಖ ಮತ್ತು ಮಂದಸ್ಮಿತದ ಮಾತುಗಳಿಂದ ಆಶ್ರಿತರ ವಿಶ್ವಾಸ ಹೆಚ್ಚಿತು.

ಇಂದ್ರತೇಜಸ್ಸಿನ ಅತಿಥಿ ಐರಾವತಸಮಾನವಾದ ಆನೆಯನ್ನೇರಿ ಸಂಚರಿಸುತ್ತಿದ್ದನು. ಅಯೋಧ್ಯೆ ಸ್ವರ್ಗಲೋಕಭ್ರಮೆಯನ್ನುಂಟುಮಾಡುತ್ತಿತ್ತು. ಅಗ್ನಿಯಿಂದ ಮೊದಲು ಹೊಗೆ, ಅನಂತರ ಜ್ವಾಲೆ; ಸೂರ್ಯೋದಯ ಮೊದಲು, ಆ ಮೇಲೆ ಕಿರಣಗಳು; ಅತಿಥಿ ಇವೆರಡನ್ನು ಮೀರಿದ ಗುಣಗಳಿಂದ ಕೂಡಿಕೊಂಡು ಉದಯಕ್ಕೆ ಬಂದನು. ಪಟ್ಟಾಭಿಷೇಕವಾದೆಡೆ ನೆಲ ಒಣಗುವ ಮೊದಲೇ ಅತಿಥಿಯ ಪ್ರತಾಪವು ಸಮುದ್ರದ ವರೆಗೆ ವ್ಯಾಪಿಸಿತು. ಗುರು ವಸಿಷ್ಠನ ಮಂತ್ರಗಳು ಯಾವ ಕಾರ್ಯವನ್ನಾದರೂ ಸಾಧಿಸಬಲ್ಲವು. ಅಂತೆಯೇ ಅತಿಥಿಯ ಶರಗಳು. ಎರಡೂ ಸೇರಿದರೆ ಕೇಳಬೇಕೆ? ಅತಿಥಿಯು ಧರ್ಮಾಸನದ ಮೇಲೆ ಕುಳಿತು ಪ್ರಜೆಗಳ ವ್ಯಾಜ್ಯಗಳನ್ನು ತೀರಿಸುವ ರೀತಿ ಬೃಹಸ್ಪತಿಯನ್ನಾದರೂ ತಲೆದೂಗಿಸುವಂತಹದು. ಶ್ರಾವಣ ಮಾಸದಲ್ಲಿ ನದಿಗಳು ವೃದ್ಧಿಹೊಂದುವಂತೆ ಕುಶನ ಕಾಲದಲ್ಲಿ ಪ್ರಜೆಗಳು ಅಭಿವೃದ್ಧಿಪಡೆದರಾದರೆ ಅತಿಥಿಯ ಕಾಲದಲ್ಲಿ ಭಾದ್ರಪದದ ನದಿಗಳಂತೆ ಇನ್ನಷ್ಟು ವೃದ್ಧಿಮುಖರಾದರು.

ಹೇಳಿದುದನ್ನು ಹಿಂದೆಳೆದುಕೊಳ್ಳುವುದಾಗಲಿ ಕೊಟ್ಟುದನ್ನು ಹಿಂದೆಗೆದುಕೊಳ್ಳುವುದಾಗಲಿ ಅತಿಥಿಗೆ ಆಗದು. ಅವನು ಶತ್ರುಗಳನ್ನು ಒಂದು ಸಲ ಸೋಲಿಸಿ ಪುನಃ ಅಲ್ಲೇ ಸ್ಥಾಪಿಸುವನು. ಪ್ರಾಯ, ರೂಪ, ಸಂಪತ್ತು, ಇವು ಒಂದೊಂದೇ ಆದರೂ ಮನುಷ್ಯನನ್ನು ದುರ್ಮಾರ್ಗಕ್ಕೆ ಇಳಿಸುತ್ತವೆ. ಆದರೆ ಅತಿಥಿಯಲ್ಲಿ ಈ ಮೂರೂ ಒಟ್ಟಾದರೂ ಅವನ ಮನಸ್ಸು ವಿಕಾರಗೊಳ್ಳಲಿಲ್ಲ.

ಸಣ್ಣ ಗಿಡವಾದರೂ ಬಲವಾದ ಮೂಲವುಳ್ಳದ್ದಾದರೆ ಬಹು ಭದ್ರವಾಗಿರುವಂತೆ ಅತಿಥಿ ಚಿಕ್ಕ ವಯಸ್ಸಿನವನಾದರೂ ಬಲಿಷ್ಠನಾಗಿದ್ದನು. ರಾಜರಿಗೆ ಶತ್ರುಗಳಿರುವುದು ಸ್ವಾಭಾವಿಕವಾದರೂ ಅವರು ಹೆಚ್ಚು ಪ್ರಯಾಸವಿಲ್ಲದೆ ನಾಶ ಹೊಂದುವವರು ಮತ್ತು ಹೊರಗಿನವರು. ಆದುದರಿಂದ ಅತಿಥಿಯು ಪ್ರಬಲರಾದ ಆಂತರಿಕ ಷಡ್ವೈರಿಗಳನ್ನೇ ಮೊದಲು ಜಯಿಸಿದನು. ಲಕ್ಷ್ಮಿ ಚಂಚಲ ಸ್ವಭಾವದವಳಾದರೂ ಒರೆಗಲ್ಲಿನಲ್ಲಿ ಚಿನ್ನದ ಗೆರೆ ಸ್ಥಿರವಾಗಿರುವಂತೆ ಅತಿಥಿಯಲ್ಲಿ ಸ್ಥಿರವಾಗಿದ್ದಳು. ರಾಜನು ಶೌರ್ಯವಿಲ್ಲದವನಾದರೆ ಅವನನ್ನು ಭೀರುವೆನ್ನುತ್ತಾರೆ; ಶೌರ್ಯಾಧಿಕ್ಯವನ್ನು ತೋರಿಸಿದರೆ ಹಿಂಸ್ರನೆನ್ನುತ್ತಾರೆ. ಅತಿಥಿ ಅವೆರಡರ ಸಮತೂಕದಿಂದ

ಅರಸುಗೈದನು; ಸೂರ್ಯನು ಕಿರಣಗಳನ್ನು ಎಲ್ಲೆಡೆಗೂ ಹರಡಿ ಎಲ್ಲವನ್ನೂ ಕಾಣುತ್ತಾನೆ; ಅತಿಥಿಯು ಚಾರರನ್ನು ನೇಮಿಸಿದುದರಿಂದ ಅವನಿಗೆ ತಿಳಿಯದ ವಿಷಯಗಳಿರಲಿಲ್ಲ. ರಾಜನು ಅಹೋರಾತ್ರ ಏನೇನು ಮಾಡತಕ್ಕದ್ದಿದೆಯೆಂದು ರಾಜನೀತಿಜ್ಞರು ಹೇಳಿರುತ್ತಾರೆ. ಅತಿಥಿ ಅದನ್ನು ನಿಶ್ಚಲಬುದ್ಧಿಯಿಂದ ತಪ್ಪದೆ ಮಾಡುತ್ತಿದ್ದನು; ಅನುದಿನ ಮಂತ್ರಿಗಳೊಡನೆ ಆಲೋಚಿಸಿ ಕೆಲಸಮಾಡುತ್ತಿದ್ದನು. ತನ್ನವರ ಮತ್ತು ಪರಕೀಯರ ವಿಷಯದಲ್ಲಿ ರಾತ್ರಿ ಹಗಲು ಎಚ್ಚರದಿಂದಿರುವುದು ಅವನಿಗೆ ನಿತ್ಯಾಭ್ಯಾಸವಾಗಿತ್ತು. ಶತ್ರುಭಯವಿಲ್ಲದಿದ್ದರೂ ಅವನು ದುರ್ಭೇದ್ಯವಾದ ಕೋಟೆಯನ್ನು ಕಟ್ಟಿದನು. ಗಜ ಮರ್ದಕ ಸಿಂಹವು ಆನೆಗೆ ಹೆದರಿ ಗುಹೆಗಳಲ್ಲಿರುವುದೆ? ದೂರಾಲೋಚನೆ ಮತ್ತು ಕರ್ತವ್ಯ ತತ್ಪರತೆ ಇದ್ದ ಅತಿಥಿಯ ಕಾರ್ಯಗಳು ಉತ್ತಮ ಫಲದಾಯಕಗಳಾಗಿದ್ದುವು. ಅವನು ಎಷ್ಟೇ ವೃದ್ಧಿಗೆ ಬಂದರೂ ದುಶ್ಚರಿತನಾಗಲಿಲ್ಲ. ಸಮುದ್ರದಲ್ಲಿ ನೀರು ಎಷ್ಟು ಹೆಚ್ಚಿದರೂ ಅದು ದಡವನ್ನು ಮೀರುವುದಿಲ್ಲ.

ಅತಿಥಿಯು ಪ್ರಜಾವರ್ಗದ ಮತ್ತು ಅಧಿಕಾರಿ ವರ್ಗದ ವೈರಕ್ಕೆ ಎಂದೂ ಆಸ್ಪದ ಕೊಡಲಿಲ್ಲ. ಶಕ್ತಿಸಂಪನ್ನನಾದರೂ ಅಧಿಕಶಕ್ತಿಯು ರಾಜರಲ್ಲಿ ವಿಜಯಯಾತ್ರೆಯನ್ನು ಕೈಗೊಳ್ಳಲಿಲ್ಲ. ಕಾಡ್ಗಿಚ್ಚು ಗಾಳಿಯಿಂದ ಕೂಡಿದರೂ ನೀರನ್ನು ಜಯಿಸಹೋಗುವುದೆ? ಧರ್ಮಾರ್ಥಕಾಮಗಳು ಪರಸ್ಪರ ವಿರೋಧಿಗಳಾದರೂ ಅವನಲ್ಲಿ ಸಮಭಾವದಿಂದಿದ್ದುವು. ಮೇಘ ತುಂಬಿಕೊಂಡಿದ್ದರೆ ಚಾತಕಪಕ್ಷಿ ಅದನ್ನು ಪ್ರಾರ್ಥಿಸುವಂತೆ ರಾಜನ ಕೋಶ ತುಂಬಿದ್ದರೆ ಅವನು ಇತರರಿಗೆ ಆಶ್ರಯಕೊಡಬಲ್ಲನು. ಅತಿಥಿ ಅದಕ್ಕೋಸ್ಕರ ಮಾತ್ರ ಧನಸಂಗ್ರಹ ಮಾಡಿದನಲ್ಲದೆ ಲೋಭದಿಂದಲ್ಲ. ಅವನು ತನ್ನ ಯುದ್ಧೋದ್ಯಮವನ್ನು ರಹಸ್ಯವಾಗಿ ಮುಂದುವರಿಸಿದರೂ ಶತ್ರುಗಳ ಉದ್ಯಮವನ್ನು ತಿಳಿದು ನಾಶಮಾಡುತ್ತಿದ್ದನು. ಸರ್ಪಶಿರಸ್ಸಿನ ರತ್ನತ್ರಯದಂತಿರುವ ಅವನ ಶಕ್ತಿತ್ರಯವನ್ನು ಯಾರೂ ಅಪಹರಿಸಲಾಗಲಿಲ್ಲ.

ಅತಿಥಿಯ ರಾಜ್ಯಭಾರದಲ್ಲಿ ದೇಶಸಂಚಾರಿಗಳಾದ ವರ್ತಕರು ನದೀಪ್ರಯಾಣ ಮಾಡುವುದೆಂದರೆ ಸರೋವರಗಳಲ್ಲಿ ಕ್ರೀಡಿಸಿದಂತೆ; ವನಗಮನವೆಂದರೆ ಅವರಿಗೆ ಉದ್ಯಾನವಿಹಾರದಂತೆ; ಪರ್ವತಗುಹೆಗಳಲ್ಲಿ

ವಿಶ್ರಾಂತಿಯೆಂದರೆ ಮನೆಯಲ್ಲಿ ಹಾಯಾಗಿ ಕುಳಿತಂತೆ. ರಾಜನು ಮುನಿಗಳ ತಪಸ್ಸನ್ನು ವಿಘ್ನಗಳಿಂದಲೂ ಪ್ರಜೆಗಳ ಸಂಪತ್ತನ್ನು ಕಳ್ಳರಿಂದಲೂ ರಕ್ಷಿಸಿ ಷಷ್ಠಾಂಶಕ್ಕೆ ಅಧಿಕಾರಿಯಾದನು. ಗನಿಗಳಿಂದ ರತ್ನಗಳು, ಹೊಲಗದ್ದೆಗಳಿಂದ ಧಾನ್ಯಗಳು, ಕಾಡುಗಳಿಂದ ಆನೆಗಳು, ಅವನಿಗೆ ಯಥೇಚ್ಛ ದೊರೆತುವು. ಇವು ನ್ಯಾಯವಾದ ರಕ್ಷಣೆಗೆ ತಕ್ಕ ವೇತನ. ಷಣ್ಮುಖ ಪರಾಕ್ರಮಿಯಾದ ಅತಿಥಿಯು ಷಡ್ಗುಣಗಳನ್ನು ಕ್ರಮವರಿತು ಪ್ರಯೋಗಿಸಿ ಕಾರ್ಯಸಾಧನೆ ಮಾಡಿದನು.

ರಾಜನೀತಿಯನ್ನು ಮತ್ತು ಸಾಮಾದಿ ಉಪಾಯಗಳನ್ನು ರಾಜ್ಯ ನಿರ್ವಹಣದಲ್ಲಿ ಉಪಯೋಗಿಸಿದ ಅತಿಥಿ ಎಲ್ಲದರಲ್ಲಿ ಸಂಪೂರ್ಣ ಸಿದ್ಧಿ ಪಡೆದನು. ಅವನು ಕಪಟಯುದ್ಧವನ್ನು ಬಲ್ಲವನಾದರೂ ಧರ್ಮ ಯುದ್ಧವನ್ನೇ ಮಾಡುವವನು. ಆದುದರಿಂದ ಜಯಶ್ರೀ ಅಭಿಸಾರಿಕೆಯಂತೆ ವೀರ ಅತಿಥಿಯನ್ನು ಆಶ್ರಯಿಸಿದಳು. ಪೂರ್ಣಚಂದ್ರನೂ ತುಂಬಿದ ಸಮುದ್ರವೂ ಕ್ಷೀಣಿಸುವುವಾದರೂ ಅತಿಥಿ ಅತಿಶಯ ವೃದ್ಧಿ ಹೊಂದಿದನಲ್ಲದೆ ಕ್ಷೀಣಿಸಲಿಲ್ಲ. ಮೇಘಗಳು ಸಮುದ್ರದ ನೀರನ್ನು ಸೆಳೆದು ತುಂಬಿಕೊಳ್ಳುವಂತೆ ಬಡ ವಿದ್ವಾಂಸರು ಅತಿಥಿಯಿಂದ ದ್ರವ್ಯ ಪಡೆದು ತೃಪ್ತರಾದರು. ಕಮಲಕ್ಕೆ ಚಂದ್ರಕಿರಣ ಬೇಡ; ಸೂರ್ಯಕಿರಣ ನೈದಿಲೆಗೆ ಅವಶ್ಯವಿಲ್ಲ. ಆದರೆ ಅತಿಥಿಯ ಗುಣರಾಶಿ ಶತ್ರುಗಳಿಗೂ ಬೇಕು. ಸಾಮಾನ್ಯವಾಗಿ ರಾಜರು ಅಶ್ವಮೇಧ ಮಾಡಿ ದಿಗ್ವಿಜಯಿಗಳಾಗುವರು; ಅತಿಥಿ ಜಯಶೀಲನಾದ ಬಳಿಕ ಅಶ್ವಮೇಧಗಳನ್ನು ಮಾಡಿದನು.

ಅತಿಥಿಯು ಶೌರ್ಯಸಾಹಸಗಳಿಂದ ದೇವತೆಗಳಿಗೆ ಇಂದ್ರನಿದ್ದಂತೆ ರಾಜರಿಗೆ ಮಹಾರಾಜನಾಗಿದ್ದನು; ನಾಲ್ಕು ಜನ ಲೋಕಪಾಲಕರ ಸಾಧರ್ಮ್ಯದಿಂದ ಐದನೆಯ ಲೋಕಪಾಲಕನೆಂದು ಹೆಸರು ಪಡೆದನು; ಪಂಚಭೂತಗಳ ಸಾಮ್ಯದಿಂದ ಆರನೆಯವನಾದನು. ಅವನ ರಾಜ್ಯದಲ್ಲಿ ಇಂದ್ರನು ನಿಯಮಿತ ಕಾಲದಲ್ಲಿ ಮಳೆ ಸುರಿಸಿದನು. ಯಮನು ಮುದುಕರನ್ನು ಮಾತ್ರ ತನ್ನಲ್ಲಿಗೆ ಕರೆಸಿಕೊಂಡನು. ವರುಣನು ನೌಕಾಸಂಚಾರಕ್ಕೆ ಅನುಕೂಲವಾಗುವಷ್ಟು ನೀರನ್ನು ಹೊಳೆಗಳಲ್ಲಿ ಹರಿಯಿಸಿದನು. ಕುಬೇರನು ಅವನ ಕೋಶವನ್ನು ವೃದ್ಧಿಪಡಿಸಿದನು. ಹೀಗೆ ಅತಿಥಿಯ ರಾಜನೀತಿಯ ಮಹಿಮೆಗೆ ಲೋಕಪಾಲಕರೂ ಸಹಾಯಕರಾದರು.

೨೬
ಅತಿಥಿರಾಜನ ಪರಂಪರೆ

ನಿಷಧದೇಶದ ರಾಜಕುಮಾರಿಯನ್ನು ವಿವಾಹವಾದ ಅತಿಥಿಯು ಕಾಲಕ್ರಮದಲ್ಲಿ ಪಡೆದ ಪುತ್ರನಿಗೆ ನಿಷಧನೆಂದು ಹೆಸರಿಟ್ಟನು. ಮಗನು ಯುವಕನಾಗಿ ರಾಜ್ಯಪಾಲನೆಗೆ ಅರ್ಹನಾದನು. ಚೆನ್ನಾಗಿ ದುಡಿದ ರೈತನಿಗೆ ಒಳ್ಳೆಯ ಬೆಳೆಯಿಂದ ಸಂತೋಷವಾಗುವಂತೆ ಸಮರ್ಥನಾದ ಪುತ್ರನಿಂದ ಅತಿಥಿ ಸಂತುಷ್ಟನಾಗಿ ಅವನಿಗೆ ಮಹಾರಾಜ ಎಂಬ ಶಬ್ದವನ್ನು ಒಪ್ಪಿಸಿ, ತನ್ನ ಉದಾತ್ತ ಕರ್ಮಗಳಿಂದ ಸಂಪಾದಿಸಿದ ಸ್ವರ್ಗಲೋಕವನ್ನು ಹೊಂದಿದನು.

ನಿಷಧನು ಸಾಗರಗಂಭೀರನಾಗಿ ಏಕವೀರನಾಗಿ ರಾಜ್ಯಪಾಲನೆ ಮಾಡಿದನು. ಅವನಿಗೆ ನಲನೆಂಬ ಪುತ್ರರತ್ನ ಜನಿಸಿತು. ಅನಲತೇಜಸ್ವಿಯಾದ ನಲನು, ದಾವಾನಲವು ಕಾಡನ್ನು ಸುಡುವಂತೆ, ಅರಿಸಂಹಾರ ಮಾಡಿ ದೇವಲೋಕವನ್ನು ಪಡೆದನು. ಅವನ ಸತ್ಪುತ್ರನು ನಭ. ಅವನೂ ರಿಪುಭಯಂಕರನಾಗಿ ಬಹುಕಾಲ ರಾಜ್ಯ ಮಾಡಿದನು. ಲೋಕಕ್ಷೇಮಕ್ಕಾಗಿ ಶರಚಾಪಧಾರಿಯಾದ ಕ್ಷೇಮಧನ್ವನು ದೇವಾನೀಕನ ತಂದೆಯಾದನು. ಅನೇಕ ಯಜ್ಞಗಳನ್ನು ವಿಧ್ಯುಕ್ತವಾಗಿ ಮಾಡಿ ದೇವಲೋಕದಲ್ಲಿ ಪ್ರಸಿದ್ಧಿಪಡೆದು 'ಯಜ್ವಾ' ಎಂಬ ಹೆಸರನ್ನು ಸಂಪಾದಿಸಿದನು. ಅಹೀನಗು ಎಂಬ ಅವನ ಮಗನೂ ಭುಜಬಲದಿಂದ ದುಷ್ಟಶಿಕ್ಷಕ-ಶಿಷ್ಟರಕ್ಷಕನಾಗಿ ನಾಲ್ಕು ದಿಕ್ಕುಗಳನ್ನೂ ವಶಪಡಿಸಿ ರಾಜ್ಯವಾಳಿದನು. ಅವನ ಮಗ ಪಾರಿಯಾತ್ರನು ಪರ್ವತದಂತೆ ಸ್ಥಿರನಾಗಿದ್ದು ಯಾರಿಗೂ ತಲೆತಗ್ಗಿಸದೆ ಇದ್ದವನು. ಅವನಿಗೆ ಶಿಲನೆಂಬ ಪುತ್ರನಾದನು. ಅವನ ಬಳಿಕ ಉನ್ನಾಭ, ಶಂಖಣ, ವ್ಯುಷಿತಾಶ್ವ, ವಿಶ್ವಸಹ, ಹಿರಣ್ಯನಾಭ, ಕೌಸಲ್ಯ, ಬ್ರಹ್ಮಿಷ್ಠ, ಪುತ್ರ, ಪೌಷ್ಯ, ಧ್ರುವಸಂಧಿ, ಇವರು ಕ್ರಮವಾಗಿ ಪಟ್ಟಕ್ಕೇರಿ ಕುಲಕೀರ್ತಿಗೆ ತಕ್ಕಂತೆ ಆಳಿದರು.

ಧ್ರುವಸಂಧಿಯು ಸುದರ್ಶನನಿಂದ ಪುತ್ರವಂತನಾದನು. ಬೇಟೆಗೆ ಹೋದ ರಾಜನು ಸಿಂಹದಿಂದ ಹತನಾದುದರಿಂದ ಮಂತ್ರಿಗಳು ಶಿಶು ಸುದರ್ಶನನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿದರು. ಪ್ರತಿಪಚ್ಚಂದ್ರನಿಂದ ಆಕಾಶವು ಶೋಭಿಸುವಂತೆ, ಸಿಂಹದ ಮರಿಯಿಂದ ಅರಣ್ಯವು ಮೆರೆಯು

ವಂತೆ, ಸುದರ್ಶನನಿಂದ ರಘುಕುಲ ಬೆಳಗಿತು. ರಾಜನು ಪ್ರೌಢಾವಸ್ಥೆಗೆ ಬರುವ ವರೆಗೆ ಮಂತ್ರಿಗಳೇ ರಾಜ್ಯಸೂತ್ರಗಳನ್ನು ಹಿಡಿದರು.

ಸಣ್ಣ ಮೇಘವಾದರೂ ಗಾಳಿಯಿಂದ ನಾಲ್ಕು ದಿಕ್ಕುಗಳಲ್ಲಿಯೂ ತಿರುಗುವಂತೆ ಆರು ವರ್ಷದ ಹುಡುಗನಾದ ದೊರೆ ಆನೆಯ ಮೇಲೆ ಕುಳಿತು ಬೀದಿಯಲ್ಲಿ ಹೋಗುತ್ತಿದ್ದನು. ಪಟ್ಟಣಿಗರು ಪಿತೃಗೌರವದಿಂದ ನೋಡುತ್ತಿದ್ದರು.

ಸಿಂಹಾಸನದಲ್ಲಿ ಕುಳಿತ ಸುದರ್ಶನನ ಪಾದಗಳು ಪಾದಪೀಠಕ್ಕೆ ಮುಟ್ಟದಿದ್ದರೂ ಅದರ ಪ್ರಕಾಶ ಸುತ್ತಲೂ ವ್ಯಾಪಿಸುವಂತೆ, ಸುದರ್ಶನನು ಸುಗುಣಗಳಿಂದ ಜನಜನಿತನಾದನು; ತಾನು ಏರಿದ ಸಿಂಹಾಸನವನ್ನು ತನ್ನ ತೇಜಸ್ಸಿನಿಂದ ತನ್ನದನ್ನಾಗಿ ಮಾಡಿಕೊಂಡನು.

ಉಭಯ ಪಾರ್ಶ್ವಗಳಲ್ಲಿ ಬೀಸುವ ಚಾಮರಗಳಿಂದ ಅವನ ಮುಂಗುರುಳು ಚಂಚಲವಾಗುತ್ತಿದ್ದರೂ ಮುಖದಿಂದ ಬಂದ ಮಾತುಗಳು ಯಾವಾಗಲೂ ಸ್ಥಿರವಾಗಿರುತ್ತಿದ್ದುವು. ಸುವರ್ಣ ವರ್ಣದ ಅವನ ಲಲಾಟದಲ್ಲಿ ತಿಲಕವು ಸದಾ ಶೋಭಿಸುತ್ತಿದ್ದರೂ ಶತ್ರುಸ್ತ್ರೀಯರ ಮುಖಗಳಲ್ಲಿ ಅಂತಹ ತಿಲಕಗಳು ಎಂದೂ ಉಳಿಯುತ್ತಿರಲಿಲ್ಲ. ಶಿರೀಷಪುಷ್ಪಗಳಿಗಿಂತ ಕೋಮಲನಾದ ರಾಜಕುಮಾರನು ಬಹುಭಾರವಾದ ರಾಜ್ಯಭಾರವನ್ನು ತಾನೇ ಹೊತ್ತನು. ಅವನ ವಕ್ಷಸ್ಥಳವು ರಾಜ್ಯಲಕ್ಷ್ಮಿಯ ನಿವಾಸಕ್ಕೆ ಸಾಕಾಗುವಷ್ಟು ಬೆಳೆಯಲಿಲ್ಲವಾದರೂ ಮುಂದೆ ವಿಶಾಲವಾಗುವ ನಿರೀಕ್ಷೆಯಿಂದ ಆಕೆ ಅಲ್ಲಿ ವಾಸಿಸಿದಂತೆ ತೋರಿತು. ಬಾಹುಗಳು ಚಾಪವನ್ನೂ ಹಸ್ತವು ಖಡ್ಗವನ್ನೂ ಧರಿಸಲಾರದಷ್ಟು ನಿರ್ಬಲಗಳಾಗಿದ್ದರೂ ಅವನು ಸಮರ್ಥರಕ್ಷಕನೆಂದು ಭೂಮಿ ಅವನನ್ನು ಆಶ್ರಯಿಸಿತು.

ಕಾಲ ಕಳೆಯುತ್ತ ಅವನ ಅಂಗಗಳು ಮಾತ್ರ ವೃದ್ಧಿ ಹೊಂದಿದ್ದಲ್ಲ; ಉತ್ತಮ ಗುಣಗಳೂ ವೃದ್ಧಿ ಹೊಂದಿದುವು. ಅವನು ಪೂರ್ವಜನ್ಮದಲ್ಲಿ ಕಲಿತುದನ್ನು ಜ್ಞಾಪಿಸಿಕೊಳ್ಳುವಂತೆ ಗುರುಗಳಿಂದ ಸಮಸ್ತ ವಿದ್ಯೆಗಳನ್ನೂ ಬಲು ಬೇಗ ಕಲಿತನು; ರಾಜನೀತಿಯಲ್ಲಂತು ವಿಚಕ್ಷಣನಾದನು.

ಯುವಕನಾದ ರಾಜನಿಗೆ ಒಳ್ಳೆಯ ರಾಜಕುಲದ ಕುವರಿಯನ್ನು ಹುಡುಕಿ ತಂದು ವಿವಾಹವಾಯಿತು. ನವವಧುವಿನೊಡನೆ ರಾಜನು ಸುಖಸಂತೋಷಗಳನ್ನು ಅನುಭವಿಸಿದನು.

೨೭

ಅಗ್ನಿವರ್ಣನ ಅಗ್ನಿಸಂಸ್ಕಾರ

ಸುದರ್ಶನನು ಇತರ ರಾಘವರಂತೆ ರಾಜ್ಯಭಾರವನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಿ ಸುಖಭೋಗಗಳನ್ನನುಭವಿಸಿ ಅಗ್ನಿತೇಜಸ್ಸಿನ ಅಗ್ನಿವರ್ಣನೆಂಬ ಸುತನನ್ನು ಪಡೆದನು. ಸುತನು ಪ್ರಾಪ್ತವಯಸ್ಕನಾದೊಡನೆ ಪಿತನು ರಾಜಚಿಹ್ನೆಯನ್ನು ಅವನಿಗೆ ಕೊಟ್ಟು ತಾನು ವಾನಪ್ರಸ್ಥಾಶ್ರಮವನ್ನು ಕೈಕೊಂಡನು. ತಪೋವನದ ತೀರ್ಥೋದಕಗಳಲ್ಲಿ ಸ್ನಾನ ಮಾಡುತ್ತ ಕ್ರೀಡಾಸರಸ್ಸುಗಳ ವಿಹಾರವನ್ನು ಮರೆತನು. ದರ್ಭೆಗಳನ್ನು ಹಾಸಿ ಮಲಗಿಕೊಂಡು ಹಂಸತೂಲಿಕಾತಲ್ಪದ ನೆನಪನ್ನು ಬಿಟ್ಟನು. ಸೌಧಗಳನ್ನು ತ್ಯಜಿಸಿ ಕುಟೀರಗಳಲ್ಲಿ ವಾಸಿಸುತ್ತ ತಪಸ್ಸಂಚಯ ಮಾಡಿದನು.

ಪ್ರಾಯ ಬಂದಾಗ ಕಾಮುಕನಾದ ಅಗ್ನಿವರ್ಣನು ಸ್ತ್ರೀಲಂಪಟನಾಗಿ ಅಂತಃಪುರದಲ್ಲೇ ಇರತೊಡಗಿದನು. ಗಾನನರ್ತನಗಳು ಹೆಚ್ಚಿದುವು. ಧಾರ್ಮಿಕೋತ್ಸವಗಳು ಕಡಮೆಯೂ ಆದುವು. ಪ್ರಜೆಗಳಿಗಾಗಲಿ ಅಧಿಕಾರಿಗಳಿಗಾಗಲಿ ದರ್ಶನವೀಯುವ ಅಗ್ನಿವರ್ಣನಿಗೆ ಹಗಲಿರುಳುಗಳ ಭೇದ ಕಾಣುತ್ತಿರಲಿಲ್ಲ. ಕರ್ಣನೇತ್ರಾನಂದ ಒಂದು ಕ್ಷಣವೂ ತಪ್ಪಬಾರದು. ಕಾರ್ಯಸಮರ್ಥರಾದ ಮಂತ್ರಿಗಳು ಅವನನ್ನು ನೋಡಬೇಕೆಂದು ಒತ್ತಾಸೆ ಮಾಡಿದರೆ ಗವಾಕ್ಷಗಳ ಮೂಲಕ ಅವನ ಚರಣಗಳು ಮಾತ್ರ ಕಾಣಿಸುತ್ತಿದ್ದುವು.

ರಾಜಕಾರ್ಯದಲ್ಲಿ ಇಷ್ಟು ಅಶ್ರದ್ಧೆಯಿದ್ದರೂ ಇತರ ರಾಜರು ಅಯೋಧ್ಯೆಯನ್ನು ಇಣಿಕಿ ನೋಡಲು ಕೂಡ ಹೆದರುತ್ತಿದ್ದರು. ಆದರೆ ದಕ್ಷಶಾಪವು ಚಂದ್ರನನ್ನು ಕ್ಷೀಣಿಸುವಂತೆ ಅತಿವಿಲಾಸವು ಅಗ್ನಿವರ್ಣನ ಕ್ಷೀಣಸ್ಥಿತಿಗೆ ಕಾರಣವಾಯಿತು. ರಾಜವೈದ್ಯರು ಎಷ್ಟೇ ಪ್ರಾರ್ಥಿಸಿದರೂ ಅವನು ತನ್ನ ರೀತಿಯನ್ನು ಬದಲಾಯಿಸದೆ ಹೋದನು. ಇಂದ್ರಿಯಗಳನ್ನು ವಿಷಯಸುಖಗಳು ಅಧೀನಪಡಿಸಿದರೆ ಆ ಕಟ್ಟಿನಿಂದ ಹೊರಬರಲು ಸಾಧ್ಯವೆ?

ರಾಜನ ಮುಖ ಬಿಳುಪೇರಿತು. ಸೇವಕರು ಕೈಹಿಡಿದು ನಡೆಸುವಂತಾಯಿತು. ಸ್ವರ ಕುಂದಿತು. ರಾಜಯಕ್ಷ್ಮ ಬಲಿಯಿತು. ಕ್ಷೀಣ

ಚಂದ್ರನಿರುವ ಆಕಾಶದಂತೆ, ಸಣ್ಣ ಶಿಖೆಯ ದೀಪದಂತೆ, ರಘುಕುಲ ಕಂಗಾಲಾಯಿತು.

ರೋಗ ಉಲ್ಬಣವಾಯಿತು. ಪ್ರಜೆಗಳು ರಾಜನನ್ನು ಬಹುಕಾಲದಿಂದ ನೋಡಬಯಸುತ್ತಿದ್ದರೂ, ಅವನು ಸಂತತಿಗೋಸ್ಕರ ಕಠಿನ ವ್ರತವನ್ನು ಆಚರಿಸುತ್ತಿದ್ದು ದರ್ಶನ ಕೊಡಲಾರನೆಂದು ಮಂತ್ರಿಗಳು ಸಮಾಧಾನ ಹೇಳುತ್ತಿದ್ದರು. ಸಣ್ಣ ದೀಪವನ್ನು ಗಾಳಿ ಕೊಂಡೊಯ್ಯುವಂತೆ ಕಾಲನು ಅಗ್ನಿವರ್ಣನ ಜೀವವನ್ನು ಅಪಹರಿಸಿದನು.

ಪ್ರತ್ಯುತ್ಪನ್ನಮತಿಗಳಾದ ಮಂತ್ರಿಗಳು ಮರಣವಾರ್ತೆ ಪುರಜನರಿಗೆ ತಿಳಿಯದಂತೆ ಗುಟ್ಟಾಗಿಟ್ಟರು. ರಾಜೋದ್ಯಾನದಲ್ಲಿ ರೋಗಶಾಂತಿಗೋಸ್ಕರ ಯಜ್ಞಮಾಡುವ ನೆಪದಿಂದ ಶವದಹನ ಮಾಡಿ ಉತ್ತರಕ್ರಿಯೆಗಳು ಯಥಾವಿಧಿ ನೆರವೇರಿದುವು.

ರಾಣಿಯರಲ್ಲಿ ಒಬ್ಬಳು ಗರ್ಭಿಣಿಯಾಗಿರುವುದು ತಿಳಿದುಬಂತು. ಆಕೆಯೇ ಮುಂದಿನ ಅಧಿಕಾರಿಣಿಯೆಂದು ಮಂತ್ರಿಗಳು ನಿರ್ಣಯಿಸಿದರು. ರಾಜನ ಮರಣಕ್ಕೋಸ್ಕರ ಸುರಿಸಿದ ಕಣ್ಣೀರಿನಿಂದ ಗರ್ಭಕ್ಕೆ ಮೊದಲ ಅಭಿಷೇಕವಾದಂತಾಯಿತು. ಅನಂತರ ಸುವರ್ಣಕಲಶಗಳಿಂದ ತೀರ್ಥೋದಕವನ್ನು ತಂದು ಪುರೋಹಿತರೂ ಮಂತ್ರಿಗಳೂ ಅಭಿಷೇಕ ಮಾಡಿದರು.

ರಾಣಿ ತನ್ನ ಗರ್ಭದಿಂದ ಕುಲೋದ್ಧಾರಕನು ಜನಿಸುವನೆಂಬ ವಿಶ್ವಾಸದಿಂದ ಕುಲಪದ್ಧತಿಗೆ ನ್ಯೂನತೆ ಬಾರದಂತೆ ರಾಜ್ಯವಾಳಿದಳು. ಜನಿಸುವ ರಾಜಪುತ್ರನು ದೇಶೋದ್ಧಾರಕನಾಗಲೆಂದು ಎಲ್ಲರೂ ತ್ರಿಕರಣಗಳಿಂದ ಹಾರಯಿಸುತ್ತಿದ್ದರು.

ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ
ಹೈಸ್ಕೂಲು ಕ್ಲಾಸುಗಳಿಗೆ ಉಪಪಠ್ಯವಾಗಿ ಮಂಜೂರಾತಿಯನ್ನು
ಪಡೆದ ನಮ್ಮ ಇತರ ಪ್ರಕಟನೆಗಳು

—೦೦೦—

ನೂತನ ಸರಸ ಸಾಮಾಜಿಕ ಕಾದಂಬರಿ

ದೇವತಾಮನುಷ್ಯ

ಬರೆದವರು:– ಶ್ರೀ। ಕಡೆಂಗೋಡ್ಲು ಶಂಕರ ಭಟ್ಟರು

ದ್ವಿತೀಯ ಮುದ್ರಣ – ಬೆಲೆ ೨—೪—೦

•

ಶುಚಿಯೂ ಸುಂದರವೂ ಆದ ಗದ್ಯರಚನೆಗೆ ಆದರ್ಶವಾದ
ನಾಲ್ಕು ಸಣ್ಣ ಕಥೆಗಳ ಸಮುಚ್ಚಯ—ಮದ್ರಾಸು ಸರಕಾರದಿಂದ
ಬಹುಮಾನಿಸಲ್ಪಟ್ಟದ್ದು

ಪಳಮೆಗಳು

ಬರೆದವರು: ಶ್ರೀ। ಸೇಡಿಯಾಪು ಕೃಷ್ಣ ಭಟ್ಟರು

ತೃತೀಯ ಮುದ್ರಣ – ಬೆಲೆ ೦—೧೪—೦

•

ರಾಘವಾಂಕ ಕವಿಯ ಹರಿಶ್ಚಂದ್ರ ಕಾವ್ಯದ ಸಂಕ್ಷಿಪ್ತ ಗದ್ಯಾನುವಾದ

ಸತ್ಯವಿಜಯ

ಬರೆದವರು: ಶ್ರೀ। ಎದುರ್ಕಳ ಶಂಭು ಭಟ್ಟರು

ದ್ವಿತೀಯ ಮುದ್ರಣ – ಬೆಲೆ ೦—೧೨—೦

•

ದಿ ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಡ್ ಏಜನ್ಸೀಸ್
:: ಕಾರ್ನಾಡು ಸದಾಶಿವರಾವ್ ರಸ್ತೆ, ಮಂಗಳೂರು ::

ಹರಾಮಾಶ್ಚೇಗಾಣಿ